# ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ




ಸಂಪುಟ 14 | ಸಂಚಿಕೆ 21 | ಮೇ 18-24, 2020 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

# ಮಹಾಮಾರಿ ಕಾಲದ ಸರ್ವಾಧಿಕಾರ ಶಾಹಿ







## ಜೀತದಾಳುಗಳನ್ನು ಸೃಷ್ಟಿಸುವ ಸರ್ಕಾರಗಳು










## 2 ಲಕ್ಷ ಕೋಟಿಗಳ ಕೋವಿಡ್ ಜುಮ್ಲಾ

## ಆನ್-ಲೈನ್ ಶಿಕ್ಷಣ ಗಾಳಿಯಲ್ಲಿ ಗೋಪುರ?



## ಭಾರತದಲ್ಲಿ 1918ರ ಸ್ಪಾನಿಷ್ ಫ್ಲೂ



## ರಾಷ್ಟ್ರಪತಿಗಳಿಗೆ ಎಂಟು ರಾಜಕೀಯ ಪಕ್ಷಗಳ ಮುಖಂಡರ ಪತ್ರ

# "ಪ್ರತಿಭಟನಾಕಾರರು ಮತ್ತು ರಾಜಕೀಯ ಭಿನ್ನಮತದ ವಿರುದ್ಧ ಪ್ರತೀಕಾರದ ರಾಜಕೀಯ ನಿಲ್ಲಲಿ"

ಪ್ರತಿಪಕ್ಷಗಳ ಮುಖಂಡರು ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರನ್ನು ತಕ್ಷಣವೇ ಬಿಡುಗಡೆ ಮಾಡಬೇಕು, ಪ್ರತಿಭಟನಾಕಾರರು ಮತ್ತು ಭಿನ್ನಮತ ಹೊಂದಿರುವವರ ವಿರುದ್ಧ ಪ್ರತೀಕಾರದ ರಾಜಕೀಯುವನ್ನು ಕೊನೆಗೊಳಿಸಬೇಕು ಎಂದು ಆಗ್ರಹಿಸಿ ಎಂಟು ರಾಜಕೀಯ ಪಕ್ಷಗಳ ಮುಖಂಡರು ರಾಷ್ಟ್ರಪತಿಗಳಿಗೆ ಒಂದು ಪತ್ರ ಬರೆದಿದ್ದಾರೆ.

ಜನಗಳ ಆವಶ್ಯಕತೆಗಳನ್ನು ಪೂರೈಸುತ್ತ ಕೊವಿಡ್–19 ಮಹಾಮಾರಿಯನ್ನು ಪರಿಣಾಮಕಾರಿಯಾಗಿ ನಿಭಾಯಿಸುವುದರ ಮೇಲೆ ಏಕಾಗ್ರತೆಯಿಂದ ಗಮನ ಕೇಂದ್ರೀಕರಿಸುವುದು ಕೇಂದ್ರ ಸರಕಾರದ ಆದ್ಯತೆಯಾಗಿರಬೇಕಿರುವ ಸಮಯದಲ್ಲಿ, ಕೋಟ್ಯಂತರ ವಲಸೆ ಕಾರ್ಮಿಕರು ಮತ್ತು ಇತರರು ಶೋಚನೀಯ ಸ್ಥಿತಿಯಲ್ಲಿರುವವರಿಗೆ ಅದು ಏನ್ನೂ ಮಾಡಿಲ್ಲ. ಬದಲಿಗೆ, ಅಧ್ಯಯನಕಾರರನ್ನು, ಕಾರ್ಯಕರ್ತರನ್ನು, ಮಹಿಳೆಯರು ಮತ್ತು ವಿದ್ಯಾರ್ಥಿಗಳನ್ನು ಜೈಲಿಗಟ್ಟುತ್ತಿದೆ ಅವರ ಆರೋಗ್ಯ ಮತ್ತು ಸುರಕ್ಷತತೆಗೆ ಗಂಭೀರ ಅಪಾಯವೊಡ್ಡುತ್ತಿದೆ ಎಂಬುದರ ಉದಾಹರಣೆಗಳನ್ನು ಕೊಡುತ್ತ, ಇದು ಆಘಾತಕಾರಿ ಸಂಗತಿ ಎಂದು ಈ ಮುಖಂಡರು ರಾಷ್ಟ್ರಪತಿಗಳ ಗಮನಕ್ಕೆ ಅವರ ಹೆಸರಿನಲ್ಲಿ ಅಧಿಕಾರ ನಡೆಸುತ್ತಿರುವ ಸರಕಾರದ ವರ್ತನೆಗಳನ್ನು ಈ ಪತ್ರದಲ್ಲಿ ತಂದಿದ್ದಾರೆ.

ಸೀತಾರಾವ್ ಯೆಚುರಿ, ಡಿ.ರಾಜ, ದೀಪಂಕರ್ ಭಟ್ಟಾಚಾರ್ಯ, ದೇಬಬ್ರತ ಬಿಸ್ವಾಸ್, ಮನೋಜ್ ಭಟ್ಟಾಚಾರ್ಯ ಮತ್ತು ಶರದ್ ಯಾದವ್, ಅನುಕ್ರಮವಾಗಿ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್)–ಎಲ್, ಎಐಎಫ್‌ಬಿ, ಆರ್.ಎಸ್.ಪಿ. ಮತ್ತು ಎಲ್.ಜೆ.ಡಿ.ಯ ಪ್ರಧಾನ ಕಾರ್ಯದರ್ಶಿಗಳು, ಹಾಗೂ ಆರ್.ಜೆ.ಡಿ.ಯ ಸಂಸತ್ ಸದಸ್ಯ ಮನೋಜ್ ಝಾ ಮತ್ತು ವಿಸಿಕೆ ಅಧ್ಯಕ್ಷರು ಮತ್ತು ಸಂಸತ್ ಸದಸ್ಯ ಡಾ. ಥೋಲ್ ತಿರುಮಾವಳವನ್ ಈ ಪತ್ರಕ್ಕೆ ಸಹಿ ಹಾಕಿರುವ ಮುಖಂಡರು. ಈ ಪತ್ರದ ಪೂರ್ಣ ಪಾಠ ಹೀಗಿದೆ:

ಪ್ರಿಯ ರಾಷ್ಟ್ರಪತಿಯವರೇ,

ನಾವು, ದೇಶ ಮತ್ತು ಜನತೆ ಕೊವಿಡ್–19 ಮಹಾಮಾರಿಯನ್ನು ಎದುರಿಸುತ್ತಿರುವ ಸಮಯದಲ್ಲಿ ಕರಾಳ ಯುಎಪಿಎ ಅಡಿಯಲ್ಲಿ ವಿದ್ಯಾರ್ಥಿಗಳು ಮತ್ತು ಕಾರ್ಯಕರ್ತರುಗಳ ಬಂಧನಸತ್ರ ನಡೆಸಿರುವ ಬಗ್ಗೆ ಆತಂಕ ಮತ್ತು ಖಂಡನೆಯನ್ನು ವ್ಯಕ್ತಪಡಿಸಲು ಈ ಪತ್ರವನ್ನು ನಿಮಗೆ ಬರೆಯುತ್ತಿದ್ದೇವೆ.

ಇದು ದೇಶದ ಎಲ್ಲೆಡೆಗಳಲ್ಲಿ ಮತ್ತು ಜಗತ್ತಿನಾದ್ಯಂತ ಜನಗಳು ತಮ್ಮ ಯೋಗಕ್ಷೇಮದ ಬಗ್ಗೆ ಹಾಗೂ ತಮ್ಮ ಪ್ರಿಯಜನಗಳ ಸುರಕ್ಷಿತತೆಯ ಬಗ್ಗೆ ಭಯ ಮತ್ತು ಅನಿಶ್ಚಿತತೆಯನ್ನು ಅನುಭವಿಸುತ್ತಿರುವ ಸಮಯವಾಗಿದೆ. ಜನಗಳ ಆವಶ್ಯಕತೆಗಳನ್ನು ಪೂರೈಸುತ್ತ ಈ ಮಹಾಮಾರಿಯನ್ನು ಪರಿಣಾಮಕಾರಿಯಾಗಿ ನಿಭಾಯಿಸುವುದರ ಮೇಲೆ ಏಕಾಗ್ರತೆಯಿಂದ ಗಮನ ಕೇಂದ್ರೀಕರಿಸುವುದು ಕೇಂದ್ರ ಸರಕಾರದ ಆದ್ಯತೆಯಾಗಿರಬೇಕು. ನಿಮ್ಮ ಸರಕಾರದ ಆದ್ಯತೆ ಈಗ ಎದ್ದು ಬಂದಿರುವ ಕೋಟ್ಯಂತರ ಜನಗಳ ಜೀವ ಮತ್ತು ಜೀವನೋಪಾಯಗಳನ್ನು ಬಾಧಿಸುವ ಸಮಸ್ಯೆಗಳನ್ನು ನಿಭಾಯಿಸುವುದಾಗಿರ ಬೇಕಾಗಿದೆ. ವಲಸೆ ಕಾರ್ಮಿಕರ ಪಾಡು ಶೋಚನೀಯವಾಗಿದೆ. ಅವರಲ್ಲಿ ಹಲವರು ಹಸಿವು, ಆಯಾಸದಿಂದ ಪ್ರಾಣ ಕಳಕೊಂಡಿದ್ದಾರೆ, ಮನೆ ತಲುಪಲು ಕಿಲೋಮೀಟರುಗಳಷ್ಟು ನಡೆದಿದ್ದಾರೆ. ಇಂತಹ ಜನಗಳಿಗೆ ಪರಿಹಾರ ಮತ್ತು ರೇಷನ್‌ಗಳನ್ನು ಕೊಡಲು ಕೇಂದ್ರ ಸರಕಾರ ಏನೇನೂ ಮಾಡಿಲ್ಲ.

ಜಗತ್ತಿನಲ್ಲಿ ಹಲವು ದೇಶಗಳು ಸೆರೆಮನೆಗಳಲ್ಲಿ ಕೊವಿಡ್–19 ಹರಡದಂತೆ ತಡೆಯಲು ಸೆರೆಯಾಳುಗಳನ್ನು ಬಿಡುಗಡೆಗೊಳಿಸುವ ಪ್ರಯತ್ನದಲ್ಲಿದ್ದಾರೆ. ಭಾರತದಲ್ಲಿಯೂ, ಸುಪ್ರಿಂ ಕೋರ್ಟ್ ಸೆರೆಮನೆಗಳಲ್ಲಿ ಜನಸಂದಣಿಯನ್ನು ಕಡಿಮೆ ಮಾಡಲು ಸೆರೆಯಾಳುಗಳನ್ನು ಜಾಮೀನು ಅಥವ ಪೆರೊಲ್ ಮೇಲೆ ಬಿಡುಗಡೆ ಮಾಡಲು ಸಲಹೆ ನೀಡಿದೆ. ಮುಂಬೈಯ ಅರ್ಥರ್ ರೋಡ್ ಸೆರೆಮನೆಯಲ್ಲಿನ ಸನ್ನಿವೇಶ ಇಂತಹ ಅಪಾಯಗಳಿಗೆ ಒಂದು ಸಾಕ್ಷಿಯಾಗಿದೆ.

ದೈಹಿಕವಾಗಿ ಅಸಮರ್ಥರಾಗಿರುವ, ಗಂಭೀರ ವೈದ್ಯಕೀಯ ಪರಿಸ್ಥಿತಿಗಳಲ್ಲಿರುವ ಡಾ.ಜಿ.ಎನ್. ಸಾಯಿಬಾಬ ಮತ್ತಿತರರಿಗೂ ಅರ್ಹ ವೈದ್ಯಕೀಯ ಶುಶ್ರೂಷೆ ಪಡೆಯಲು ಬಿಡುತ್ತಿಲ್ಲ.

ಇಂತಹ ಒಂದು ಸಮಯದಲ್ಲಿ ಭಾರತ ಸರಕಾರ ಅಧ್ಯಯನಕಾರರನ್ನು, ಕಾರ್ಯಕರ್ತರನ್ನು, ಮಹಿಳೆಯರು ಮತ್ತು ವಿದ್ಯಾರ್ಥಿಗಳನ್ನು ಜೈಲಿಗಟ್ಟುತ್ತಿರುವುದು, ಅವರ ಆರೋಗ್ಯ ಮತ್ತು ಸುರಕ್ಷತತೆಗೆ ಗಂಭೀರ ಅಪಾಯವೊಡ್ಡುತ್ತಿರುವುದು ಆಘಾತಕಾರಿ ಸಂಗತಿ.

* ದಿಲ್ಲಿಯಲ್ಲಿ, ನೇರವಾಗಿ ಗೃಹ ಮಂತ್ರಾಲಯದ ಅಡಿಯಲ್ಲಿರುವ ಪೋಲೀಸರು ಸಂಪೂರ್ಣವಾಗಿ ಶಾಂತಿಯುತವಾಗಿದ್ದ ಸಿಎಎ–ವಿರೋಧಿ ಆಂದೋಲನದಲ್ಲಿ ತೊಡಗಿದ್ದ ಮಹಿಳೆಯರೂ ಸೇರಿದಂತೆ ಪ್ರಮುಖ ಕಾರ್ಯಕರ್ತರನ್ನು ದಿಲ್ಲಿಯ ಕೋಮುವಾದಿ ಹಿಂಸಾಚಾರಕ್ಕೆ ತಳುಕು ಹಾಕುವ ಸಂಪೂರ್ಣವಾಗಿ ಸೃಷ್ಟಿಸಿಕೊಂಡ ಆಪಾದನೆಗಳ ಮೇಲೆ ಕರಾಳ ಯುಎಪಿಎ ಅಡಿಯಲ್ಲಿ ಬಂಧಿಸುತ್ತಿದ್ದಾರೆ. ಜತೆಗೆ, ಸ್ಪೆಷಲ್ ಬ್ರಾಂಚಿನವರು ಹತ್ತಾರು ವಿದ್ಯಾರ್ಥಿಗಳನ್ನು ವಿಚಾರಣೆಗೆಂದು ಕರೆದು ಬೆದರಿಸುತ್ತಿದ್ದಾರೆ. ಜೆಎನ್‌ಯುನಲ್ಲಿನ ಹಿಂಸಾಚಾರಕ್ಕೆ ಒಳಗಾದವರ ಮೇಲೆ ಗುರಿಯಿಡಲಾಗಿದೆ, ಆದರೆ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳ ಮೇಲೆ ಹಿಂಸಾಚಾರ ನಡೆಸಿದ ಹೊರಗಿನವರಲ್ಲಿ ಒಬ್ಬರನ್ನೂ ಬಂಧಿಸಿಲ್ಲ. ನಿರ್ದಿಷ್ಟ ಸಮುದಾಯಗಳ ಜನರ ಮೇಲೇ ಗುರಿಯಿಡಲಾಗುತ್ತಿದೆ, ಅದೇ ವೇಳೆಗೆ, ಕೋಮು ದ್ವೇಷದಿಂದ ತುಂಬಿದ ಹಿಂಸಾಚಾರವನ್ನು ನಡೆಸಿದ್ದಾರೆಂಬುದು ವಿವಿಧ ವೀಡಿಯೋ ರೆಕಾರ್ಡಿಂಗ್‌ಗಳಲ್ಲಿ ಸಾಬೀತಾಗಿರುವ ಮಂದಿ, ಆಳುವ ಪಕ್ಷದ ಪ್ರಮುಖ ಮುಖಂಡರೂ ಸೇರಿದಂತೆ, ಯಾವುದೇ ಶಿಕ್ಷೆಯ ಭಯವಿಲ್ಲದೆ ಅಡ್ಡಾಡುತ್ತಿದ್ದಾರೆ ಎಂಬುದೂ ಆಘಾತಕಾರಿ.

* ಈಶಾನ್ಯ ದಿಲ್ಲಿಯಲ್ಲಿ ಕೋಮುವಾದಿ ಹಿಂಸಾಚಾರದಲ್ಲಿ ಪೋಲೀಸರ ಶಾಮೀಲಿನ ಸಾಕ್ಷ್ಯ ಮೇಲ್ನೋಟಕ್ಕೇ ಕಾಣುತ್ತಿದ್ದರೂ ಮತ್ತು ಅಲ್ಪಸಂಖ್ಯಾತರ ಪ್ರದೇಶಗಳಲ್ಲಿ ದಾಳಿ ಮಾಡುತ್ತಿರುವ ದೊಂಬಿಕೋರರನ್ನು ವೀಡಿಯೋಗಳಲ್ಲಿ ಗುರುತಿಸಬಹುದಾಗಿದ್ದರೂ, ದಿಲ್ಲಿ ಪೋಲೀಸ್ ಮುಸ್ಲಿಂ ಯುವಕರನ್ನು ಏಕಪಕ್ಷೀಯವಾಗಿ ಬಂಧಿಸುತ್ತಿದೆ, ಅಲ್ಪಸಂಖ್ಯಾತರನ್ನು ಮಾತ್ರವೇ ವಿಚಾರಣೆಗೆ ಗುರಿಪಡಿಸುತ್ತಿದೆ, ಈ ಮೂಲಕ ಅವರಲ್ಲಿ ಅಭದ್ರತೆಯ ಭಾವವನ್ನು ಸೃಷ್ಟಿಸುತ್ತಿದೆ.

ಭೀಮಾ ಕೊರಗಾಂವ್ ಪ್ರಕರಣದಲ್ಲಿ ಸುಧಾ ಭಾರದ್ವಾಜ್ ಮತ್ತಿತರ ಕಾರ್ಯಕರ್ತರನ್ನು ಯಾವುದೇ ಸಾಕ್ಷ್ಯವಿಲ್ಲದೆ ಇನ್ನೂ ಬಂಧನದಲ್ಲೇ ಮುಂದುವರೆಸುತ್ತಿದ್ದರೂ, ಅದೇ ಕೇಸಿನಲ್ಲಿ ಆನಂದ ತೆಲ್ತುಂಬ್ಡೆ ಮತ್ತು ಗೌತಮ್ ನವ್ಲಖರನ್ನು ಬಂಧಿಸಿರುವುದು, ನಾಗರಿಕ ಸ್ವಾತಂತ್ರ್ಯಗಳನ್ನು ಹೇಗೆ ತುಳಿದು ಹಾಕಲಾಗುತ್ತಿದೆ ಎಂಬುದಕ್ಕೆ ಇನ್ನೊಂದು ಆಘಾತಕಾರೀ ಉದಾಹರಣೆ.

* ಕಾಶ್ಮೀರದಲ್ಲಿ ಮಾಜಿ ಮುಖ್ಯಮಂತ್ರಿ ಮೆಹಬೂಬ ಮುಫ್ತಿಯವರನ್ನು ಇನ್ನೂ ಬಂಧಿಸಿಟ್ಟಿರುವುದು ಖಂಡನೀಯ. ಅದೇ ರೀತಿಯಲ್ಲಿ ಕಾಶ್ಮೀರದ ಬಂಧಿತರನ್ನು ದೇಶದ ಹಲವೆಡೆಗಳಲ್ಲಿ ಸೆರೆಯಲ್ಲಿ ಇಟ್ಟಿರುವುದು ಕೂಡ ಖಂಡನೀಯ.

* ಶ್ರೀ ಲಾಲೂ ಪ್ರಸಾದ್ ಯಾದವ್ ರನ್ನು ಅವರ ಅನಾರೋಗ್ಯದ ಹೊರತಾಗಿಯೂ ಮತ್ತು ಕಠಿಣ ಪರಿಸ್ಥಿತಿಗಳಲ್ಲಿ ಬಂಧಿಸಿಟ್ಟಿರುವ ಸರಕಾರದ ಪ್ರತೀಕಾರದ ಮನೋಭಾವ ಖಂಡನೀಯ.

ನಾವು, ಸರಕಾರ ಈ ದಾರಿಯನ್ನು ಬದಲಿಸಬೇಕು, ಪ್ರತಿಪಕ್ಷಗಳ ಮುಖಂಡರನ್ನು ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕು ಮತ್ತು ದೇಶ ಹಾಗೂ ಜನತೆ ಕೊವಿಡ್ ಮಹಾಮಾರಿಯನ್ನು ಎದುರಿಸುವಲ್ಲಿ ಐಕ್ಯತೆಯಿಂದಿರಬೇಕಾದ ಸಮಯದಲ್ಲಿ ಪ್ರತಿಭಟನಾಕಾರರು ಮತ್ತು ರಾಜಕೀಯ ಭಿನ್ನಮತ ಹೊಂದಿರುವವರ ವಿರುದ್ಧ ಪ್ರತೀಕಾರದ ರಾಜಕೀಯವನ್ನು ನಿಲ್ಲಿಸಬೇಕು ಎಂದು ತಮ್ಮನ್ನು ಆಗ್ರಹಿಸುತ್ತೇವೆ.

# ಜನ–ವಿರೋಧಿ, ಪ್ರತಿಗಾಮಿ "ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ, 2020"

**ಮೋದಿ ಸರಕಾರದ ಪ್ರಸ್ತಾವಿತ "ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ, 2020" ವಿದ್ಯುತ್ ವಲಯದ ಸಂಪೂರ್ಣ ಖಾಸಗೀಕರಣಕ್ಕಾಗಿಯೇ ರೂಪಿಸಿರುವ ಮಸೂದೆ, ಇದನ್ನು ವಿರೋಧಿಸುತ್ತೇವೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.**

ಇದು ಅಧಿಕಾರವನ್ನು ಸಂಪೂರ್ಣವಾಗಿ ಕೇಂದ್ರೀಕರಿಸುವ, ನಮ್ಮ ಸಂವಿಧಾನದ ಒಕ್ಕೂಟ ತತ್ವದ ಮೆಲೆ ಮುಖಾಮುಖಿ ದಾಳಿ ಮಾಡಿರುವ ಒಂದು ಪ್ರಸ್ತಾವ. ವಿದ್ಯುಚ್ಛಕ್ತಿ ನಮ್ಮ ಸಂವಿಧಾನದ ಸಮವರ್ತಿ ಪಟ್ಟಿಯಲ್ಲಿದೆ. ಆದ್ದರಿಂದ ವಿದ್ಯುಚ್ಛಕ್ತಿ ಉತ್ಪಾದನೆ, ವಿತರಣೆ ಮತ್ತು ನಿಯಂತ್ರಣದಲ್ಲಿ ಹಾಗೂ ಜನಗಳ ಮೇಲೆ ಅವರ ಆರ್ಥಿಕ ಸ್ಥಾನಮಾನ ಮತ್ತು ವೃತ್ತಿಯ ಆಧಾರದಲ್ಲಿ ಎಷ್ಟು ದರಗಳನ್ನು ನಿರ್ಧರಿಸಬೇಕು ಎಂಬುದರಲ್ಲಿ ರಾಜ್ಯಗಳು ಒಂದು ಸಮಾನ ಜವಾಬ್ದಾರಿ ಮತ್ತು ಪಾತ್ರವನ್ನು ಹೊಂದಿವೆ. ಈ ಮಸೂದೆಯಲ್ಲಿ ರಾಜ್ಯಗಳ ಈ ಹಕ್ಕಿನ ಸಂಪೂರ್ಣ ನಿರಾಕರಣೆಯಾಗಿದೆ.

ರಾಜ್ಯಗಳು ವಿದ್ಯುತ್ ಖರೀದಿ ಮತ್ತು ಮಾರಾಟ ಒಪ್ಪಂದಗಳು ಹಾಗೂ ಕಾಂಟ್ರಾಕ್ಟ್‌ಗಳನ್ನು ಕೊಡುವ ವ್ಯಾಪ್ತಿಯಿಂದ ಸಂಪೂರ್ಣವಾಗಿ ಹೊರಗಿಡಲ್ಪಡುತ್ತವೆ. ರಾಜ್ಯ ಮತ್ತು ಪ್ರಾದೇಶಿಕ ರವಾನೆ ಕೇಂದ್ರಗಳ ಕೆಲಸದ ಶೆಡ್ಯೂಲ್ ಮತ್ತು ವಿದ್ಯುತ್ ರವಾನೆ ಕೇಂದ್ರೀಯ ಪ್ರಾಧಿಕಾರದ ಹತೋಟಿಗೆ ಬರುತ್ತವೆ. ಇದು ರಾಜ್ಯ ವಿದ್ಯುತ್ ಉತ್ಪಾದನಾ ನಿಗಮಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟು ಮಾಡುತ್ತವೆ. ರಾಜ್ಯ ವಿದ್ಯುತ್ ಪೂರೈಕೆ ಕಂಪನಿಗಳು ಅನವಶ್ಯಕಗೊಳ್ಳುತ್ತವೆ, ಈ ಕೆಲಸಗಳು ಖಾಸಗಿ ಕಾಂಟ್ರಾಕ್ಟರುಗಳ ಮೂಲಕ ನಡೆಯುತ್ತವೆ. ಈಗಗಿರುವಂತೆ, ಶ್ರೀಮಂತರು ಮತ್ತು ಸಂಪತ್ತಿರುವವರಿಂದ ಹೆಚ್ಚಿನ ದರವನ್ನು ವಸೂಲಿ ಮಾಡಿ ಬಡ ಮತ್ತು ನೆರವಿನ ಅಗತ್ಯವಿರುವವರಿಗೆ ಕಡಿಮೆ ದರಗಳಲ್ಲಿ ಪೂರೈಸುವುದನ್ನು ಸಾಧ್ಯಗೊಳಿಸುವ ಪದ್ಧತಿಯನ್ನು ಕೈಬಿಟ್ಟು "ಎಲ್ಲರೂ" ತೆರಬೇಕಾದ ದರಪಟ್ಟಿಯನ್ನು ನಿರ್ಧರಿಸುವ ವ್ಯವಸ್ಥೆ ಬರುತ್ತದೆ.

ಸದ್ಯಕ್ಕೆ, ಹಲವು ರಾಜ್ಯಗಳಲ್ಲಿ ರೈತರು ಕೃಷಿ ಕೆಲಸಗಳಿಗೆ ಉಚಿತ ವಿದ್ಯುತ್ ಪಡೆಯುತ್ತಾರೆ. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು ಮತ್ತು ಸಣ್ಣ ಕೈಗಾರಿಕಾ ಘಟಕಗಳು ಕೂಡ ರಿಯಾಯಿತಿ ದರಗಳನ್ನು ಪಡೆಯುತ್ತಿವೆ. ಇವೆಲ್ಲವೂ ಹೋಗಿ ಬಿಡುತ್ತವೆ. ಇದರ ಅರ್ಥ ಕರ್ಷಕ ಸಂಕಷ್ಟ ಮತ್ತಷ್ಟು ಆಳಗೊಳ್ಳುತ್ತದೆ. ಮತ್ತು ಅತಿ ಹೆಚ್ಚು ಸಂಖ್ಯೆಯಲ್ಲಿ ಜನಗಳಿಗೆ ಉದ್ಯೋಗ ಒದಗಿಸಿರುವ ಅನೌಪಚಾರಿಕ ವಲಯ ಬದುಕುಳಿಯಲು ಅಸಮರ್ಥಗೊಳ್ಳುವ ಸ್ಥಿತಿಗೆ ತಲುಪುತ್ತದೆ.

ಇಂತಹ ಪ್ರತಿಗಾಮಿ ಮಸೂದೆಯನ್ನು ಕೂಡಲೆ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ, ಭಾರತೀಯ ಅರ್ಥವ್ಯವಸ್ಥೆ ಗಿರಕಿ ಹೊಡೆಯುವ ಸ್ಥಿತಿಯಲ್ಲಿರುವಾಗ ಮತ್ತು ಕೊವಿಡ್ ಮಹಾಮಾರಿಯ ವಿರುದ್ಧ ಸೆಣಸುತ್ತಿರುವಾಗ ಇಂತಹ ಸಂಪತ್ತುಳ್ಳವರ ಪರವಾಗಿರುವ ಮತ್ತು ಬಡವರ ಮೇಲೆ ಹೊರೆಯಾಗುವ ಪ್ರಸ್ತಾವಗಳನ್ನು ಒಪ್ಪಿಕೊಳ್ಳುವುದು ಸಾಧ್ಯವೇ ಇಲ್ಲ ಎಂದು ಹೇಳಿದೆ.

# "ದುಡಿಯುವ ಜನಗಳನ್ನು ಗುಲಾಮರಾಗಿಸುವ ಕ್ರೂರ ಅಮಾನುಷ ದಾಳಿ

## ಕೇಂದ್ರೀಯ ಕಾರ್ಮಿಕ ಸಂಘಗಳಿಂದ ಐಎಲ್‌ಒ ಗೆ ದೂರು, ರಾಷ್ಟ್ರವ್ಯಾಪಿ ಕಾರ್ಯಾಚರಣೆಯ ಯೋಚನೆ

ಒಂದೂವರೆ ತಿಂಗಳ ಲಾಕ್‌ಡೌನ್ ಪ್ರಕ್ರಿಯೆಯಲ್ಲಿ ಉದ್ಯೋಗ, ಆದಾಯ, ಸೂರು ಎಲ್ಲವನ್ನೂ ಕಳಕೊಂಡು ಅಮಾನವೀಯ ಸಂಕಟಗಳಿಗೆ, ಹಸಿವು, ಅವಮಾನಗಳಿಗೆ ಈಡಾಗಿರುವ ದೇಶದ ದುಡಿಯುವ ಜನಸಮೂಹಗಳಿಗೆ ಪರಿಹಾರ ಒದಗಿಸಬೇಕಾದ ಸರಕಾರ, ಅದರ ಬದಲು ತನ್ನ ವಿಷದ ಹಲ್ಲುಗಳು, ಪಂಜಗಳನ್ನು ತೆರೆದು ಎರಗುತ್ತಿದೆ, ಅವರನ್ನು ಗುಲಾಮರ ಮಟ್ಟಕ್ಕೆ ಇಳಿಸುತ್ತಿದೆ ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ರಾಷ್ಟ್ರೀಯ ಒಕ್ಕೂಟಗಳು ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿವೆ.

ಆರು ರಾಜ್ಯ ಸರಕಾರಗಳು ಕೊವಿಡ್ ಮಹಾಮಾರಿಯ ಸಮಯುವನ್ನು ದುರುಪಯೋಗಪಡಿಸಿಕೊಂಡು ಕಾರ್ಖಾನೆ ಕಾಯ್ದೆಯನ್ನು ಉಲ್ಲಂಘಿಸಿ ಕೆಲಸದ ಅವಧಿಯನ್ನು 8 ಗಂಟೆಗಳಿಂದ 12 ಗಂಟೆಗಳಿಗೆ ಹೆಚ್ಚಿಸಿದ ನಂತರ, ಎರಡನೇ ಘಟ್ಟದಲ್ಲಿ ಕಾರ್ಮಿಕ ಕಾನೂನುಗಳನ್ನೇ ವಜಾ ಮಾಡುವ ಕೆಲಸಕ್ಕೆ ಕೈಹಾಕಿವೆ. ಉತ್ತರಪ್ರದೇಶ ಸರಕಾರ ಮೂರು ವರ್ಷಗಳ ಕಾಲ ಇವನ್ನು ಅಮಾನತಿನಲ್ಲಿಡುವ ಸುಗ್ರೀವಾಜ್ಞೆಯನ್ನು ಹೊರಡಿಸಿದೆ, ಒಂದು ತಿಂಗಳಿಗೂ ಹೆಚ್ಚು ಕಾಲ ಸಂಪುಟವನ್ನೇ ರಚಿಸಲಾರದ ಸ್ಥಿತಿಯಲ್ಲಿದ್ದ ಮಧ್ಯಪ್ರದೇಶದ ಮುಖ್ಯಮಂತ್ರಿಗಳು 1000 ದಿನಗಳ ವರೆಗೆ ಅಮಾನತಿನಲ್ಲಿಡುವ ಮಾತಾಡಿದ್ದರೆ, ಗುಜರಾತ್ ಅದನ್ನು 1200ದಿನಗಳ ವರಗೂ ವಿಸ್ತರಿಸುವ ಸ್ಪರ್ಧೆಗಿಳಿದಿದೆ. ಇವೆಲ್ಲದಕ್ಕೂ ಕೇಂದ್ರ ಸರಕಾರದ ಆಶೀರ್ವಾದ ಇದೆಯೆಂಬುದರಲ್ಲಿ ಸಂದೇಹವಿಲ್ಲ.

ಈ ಎಲ್ಲ ನಡೆಗಳು ಒಂದು ಅಮಾನವೀಯ ಅಪರಾಧ ಮತ್ತು ದುಡಿಯುವ ಜನಗಳ ಮೇಲೆ ನಡೆಸಿರುವ ಅಮಾನುಷ ಕೃತ್ಯಗಳು ಎಂದು ಐಎನ್‌ಟಿಯುಸಿ, ಎಐಟಿಯುಸಿ, ಸಿಐಟಿಯು, ಹೆಚ್‌ಎಂಎಸ್, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಮತ್ತು ವಿವಿಧ ವಲಯಗಳ ರಾಷ್ಟ್ರೀಯ ಸಂಘಟನೆಗಳು ಒಂದು ಜಂಟಿ ಹೇಳಿಕೆಯಲ್ಲಿ ಬಲವಾಗಿ ಖಂಡಿಸಿವೆ.

ಇದು ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಒ)ಯ ಮೂಲ ಅಧಿನಿರ್ಣಯಗಳ ಉಲ್ಲಂಘನೆಯೂ ಆಗಿದೆ. ಆದ್ದರಿಂದ ಸರಕಾರದ ಈ ಕುಕೃತ್ಯಗಳ ವಿರುದ್ಧ ಐಎಲ್‌ಒಗೆ ದೂರು ನೀಡುವ ಬಗ್ಗೆ ಗಂಬೀರವಾಗಿ ಯೋಚಿಸುತ್ತಿರುವುದಾಗಿ ತಿಳಿಸಿರುವ ಈ ಜಂಟಿ ಹೇಳಿಕೆ ನೌಕರರು ಮತ್ತು ಕಾರ್ಮಿಕರಿಗೆ ತಮ್ಮ ಮೇಲೆ ಗುಲಾಮಿಕೆಯನ್ನು ಹೇರುವ ಈ ಹುನ್ನಾರದ ವಿರುದ್ಧ ದೇಶವ್ಯಾಪಿ ಪ್ರತಿರೋಧ ಹೋರಾಟಕ್ಕೆ ಸಿದ್ಧರಾಗಬೇಕು ಎಂದು ಕರೆ ನೀಡಿದೆ. ರಾಜ್ಯಗಳಲ್ಲಿ ಈಗಾಗಲೇ ಕಾರ್ಮಿಕ ಸಂಘಟನೆಗಳು ಸ್ವತಂತ್ರವಾಗಿ ಐಕ್ಯ ಹೋರಾಟಗಳಿಗೆ ಇಳಿದಿದ್ದಾರೆ, ರಾಷ್ಟ್ರಮಟ್ಟದಲ್ಲಿಯೂ ಒಂದು ಕಾರ್ಯಾಚರಣೆಗೆ ಕರೆ ನೀಡಲಾಗುವುದು ಎಂದು ಈ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಹೇಳಿವೆ.

ಸಂಪಾದಕೀಯ

# ಸ್ವಾವಲಂಬನೆಯಲ್ಲ–ಶರಣಾಗತಿ!

ಮೋದಿ ಆಡಳಿತದಲ್ಲಿ ಕೊರೊನಾ ಹಾವಳಿ ಹೆಚ್ಚುತ್ತಲೇ ಇದೆ. ಸೋಂಕಿತರ ಸಂಖ್ಯೆ 1 ಲಕ್ಷಕ್ಕೆ ಸಮೀಪಿಸುತ್ತಿದೆ. ಲಕ್ಷಾಂತರ ವಲಸೆ ಕಾರ್ಮಿಕರು ಇದುವರೆಗೂ ತಮ್ಮ ಊರುಗಳಿಗೆ ವಾಪಸ್ ಬಂದಿಲ್ಲ. ಕಳೆದ ಎರಡು ಮೂರು ತಿಂಗಳುಗಳ ಕಾಲ ಉದ್ಯೋಗ ಇಲ್ಲದೆ ಆದಾಯವಿಲ್ಲದೆ ಉಪವಾಸ ವನವಾಸ ಅನುಭವಿಸುತ್ತಿದ್ದಾರೆ ಕೂಲಿಕಾರರು. ಇಂತಹ ಸಂಕಷ್ಟದ ಸಮಯದಲ್ಲಿ ಪ್ರಧಾನಿ ಮೋದಿ ಘೋಷಿಸಿದ 20 ಲಕ್ಷ ಕೋಟಿ ರೂಪಾಯಿಗಳ ಪ್ಯಾಕೇಜ್ ತಮ್ಮ ನೆರವಿಗೆ ಬರಬಹುದು ನಷ್ಟಕ್ಕೀಡಾದ ರೈತರು, ಕಾರ್ಮಿಕರು, ಕೂಲಿಕಾರರು ಮತ್ತಿತರ ದುರ್ಬಲ ವರ್ಗಕ್ಕೆ ಸೇರಿದವರು ಭ್ರಮ ನಿರಸನಗೊಂಡಿದ್ದಾರೆ. ರೈತರ ಸಾಲ ಇದೊಂದು ಬಾರಿಯಾದರೂ ಮನ್ನಾ ಮಾಡಬಹುದೆಂದು ನಂಬಿದ ರೈತರಿಗೆ ಮೋಸವಾಗಿದೆ. ಕೆಲಸ ಕಳೆದುಕೊಂಡ ಲಕ್ಷಾಂತರ ಸಂಘಟಿತ ಮತ್ತು ಅಸಂಘಟಿತ ವಲಯದ ಕಾರ್ಮಿಕರಿಗೆ ಹೆಚ್ಚುವರಿ ವೇತನ ಮತ್ತು ಸೌಲಭ್ಯಗಳನ್ನು ನೀಡಬಹುದು ಎಂಬ ನಿರೀಕ್ಷೆ ಹುಸಿಯಾಗಿದೆ. ಈ ಪ್ಯಾಕೇಜ್‌ನಿಂದ ದೇಶವನ್ನು ಸ್ವಾವಲಂಬನೆಯತ್ತ ಮುನ್ನಡೆಸುವ ಬದಲಾಗಿ ಕಾರ್ಪೋರೇಟ್ ಕಂಪೆನಿಗಳಿಗೆ ದೇಶವನ್ನು ಲೂಟಿ ಮಾಡಲು ಬಾಗಿಲು ತೆರೆಯುವತ್ತ ಸಾಗಿದೆ. ಎಪಿಎಂಸಿ ಕಾಯ್ದೆ ತಿದ್ದುಪಡಿ ಇದಕ್ಕೊಂದು ತಾಜಾ ಉದಾಹರಣೆ.

ಹಿಂದೆಂದೂ ಕಂಡರಿಯದ ಭಯಂಕರ ಸಾಕ್ರಾಂಮಿಕ ರೋಗಕ್ಕೆ ಬಲಿಯಾಗಿ ಇಡೀ ದೇಶ ತತ್ತರಿಸುತ್ತಿರುವಾಗ ಜನತೆಯ ನೆರವಿಗೆ ಧಾವಿಸುವ ಬದಲು ನಮ್ಮ ಭಾಷಣ ಪ್ರಿಯ ಪ್ರಧಾನಿ ದೇಶದ ಕೃಷಿ ಮಾರುಕಟ್ಟೆಯನ್ನು ಕಾರ್ಪೋರೇಟ್ ಕಂಪೆನಿಗಳ ವಶಕ್ಕೆ ಒಪ್ಪಿಸಲು ಹೊರಟಿದ್ದಾರೆ. ಕಳೆದ ಎರಡು ದಶಕಗಳಿಂದ ಕೃಷಿ ರಂಗದ ಮೇಲೆ ಕಾರ್ಪೋರೇಟ್ ಕಂಪೆನಿಗಳ ಕಣ್ಣು ಬಿದ್ದಿತ್ತು. ಆದರೆ ದೇಶದ ಜನರ ವ್ಯಾಪಕ ವಿರೋಧದಿಂದಾಗಿ ಅದು ಸಾಧ್ಯವಾಗಿರಲಿಲ್ಲ. ಆದರೆ ಈಗ ಮಂಕುಬೂದಿ ನಾಯಕನ ಆಡಳಿತ ಬಂದಾಗಿನಿಂದ ದೇಶದ ದೊಡ್ಡ ಸಂಖ್ಯೆಯ ಮತದಾರರು ಮಂಕುಬೂದಿ ಪ್ರಭಾವಕ್ಕೆ ಒಳಗಾಗಿದ್ದಾರೆ. ಇವರ ಕುರುಡು ಬೆಂಬಲದ ಬಲದಿಂದ ದೇಶದ ಹಿತಕ್ಕೆ ವಿರುದ್ಧವಾದ ಕಾನೂನುಗಳು ಬರುತಿವೆ. ಅವುಗಳನ್ನು ಸಂಸತ್ತಿನಲ್ಲಿ ಚರ್ಚಿಸಿ ಅಂಗೀಕರಿಸುವ ಪರಿಪಾಠವನ್ನೂ ಕೈಬಿಡಲಾಗಿದೆ. ಮಾಧ್ಯಮಗಳು ಬಹುಪರಾಕ್ ಹೇಳುತ್ತಾ ಸಂಭ್ರಮಿಸುತ್ತಿವೆ. ಪ್ರಶ್ನಿಸುವವರನ್ನು ಬಂಧಿಸಲಾಗುತ್ತದೆ.

ಎಪಿಎಂಸಿಗಳಲ್ಲಿ ವರ್ತಕರಿಂದ, ದಲಾಲರಿಂದ ಮೋಸವಾಗುತ್ತಿರುತ್ತದೆ ಎಂಬ ಆರೋಪದಲ್ಲಿ ಸತ್ಯಾಂಶ ಇದೆ. ತೂಕದಲ್ಲಿ, ದರ ನಿಗದಿ ಪಡಿಸುವಲ್ಲಿ ರೈತರಿಗೆ ಅನ್ಯಾಯವಾಗುತ್ತಾ ಇದೆ. ಆದರೆ ಈ ದೋಷಗಳನ್ನು ಸರಿಪಡಿಸಲು ಎಪಿಎಂಸಿ ಕಾಯ್ದೆಯಲ್ಲೇ ಅವಕಾಶಗಳಿವೆ. ಅದಕ್ಕಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಅಗತ್ಯವಿಲ್ಲ. ಈ ತಿದ್ದುಪಡಿಯಿಂದಾಗಿ ಕೃಷಿ ಮಾರುಕಟ್ಟೆಗೆ ಧೈತ್ಯ ಕಾರ್ಪೋರೇಟ್ ಕಂಪೆನಿಗಳಿಗೆ ಪ್ರವೇಶ ಲಭ್ಯವಾಗಲಿದೆ. ಹೀಗಾಗುವುದರಿಂದ ಕೆಲ ಕಾಲದಲ್ಲೇ ಬೃಹತ್ ಬಂಡವಾಳ ಹೊಂದಿರುವ ಈ ಕಂಪೆನಿಗಳು ಇಡೀ ಕೃಷಿ ಮಾರುಕಟ್ಟೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲಿವೆ.

ಈ ನೂತನ ವ್ಯವಸ್ಥೆಯಿಂದ ರೈತರಿಗೆ ಒಳ್ಳೆಯ ಸ್ಪರ್ಧಾತ್ಮಕ ಬೆಲೆ ಸಿಗಲಿದೆ ಎಂಬ ಆಸೆ ಹುಟ್ಟಿಸಲಾಗುತ್ತದೆ. ಕೆಲಕಾಲ ಇದು ನಿಜವಾಗಲೂ ಬಹುದು. ರೈತರ ಬಳಿ ಬಂದು ಅವರು ಕೃಷಿ ಉತ್ಪನ್ನಗಳನ್ನು ಖರೀದಿ ಮಾಡಬಹುದು. ಆದರೆ ಇದೆಲ್ಲವು ಮಾರುಕಟ್ಟೆಯ ಮೇಲೆ ಆ ಕಂಪೆನಿಗಳಿಗೆ ನಿಯಂತ್ರಣ ಪ್ರಾಪ್ತವಾಗುವ ವರೆಗೆ ಮಾತ್ರ!

ನಮೋ ಸೂಚನೆಯ ಮೇರೆಗೆ ಯಡಿಯೂರಪ್ಪ ಸರ್ಕಾರ ಈ ರೈತ ವಿರೋಧಿ, ಜನವಿರೋಧಿ ಕಾನೂನು ಕ್ರಮಕ್ಕೆ ಮುಂದಾಗಿದೆ. ಕೃಷಿ ರಾಜ್ಯ ಪಟ್ಟಿಯಲ್ಲಿ ಬರುವಂತಹ ವಿಷಯ. ಕೇಂದ್ರ ಇದರಲ್ಲಿ ಮಧ್ಯ ಮೂಗು ತೂರುವುದು ಅಕ್ಷಮ್ಯ. ಆದರೆ ವಿಶ್ವ ಹಣಕಾಸು ಬಂಡವಾಳದ ಆಪ್ತನಾಗಿರುವ ನಮ್ಮ ಪ್ರಧಾನಿ ಅವರಿಗೋಸ್ಕರ ಏನು ಬೇಕಾದರೂ ಮಾಡಲು ಸಿದ್ಧ. ಅವರಿಗೆ ಅನುಕೂಲ ಮಾಡಲು ಕಾರ್ಮಿಕ ಕಾಯ್ದೆಗಳನ್ನೇ ಕಿತ್ತುಹಾಕಲು ಅವರು ಹಿಂಜರಿಯಲಾರರು. ಸದ್ಯಕ್ಕೆ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ರಾಜ್ಯ ಸರ್ಕಾರ ಹಿಂದಕ್ಕೆ ಪಡೆಯದಂತೆ ನಾಡಿನ ದೇಶಪ್ರೇಮಿ ಜನಗಳು ಒಂದಾಗಿ ಮುಂದಾಗಬೇಕು.

## ಸುಗ್ರೀವಾಜ್ಞೆ ಮೂಲಕ ರೈತ ಹಾಗೂ ಕಾರ್ಮಿಕರ ಬೆನ್ನಿಗೆ ಬಲವಾಗಿ ಇರಿದು, ಪ್ಯಾಕೇಜ್ ಮೂಲಕ ಅವರ ತುಟಿಗಳಿಗೆ ಜೇನು ಸವರುವ ಕೆಲಸ ಮಾಡಿದ ಯಡೆಯೂರಪ್ಪ – ಸಿಪಿಐಎಂ ಪ್ರತಿರೋಧ

ರೈತರು ಹಾಗೂ ನಾಡಿನ ಜನತೆಯ ತೀವ್ರ ಪ್ರತಿರೋಧದ ನಡುವೆಯೂ, ಎಪಿಎಂಸಿ ಕಾಯ್ದೆಗೆ ಸುಗ್ರೀವಾಜ್ಞೆಗಳನ್ನು ಹೊರಡಿಸುವ ಮೂಲಕ ರೈತರು ಮತ್ತು ಕಾರ್ಮಿಕರ ಹಾಗೂ ಒಟ್ಟಾರೆ ರಾಜ್ಯದ ಬೆನ್ನಿಗೆ ಇರಿದ ಮುಖ್ಯಮಂತ್ರಿ ಶ್ರೀ ಯಡೆಯೂರಪ್ಪ ಈ ಜನಗಳ ತುಟಿಗೆ ಜೇನು ಸವರುವ ಕೆಲಸವನ್ನು ಸಣಕಲು ಪ್ಯಾಕೇಜ್‌ಗಳ ಮೂಲಕ ಮಾಡಿದ್ದಾರೆಂದು, ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.

ಮಾತ್ರವಲ್ಲಾ, ನಾಚಿಕೆ ಇಲ್ಲದೇ ಕಾರ್ಪೋರೇಟ್ ಕಂಪನಿಗಳ ಪರವಾದ ತಮ್ಮ ಘನ ಕಾರ್ಯಗಳನ್ನು ಸುದ್ಧಿಗೋಷ್ಠಿಯ ಮೂಲಕ ಸಮರ್ಥಿಸಿ ಕೊಂಡಿದ್ದಾರೆಂದು ಕಟುವಾಗಿ ಠೀಕಿಸಿದೆ.

ಅದೇ ರೀತಿ, ಕಾರ್ಪೋರೇಟ್ ಹಾಗೂ ಬಂಡವಾಳದಾರರ ಪರವಾಗಿ ಕಾರ್ಮಿಕರನ್ನು ಎಥೇಚ್ಛವಾಗಿ ಲೂಟಿಗೊಳಪಡಿಸಲು ನೆರವಾಗುವ ಮತ್ತು ಕಾರ್ಮಿಕರನ್ನು 12 ತಾಸುಗಳ ಕಾಲ ದುಡಿಸಿಕೊಳ್ಳಲು ಬಿಡುವ ಸುಗ್ರೀವಾಜ್ಞೆಯನ್ನು ಹೊರಡಿಸುವ ಸಂಚನ್ನು ಸರಕಾರ ನಡೆಸಿದೆ.

ರಾಜ್ಯವನ್ನು ಆರ್ಥಿಕ ದುಸ್ಥಿತಿಯಿಂದ ಮೇಲೆತ್ತುವ ಬದಲು ಇಂತಹ ಕ್ರಮಗಳು ಅದನ್ನು ಮತಷ್ಟು ಪ್ರಪಾತಕ್ಕೆ ತಳ್ಳಲಿವೆ. ಇದರಿಂದ ರಾಜ್ಯವು ಕಾರ್ಪೋರೇಟ್ ಕಂಪನಿಗಳ ವ್ಯಾಪಕ ಲೂಟಿಗೊಳಗಾಗಲಿದೆ. ಇದೊಂದು ಜವಾಬ್ದಾರಿ ಹೀನ ನಡೆ ಯಾಗಿದೆ ಎಂದಿದೆ.

ಅದೇ ರೀತಿ, ಸರಕಾರ ಇವರ ಬೆನ್ನಿಗೆ ಇರಿದ ಸಂದರ್ಭದಲ್ಲಿಯೇ ಹಲವು ಕಂತುಗಳಲ್ಲಿ ಬಿಡುಗಡೆ ಮಾಡುತ್ತಿರುವ ಸಣಕಲು ಪ್ಯಾಕೇಜ್ ಗಳ ಮೂಲಕ ಅದನ್ನು ಮುಚ್ಚಿಕೊಳ್ಳುವ ಪ್ರಯತ್ನವಾಗಿದೆ. ಖಂಡಿತ ಈ ಸಣಕಲು ಪ್ಯಾಕೇಜ್ ಗಳ ಮೂಲಕ ಬಿಜೆಪಿಗೆ ಕೊಡಲಿರುವ ಅಗ್ಗದ ಪ್ರಚಾರವು, ಜನತೆಯಿಂದ ಈ ಇರಿತದ ನೋವನ್ನು ಮರೆ ಮಾಚವು ಎಂದು ಸರಕಾರವನ್ನು ಸಿಪಿಐಎಂ ಎಚ್ಚರಿಕೆ ನೀಡಿದೆ.

ರಾಜ್ಯ ಸರಕಾರ ಈ ಸುಗ್ರೀವಾಜ್ಞೆ ಯನ್ನು ತಕ್ಷಣವೇ ವಾಪಾಸು ಪಡೆಯ ಬೇಕು. ಕಾರ್ಮಿಕರನ್ನು ಲೂಟಿಗೊಳಪಡಿಸುವ ಸುಗ್ರೀವಾಜ್ಞೆ ಗೆ ಮುಂದಾಗಬಾರದು ಎಂದು ಸಿಪಿಐಎಂ ಒತ್ತಾಯಿಸಿದೆ.

ಹಣ್ಣು, ಹೂ, ತರಕಾರಿ ಮತ್ತಿತರೆ ಬೆಳೆಗಾರರ ನಡುವೆ ಯಾವುದೇ ವ್ಯತ್ಯಾಸ/ ತಾರತಮ್ಯ ತೋರದೇ, ಎಲ್ಲಾ ಬೆಳೆಗಾರರಿಗೂ ತಲಾ ಎಕರೆಗೆ ಬೆಳೆ ನಷ್ಟ ಪರಿಹಾರ ಕನಿಷ್ಠ 10,000 ರೂ. ಕೊಡಲೇಬೇಕು ಹಾಗೂ ನಷ್ಟಕ್ಕೀಡಾದ ಈ ಎಲ್ಲರ ಸಾಲಮನ್ನಾ ಮಾಡಬೇಕು.

ಎಲ್ಲಾ ಬಡವರಿಗೆ ಅಗತ್ಯ ಪಡಿತರದ ಸಮಗ್ರ ಕಿಟ್ ಒದಗಿಸಬೇಕು ಮತ್ತು ಮುಂದಿನ ಮೂರು ತಿಂಗಳ ಕಾಲ ಮಾಸಿಕ 7,500 ಸಹಾಯವನ್ನು ಘೋಷಿಸ ಬೇಕು. ಉದ್ಯೋಗ ಖಾತ್ರಿ ಕೆಲಸವನ್ನು ನಗರ ಹಾಗೂ ಗ್ರಾಮೀಣ ಪ್ರದೇಶಗಲೆರಡರಲ್ಲೂ ಕನಿಷ್ಠ 200 ದಿನಗಳ ಕಾಲ ಒದಗಿಸಬೇಕು. ಲಾಕ್ ಡೌನ್ ಅವಧಿಯ ಬಾಕಿ ವೇತನವನ್ನು ಎಲ್ಲ ಕಾರ್ಮಿಕರಿಗೆ ಒಂದೇ ಕಂತಿನಲ್ಲಿ ಒದಗಿಸುವಂತೆ ಸಿಪಿಐಎಂ.ಒತ್ತಾಯಿಸಿದೆ.

ರಾಜ್ಯದಾದ್ಯಂತ ಎಲ್ಲ ಕಾರ್ಮಿಕರು, ರೈತರು, ಕೂಲಿಕಾರರು, ನಾಗರೀಕರು ರಾಜ್ಯ ಸರಕಾರದ ಈ ದಬ್ಬಾಳಿಕೆಯ ವಿರುದ್ಧ ತೀವ್ರ ಪ್ರತಿಭಟನೆಯನ್ನು ನಡೆಸಲು ಕರೆ ನೀಡಿದೆ. ಸಿಪಿಐಎಂ ತನ್ನ ಘಟಕಗಳಿಗೆ ರಾಜ್ಯದಾದ್ಯಂತ ದಿನಾಂಕ 20.05.2020 ರಂದು ಪ್ರತಿಭಟನೆಯನ್ನು ಆಯೋಜಿಸಲು ಕರೆ ನೀಡಿದೆ.

*ಯು. ಬಸವರಾಜ, ಕಾರ್ಯದರ್ಶಿ (15–05–2020)*

## ವಿದ್ಯುತ್ ಕಂಪನಿಗಳಿಂದ ಹೆಚ್ಚುವರಿ ವಿದ್ಯುತ್ ಬಿಲ್ ವಸೂಲಿ ಹಾಗೂ ಗ್ರಾಹಕರ ಲೂಟಿ ತಡೆಯಲು ಕೋರಿ

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

ಮಾನ್ಯರೇ,

ಲಾಕ್ ಡೌನ್ ಅವಧಿಯಲ್ಲಿ ವಿದ್ಯುತ್ ಬಿಲ್ ಗಳನ್ನು ನೀಡದ ರಾಜ್ಯದ ವಿವಿಧ ವಿದ್ಯುತ್ ಕಂಪನಿಗಳು ಇದೀಗ ಕಳೆದೆರಡು ತಿಂಗಳ ಬಿಲ್ ಗಳನ್ನು ಒಟ್ಟಾಗಿ ನೀಡುತ್ತಿವೆ. ಹಾಗೆ ಎರಡೂ ತಿಂಗಳ ಬಿಲ್ ಒಂದೇ ಬಾರಿ ನೀಡುವಾಗ,ಎರಡೂ ತಿಂಗಳ ವಿದ್ಯುತ್ ಬಳಕೆಯ ಯುನಿಟ್ಟಳನ್ನು ಒಟ್ಟಿಗೆ ಪರಿಗಣಿಸಲಾಗುತ್ತಿದೆ. ಇದರಿಂದಾಗಿ, ಹೆಚ್ಚುವರಿ ಸ್ಲಾಬ್ ದರವನ್ನೂ ಗ್ರಾಹಕರು ನೀಡುವಂತಾಗಿದೆ ಸಾಮಾನ್ಯವಾಗಿ ಬರುತ್ತಿದ್ದ ಮಾಸಿಕ ವಾದ ವಿದ್ಯುತ್ ಬಿಲ್ ಗಿಂತಲೂ ಹೆಚ್ಚಿನ ಬಿಲ್ ಗ್ರಾಹಕರನ್ನು ಕಂಗಾಲಾಗಿಸಿದೆ. ಮಾಸಿಕ ಬಿಲ್ ಗಿಂತಲೂ ಹೆಚ್ಚಾಗಿ ಬಂದಿದೆ ಎಂದು ಗ್ರಾಹಕರು ದೂರುತ್ತಿದ್ದಾರೆ.

ಲಾಕ್ ಡೌನ್ ಅವಧಿಯಲ್ಲಿ ಸಂಕಷ್ಠ ಎದುರಿಸಿದ ಜನತೆಗೆ ನೆರವು ನೀಡಬೇಕಾದುದು ನ್ಯಾಯವಾಗಿದೆ, ಆದರೇ, ವಿದ್ಯುತ್ ಕಂಪನಿಗಳು ಸದರಿ ಸಂಕಷ್ಠದ ಸಂದರ್ಭದಲ್ಲಿ ಹೆಚ್ಚುವರಿ ಬಿಲ್ ವಸೂಲಿಗೆ ನಿಂತಿರುವುದು ಖಂಡನೀಯವಾಗಿದೆ.

ಆದ್ದರಿಂದ, ರಾಜ್ಯ ಸರಕಾರ ಕೂಡಲೇ ಮದ್ಯ ಪ್ರವೇಶಿಸಿ, ವಿದ್ಯುತ್ ಕಂಪನಿಗಳ ಹೆಚ್ಚುವರಿ ವಸೂಲಾತಿಯನ್ನು, ಗ್ರಾಹಕರ ಕೊಳ್ಳೆಯನ್ನು ತಡೆಯಲು ಮತ್ತು ಗ್ರಾಹಕರಿಂದ ಅದಾಗಲೇ ವಸೂಲಿ ಮಾಡಲಾದ ಮೊತ್ತವನ್ನು ವಾಪಾಸು ನೀಡುವಂತೆ ಅಗತ್ಯ ಕ್ರಮ ವಹಿಸಲು ವಿನಂತಿ.

*ಯು. ಬಸವರಾಜ, ಕಾರ್ಯದರ್ಶಿ (10–05–2020)*

## ಕಾರ್ಮಿಕ ಪ್ರಧಾನ ಕಾರ್ಯದರ್ಶಿ ವರ್ಗಾವಣೆ ತಡೆಯಲು ಕೋರಿ

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

ಮಾನ್ಯರೇ,

ಕೋವಿಡ್ ಪರಿಹಾರ ಕಾರ್ಯ ಕೈಗೊಳ್ಳುವಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದ್ದ ಕಾರ್ಮಿಕ ಇಲಾಖೆಯ ಪ್ರಧಾನ ಕಾಯದರ್ಶಿಗಳಾದ ಶ್ರೀ ಮಣಿವಣ್ಣನ್ ಅವರನ್ನು ರಾಜ್ಯ ಸರ್ಕಾರವು ಏಕಾಏಕಿ ವರ್ಗಾವಣೆ ಮಾಡಿರುವುದು ಸರಿಯಾದ ಕ್ರಮ ವಾಗಿರುವುದಿಲ್ಲವೆಂದು ಸಿಪಿಐಎಂ ರಾಜ್ಯ ಸಮಿತಿ ಖಂಡಿಸುತ್ತದೆ

ಉತ್ತರ ಪ್ರದೇಶ, ಗುಜರಾತ್, ಮಧ್ಯ ಪ್ರದೇಶ ರಾಜ್ಯಗಳಲ್ಲಿ ತಂದಿರುವ ಕಾರ್ಮಿಕ ಕಾನೂನುಗಳಿಂದ ಬಂಡವಾಳಗಾರರಿಗೆ ವಿನಾಯಿತಿ ನೀಡುವ ಕ್ರಮಗಳನ್ನು ಸುಗ್ರೀವಾಜ್ಞೆ ಹೊರಡಿಸುವ ಸರಕಾರದ ಕೈಂಕರ್ಯಕ್ಕೆ ಅನುವುಗೊಳಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ. ಮಹೇಶ್ವರ ರಾವ್ ಅವರಿಗೆ ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹೊಣೆಯನ್ನು ವಹಿಸಿದೆ.

ರಾಜ್ಯದ ಕಾರ್ಮಿಕರ ಹಿತಕ್ಕಿಂತ ಕಾರ್ಪೋರೇಟ್ ಬಂಡವಾಳದ ಹಿತವೇ ರಾಜ್ಯ ಸರ್ಕಾರಕ್ಕೆ ಮುಖ್ಯವಾಗಿದೆ ಎಂಬುದನ್ನು ಇದು ಮತ್ತೆ ಮತ್ತೆ ಸಾಬೀತು ಮಾಡಿದಂತಾಗಿದೆ.

ಏನಾದರು ಮಾಡಿ ಕಾರ್ಮಿಕ ಕಾನೂನುಗಳಿಂದ ಬಂಡವಾಳಗಾರರಿಗೆ ವಿನಾಯಿತಿ ನೀಡಲು ಕೋವಿಡ್ ಪರಿಹಾರವನ್ನು ಸಹಾ ಬಲಿಕೊಡಲು ರಾಜ್ಯ ಸರ್ಕಾರ ಹಿಂಜರಿಯದು ಎಂಬುದನ್ನು ಇದು ತೋರುತ್ತದೆ.

ತನ್ನ ಬಂಡವಾಳಗಾರರ ಪರ ನಿಲುಮೆಯ ಸಾಧನೆಗಾಗಿ ಒಬ್ಬ ದಕ್ಷ ಮತ್ತು ಕೋವಿಡ್ ಪರಿಹಾರ ಕಾರ್ಯವನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವಲ್ಲಿ ಯಶಸ್ಸು ಕಾಣುತ್ತಿದ್ದ ಅಧಿಕಾರಿಯನ್ನು ಬೆಂಬಲಿಸಿ ಪ್ರೋತ್ಸಾಹಿಸುವ ಬದಲು ಈ ವರ್ಗಾವಣೆಯು ಶಿಕ್ಷಿಸಿದಂತಾಗಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಠೀಕಿಸಿದೆ.

ಕೋವಿಡ್ ಲಾಕ್ಡೌನ್ ಸಂತ್ರಸ್ತರಿಗೆ ಪರಿಹಾರವನ್ನು ಪರಿಣಾಮಕಾರಿಯಾಗಿ ಮುಂದುವರಿಸಲು ಶ್ರೀ. ಮಣಿವಣ್ಣನ್ ವರ್ಗಾವಣೆಯನ್ನು ಕೂಡಲೆ ರದ್ದುಪಡಿಸಿ, ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ಅವರನ್ನೇ ಮುಂದುವರಿಸ ಬೇಕೆಂದು ಸಿಪಿಐ(ಎಂ) ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ.

*ಯು. ಬಸವರಾಜ, ಕಾರ್ಯದರ್ಶಿ (12–05–2020)*

# ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಬಂಧಿತರಾಗಿರುವ ಆನಂದ್ ತೇಲ್ತುಂಬ್ಡೆ ಮತ್ತಿತರ ಚಿಂತಕರ ಬಿಡುಗಡೆಗೆ ಒತ್ತಾಯಿಸಿ ಮೇ 16 ರ ರಾಷ್ಟ್ರೀಯ ನ್ಯಾಯದ ದಿನಕ್ಕೆ ಬೆಂಬಲ - ಸಮುದಾಯ ಕರ್ನಾಟಕ

ಭಾರತದ ಒಬ್ಬ ಪ್ರಮುಖ ವಿದ್ವಾಂಸರು. ಸಮಾಜಮುಖಿ ಚಿಂತಕರೂ, ಲೇಖಕರು ಹಾಗೂ ಮಾನವ ಹಕ್ಕುಗಳ ಪ್ರತಿಪಾದಕರೂ ಆದ ಡಾ. ಆನಂದ್ ತೇಲ್ತುಂಬ್ಡೆ ಯವರನ್ನು ಬಂಧಿಸಿ ಒಂದು ತಿಂಗಳಾಯಿತು. ಅವರ,ಹಾಗೆಯೇ ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಬಂಧಿತರಾದ ಇತರ ಚಿಂತಕರ ಜೊತೆ ನಾವಿದ್ದೇವೆ ಎಂದು ಸಾರಲು ಮೇ 16 ರಂದು ಆಚರಿಸಲ್ಪಡುವ ನ್ಯಾಯದ ದಿನ ಕ್ಕೆ ಸಮುದಾಯ ಕರ್ನಾಟಕವು ಬೆಂಬಲ ವ್ಯಕ್ತಪಡಿಸುತ್ತದೆ ಮತ್ತು ರಾಜ್ಯದ ಸಮುದಾಯದ ಎಲ್ಲ ಘಟಕಗಳಿಗೆ ವಿವಿಧ ಸ್ವರೂಪದಲ್ಲಿ ಪಾಲ್ಗೊಳ್ಳಲು ಕರೆ ನೀಡುತ್ತದೆ.

ದೇಶಕ್ಕೊಂದು ಜೀವಪರ ಸಂವಿಧಾನ ನೀಡುವಲ್ಲಿ ಮಹತ್ವದ ಪಾತ್ರವಹಿಸಿದ ಡಾ. ಬಿ.ಆರ್.ಅಂಬೇಡ್ಕರ್ ರವರ ಚಿಂತನೆಯನ್ನು ಮೈಗೂಡಿಸಿಕೊಂಡ ಡಾ. ಆನಂದ್ ತೇಲ್ತುಂಬ್ಡೆಯವರು ಜಾತಿ ಪದ್ಧತಿ ಅಸ್ಪೃಶ್ಯತೆಗಳ ವಿರುದ್ಧ ಧ್ವನಿ ಎತ್ತುತ್ತ ಬಂದವರು. ಕುರುಡು ಸಾಂಪ್ರದಾಯಿಕತೆಯನ್ನು ಪ್ರಶ್ನಿಸಿದವರು. ಈ ನೆಲದ ದಮನಿತ, ಶೋಷಿತ ಜನರ ಬಾಳಿಗೆ ಬೆಳಕಾಗಬೇಕಾಗಿದ್ದ ಸಂವಿಧಾನದ ಪರವಾಗಿ ಗಟ್ಟಿಯಾಗಿ ಮಾತನಾಡಿದವರು. ದುರಂತವೆಂದರೆ ದೇಶಕ್ಕೆ ಸಂವಿಧಾನ ಕೊಟ್ಟ ಅಂಬೇಡ್ಕರ್ ರವರ ಜನ್ಮ ದಿನದಂದೇ ಅವರನ್ನು ಯು.ಎ.ಪಿ.ಎ ಕಾಯ್ದೆಯಡಿ ಬಂಧಿಸಲಾಗಿದೆ. ಜಾಮೀನು ಕೂಡಾ ಸಿಗದ ಕರಾಳ ಕಾನೂನಿನ್ವಯ ಇವರನ್ನು ಬಂಧಿಸುವ ಮೂಲಕ ಮಾನವ ಹಕ್ಕುಗಳ ಪ್ರತಿಪಾದಕರ ಹಕ್ಕನ್ನೇ ಮೊಟಕುಗೊಳಿಸಲಾಗಿದೆ.

2018 ರ ಜನವರಿ 1 ರಂದು 'ಎಲ್ಗಾರ್ ಪರಿಷತ್' ಸಮಾವೇಶದಲ್ಲಿ ರಾಜಕೀಯ ಹಿಂಸೆಗೆ ಪ್ರಚೋದಿಸಿದರೆಂದು ಆರೋಪಿಸಿ ಅವರ ಮೇಲೆ ಮೊಕದ್ದಮೆ ಹೂಡಲಾಯಿತು. ವಾಸ್ತವಾಂಶವೇನೆಂದರೆ ಆ ಸಮಾವೇಶಕ್ಕೆ ಕಾರಣಾಂತರಗಳಿಂದ ಡಾ. ತೇಲ್ತುಂಬ್ಡೆಯವರು ಪಾಲ್ಗೊಂಡೇ ಇರಲಿಲ್ಲ ಮತ್ತು ಆ ಸಮಾವೇಶದ ಸಂದರ್ಭದಲ್ಲಿ ಅಲ್ಲಿ ಹಿಂಸಾ ಕೃತ್ಯವನ್ನು ನಿಜವಾಗಿಯೂ ನಡೆಸಿದ ಹಿಂದುತ್ವ ಕಾರ್ಯಕರ್ತರ ಮೇಲೆ ಪ್ರಕರಣವನ್ನೂ ದಾಖಲಿಸದೆ ಡಾ. ತೇಲ್ತುಂಬ್ಡೆ ಮತ್ತಿತರರ ಮೇಲೆ ದೂರು ದಾಖಲಿಸಿ ಜಾಮೀನು ರಹಿತ ಕಾಯ್ದೆಯಡಿ ಬಂಧಿಸಲಾಗಿದೆ.

ಡಾ. ಆನಂದ ತೇಲ್ತುಂಬ್ಡೆಯವರು ಭಾರತದ ಈ ಕಾಲದ ಸಾಮಾಜಿಕ ಚಿಂತಕರಲ್ಲಿ ಒಬ್ಬರು. ಡಾ. ಬಿ.ಆರ್.ಅಂಬೇಡ್ಕರ ಅವರ ಚಿಂತನೆಗಳನ್ನು ಸಮಕಾಲಿನಗೊಳಿಸುವಲ್ಲಿ ಅವರ ಪಾತ್ರವಿದೆ. ಪ್ರಮುಖ ಸಂಘಟನೆಗಳಲ್ಲಿ ಸಿಇಓ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಸಾಮಾಜಿಕ ಪ್ರಸ್ತುತತೆ ಹಾಗೂ ಮ್ಯಾನೇಜಮೆಂಟ್‌ಗಳಿಗೆ ಸಂಬಂಧಿಸಿದ ಪ್ರಾಧ್ಯಾಪಕರಾಗಿಯೂ, ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕಾರ್ಯ ನಿರ್ವಹಿಸುತ್ತಿರುವವರು.

69 ವರ್ಷ ಪ್ರಾಯದ ಡಾ. ಆನಂದ ತೇಲ್ತುಂಬ್ಡೆಯವರ ಎಲ್ಲಾ ಪುಸ್ತಕಗಳು ಬಹುಷಃ ಭಾರತದ ಹೆಚ್ಚಿನ ಭಾಷೆಗಳಿಗೆ ಅನುವಾದಗೊಂಡಿದೆ. ಪ್ರಸ್ತುತ ಗೋವಾ ವಿಶ್ವವಿದ್ಯಾಲಯದಲ್ಲಿ ಸ್ವತಂತ್ರ ಪ್ರಾಜೆಕ್ಟೊಂದನ್ನು ನಡೆಸುವಂತೆ ವಿಶ್ವವಿದ್ಯಾಲಯ ಕೇಳಿಕೊಂಡ ಮೇರೆಗೆ ಅವರು ಕಾರ್ಯನಿರ್ವಹಿಸುತ್ತಿದ್ದರು.

ಪ್ರಧಾನಿ ಮೋದಿ ಕೊಲೆ ಸಂಚು ಮಾಡಿದ್ದರು ಇವರು ಎಂಬ ಸುಳ್ಳು ಆರೋಪವನ್ನು ಎಲ್ಗಾರ್ ಪರಿಷತ್ ಪ್ರಕರಣದ ಜೊತೆಗೆ ಜೋಡಿಸಿ ರಾಷ್ಟ್ರೀಯ ತನಿಖಾ ಸಂಸ್ಥೆಗೆ ತನಿಖೆಗೆ ಒಪ್ಪಿಸಲಾಗಿದೆ. ಡಾ. ಆನಂದ ತೇಲ್ತುಂಬ್ಡೆಯವರ ವೈಚಾರಿಕ ನೆಲೆ, ಅವರ ವಿದ್ವತ್ತು, ಮಾನವ ಹಕ್ಕುಗಳ ಬಗೆಗೆ ಅವರಿಗಿದ್ದ ಅದಮ್ಯ ಬದ್ಧತೆಗಳನ್ನು ಗುರುತಿಸಿ ಸುಪ್ರೀಂ ಕೋರ್ಟ ಅವರಿಗೆ ಜಾಮೀನು ನೀಡಬಹುದೆಂದು ನಿರೀಕ್ಷಿಸಲಾಗಿತ್ತು. ಇದೀಗ ಅವರಿಗೆ ಅಲ್ಲಿಯೂ ಜಾಮಿನು ಸಿಕ್ಕಿಲ್ಲ. ಕಳೆದ 4 ವಾರಗಳಿಂದ ಅವರು ಬಂಧನದಲ್ಲಿದ್ದಾರೆ.

ಕೋವಿಡ್ ಕಾಲದಲ್ಲಿ ಈಗಾಗಲೇ ಬಂಧನದಲ್ಲಿರುವ ಇತರ ಖೈದಿಗಳನ್ನು ಬಿಡುಗಡೆ ಮಾಡುವ ಮೂಲಕ ಕೋವಿಡ್ ಸೋಂಕಿಗೆ ಒಳಗಾಗುವ ಅಪಾಯವನ್ನು ತಪ್ಪಿಸಬೇಕೆಂದು ಒತ್ತಾಯಗಳಿರುವಾಗಲೇ ಡಾ. ಆನಂದ್ ತೇಲ್ತುಂಬ್ಡೆ ಯವರನ್ನು ಸುಳ್ಳು ಆರೋಪದಡಿ ಈ ಕಾಲದಲ್ಲಿಯೇ ಬಂಧಿಸಿ ಸೆರೆಯಲ್ಲಿಟ್ಟಿರುವುದು ಖಂಡನೀಯ.

ನಮ್ಮ ಕಾಲದ ಧೀಮಂತ ಲೇಖಕರೂ, ಮಾನವ ಹಕ್ಕು ಕಾರ್ಯಕರ್ತರೂ ಆಗಿರುವ ಡಾ. ಆನಂದ ತೇಲ್ತುಂಬ್ಡೆಯವರನ್ನು ಬಂಧನದಲ್ಲಿ ಇಟ್ಟಿರುವುದು ಇಂದಿನ ನಮ್ಮ ದೇಶದ ನ್ಯಾಯಾಂಗವೂ ಮೇಲ್ವರ್ಗದವರ ಕೈಗೊಂಬೆಯಾಗಿದೆಯೇ ಎಂಬ ಆತಂಕವನ್ನು ಹುಟ್ಟಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಜಗತ್ತಿನ ಹಾಗೂ ಭಾರತದ ಜೀವಪರ, ಸಂವಿಧಾನಪರ ಎಲ್ಲ ವ್ಯಕ್ತಿಗಳು ಸಂಘಟನೆಗಳು ಡಾ. ಆನಂದ ತೇಲ್ತುಂಬ್ಡೆಯವರನ್ನು ಬಂಧಮುಕ್ತ ಮಾಡಬೇಕೆಂದು ಆಗ್ರಹಿಸಿ ಮೇ 16 ರಂದು ದೇಶದ್ಯಾಂತ ನ್ಯಾಯ ದಿನವನ್ನು ಆಚರಿಸಲು ಕರೆಕೊಟ್ಟಿದ್ದಾರೆ. ಈ ಕರೆಗೆ ಸಮುದಾಯ ಕರ್ನಾಟಕ ಮತ್ತು ರಾಜ್ಯದ ಹಲವೆಡೆ ಇರುವ ಎಲ್ಲ ಘಟಕಗಳೂ ಕೈಜೋಡಿಸುತ್ತವೆ. ಭಾರತ ಸರಕಾರವು ಡಾ. ಆನಂದ ತೇಲ್ತುಂಬ್ಡೆಯವರ ಮೇಲಿನ ಕ್ರಿಮಿನಲ್ ಪ್ರಕರಣಗಳನ್ನು ಕೈಬಿಡಬೇಕೆಂದು ಒತ್ತಾಯಿಸುತ್ತವೆ. ಈ ಮೂಲಕ ಜಾಗತೀಕವಾಗಿ ಭಾರತ ದೇಶದ ಗೌರವವನ್ನು ಉಳಿಸಬೇಕೆಂದು ಸಮುದಾಯ ಕರ್ನಾಟಕವು ಆಗ್ರಹಿಸುತ್ತದೆ.

*ಬೊಳವಾರ ಮೊಹಮ್ಮದ ಕುಂಞ ಗೌರವಾಧ್ಯಕ್ಷರು, ಅಚ್ಚುತ ಅಧ್ಯಕ್ಷರು, ಎಸ್. ದೇವೇಂದ್ರಗೌಡ ಪ್ರಧಾನ ಕಾರ್ಯದರ್ಶಿ*

# ಕೋವಿಡ್–19 ವಿರುದ್ಧ ಹೋರಾಟದಲ್ಲಿರುವ ಕಾರ್ಮಿಕರ ಸುರಕ್ಷತೆಗೆ ಆಗ್ರಹಿಸಿ ಮನವಿ



ಕುಂದಾಪುರ: ಕೋವಿಡ್ –19 ವಿರುದ್ಧ ಹೋರಾಟದಲ್ಲಿ ತಮ್ಮ ಜೀವ ಒತ್ತೆ ಇಟ್ಟು ಮುಂಚೂಣಿಯಲ್ಲಿರುವ ಕಾರ್ಮಿಕರ ಸುರಕ್ಷತೆ ಹಾಗೂ ಅವರ ಕುಟುಂಬಗಳಿಗೆ ವಿಮೆಗೆ ಆಗ್ರಹಿಸಿ ಇಂದು ಆಶಾ, ಅಂಗನವಾಡಿ, ಅಕ್ಷರದಾಸೋಹ, ಶುಶ್ರೂಷಕರು, ಆಸ್ಪತ್ರೆಯ ಸಿಬ್ಬಂದಿಗಳು ಹಾಗೂ ನೈರ್ಮಲ್ಯಕರಣ ಸಿಬ್ಬಂದಿಗಳು ಸೇರಿದಂತೆ ಕರ್ನಾಟಕ ರಾಜ್ಯ ಸರಕಾರದ ಖಾಯಮೇತರರ ಒಕ್ಕೂಟ (ಸಿಐಟಿಯು)ದ ನೇತ್ರತ್ವದಲ್ಲಿ ಇಂದು ರಾಷ್ಟ್ರವ್ಯಾಪಿ ಬೇಡಿಕೆ ದಿನಾಚರಣೆ ಭಾಗವಾಗಿ ಕುಂದಾಪುರದಲ್ಲಿಯೂ ರಾಜ್ಯ ಸರಕಾರಕ್ಕೆ ತಹಸೀಲ್ದಾರರ ಮುಖಾಂತರ ಮೇ 14, 2020 ರಂದು ಮನವಿ ಸಲ್ಲಿಸಲಾಯಿತು.

ಕೋವಿಡ್ –19 ಪ್ರಕರಣಗಳು ದೇಶದಲ್ಲಿ ಹೆಚ್ಚುತ್ತಿದ್ದು ಪ್ರಮುಖವಾಗಿ ಸುರಕ್ಷತಾ ಸಾಮಾಗ್ರಿಗಳ ಕೊರತೆ ಯಿಂದಾಗಿ ಕೆಲಸದ ಮುಂಚೂಣಿಯಲ್ಲಿರುವ ಕಾರ್ಮಿಕರಿಗೆ ಸೋಂಕು ತಗುಲಿ ಅಪಾಯ ಹೆಚ್ಚುತ್ತಿದೆ. ಯೋಜನ ಕಾರ್ಮಿಕರು ಅತ್ಯಂತ ಹೀನಾಯ ಸ್ಥಿತಿಯಲ್ಲಿ ಬಳಲುತ್ತಿದ್ದಾರೆ. ವೇತನದ ಪ್ರಶ್ನೆ ಬಂದಾಗ ಅವರನ್ನು ಸ್ವಯಂ ಸೇವಕರು ಎಂದು ಬಳಸಿಕೊಳ್ಳಲಾಗುತ್ತಿದೆ. ಸರಿಸುಮಾರು 10ಲಕ್ಷ ಆಶಾ ಕಾರ್ಯಕರ್ತರು ಮನೆ ಮನೆಗಳ ಬಾಗಿಲಿಗೆ ಸಮೀಕ್ಷೆಗೆ ಹೋಗುತ್ತಾರೆ. ಇಂತವರು ಈ ಕಾಯಿಲೆಗೆ ಬಲಿಯಾಗುವ ಸಾಧ್ಯತೆಗಳು ಹೆಚ್ಚು.ಅವರ ಸುರಕ್ಷತೆಗೆ ಸಮಗ್ರವಾದ ಸುರಕ್ಷತ ಸಾಮಾಗ್ರಿಗಳೊಂದಿಗೆ ಮಾಸ್ಕ್, ಸ್ಯಾನಿಟೈಸರ್‌ಗಳನ್ನು ಸರಕಾರ ಒದಗಿಸಿಲ್ಲ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ದೇಶದಲ್ಲಿ 24 ಲಕ್ಷ ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕಿಯರನ್ನು ಸಮೀಕ್ಷೆಗೆ ಹಾಗೂ ರೋಗಿಗಳ ಮತ್ತು ಶಂಕಿತರ ಉಸ್ತುವಾರಿ ನೋಡಿಕೊಳ್ಳಲು ಯಾವುದೇ ಸುರಕ್ಷತ ಸಾಮಾಗ್ರಿಗಳಿಲ್ಲದೇ ಕಲುಶಿತವಾದ ಮತ್ತು ಕೆಂಪು ವಲಯಗಳಿಗೆ ಕಳುಹಿಸುತ್ತಿರುವುದು ಆಘಾತಕಾರಿ ವಿಷಯವಾಗಿದೆ. ದೇಶದ ಹಲವಾರು ಭಾಗಗಳಲ್ಲಿ ಅಂಗನವಾಡಿ ಮತ್ತು ಆಶಾ ಕಾರ್ಮಿಕರು ಅತೀ ಹೆಚ್ಚು ಸಂಖ್ಯೆಯಲ್ಲಿ ಸೋಂಕಿತರಾಗುತ್ತಿದ್ದಾರೆ. ಈ ಅಪಾಯದ ಕೆಲಸವನ್ನು ತಮ್ಮ ಜೀವದ ಹಂಗನ್ನೇ ತೊರೆದು ಬೇರೆಯವರ ಅಮೂಲ್ಯ ಜೀವ ಉಳಿಸಲು ಹೆಣಗುತ್ತಿರುವ ಕಾರ್ಮಿಕರಿಗೆ ಸರಕಾರ ಕೂಡಲೇ ಸ್ಪಂದಿಸಿ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಬೇಕೆಂದು ಮನವಿ ನೀಡಲಾಯಿತು. ಮನವಿಯನ್ನು ತಾಲೂಕು ಉಪ ತಹಸೀಲ್ದಾರರು ಸ್ವೀಕರಿಸಿದರು. ಈ ವೇಳೆಯಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಕೆ.ಶಂಕರ್, ಅಂಗನವಾಡಿ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಶೀಲನಾಡ, ಆಶಾ ಸಂಘದ ಶೀಲಾವತಿ, ಅಕ್ಷರ ದಾಸೋಹ ಸಂಘದ ನಾಗರತ್ನ, ತಾಲೂಕು ಮುಖಂಡರಾದ ಎಚ್. ನರಸಿಂಹ, ಸುರೇಶ್ ಕಲ್ಲಾಗರ ಇದ್ದರು.

**ಬೇಡಿಕೆಗಳು**

1. ಕಂಟೈನ್ ಮೆಂಟ್ ಮತ್ತು ಕೆಂಪು ವಲಯದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ಸುರಕ್ಷತೆಗಾಗಿ PPE ಕಿಟ್ ಗಳನ್ನು ವಿತರಿಸಬೇಕು.
2. ಎಲ್ಲಾ ಸಿಬ್ಬಂದಿಗಳಿಗೆ ಆಗಿಂದಾಗೆ ಉಚಿತ ಕೋವಿಡ್ –19 ಪರೀಕ್ಷೆ ಮಾಡಿಸಬೇಕು.
3. ರೂ. 50 ಲಕ್ಷ ವಿಮೆಯನ್ನು ಕರ್ತವ್ಯದಲ್ಲಿದ್ದಾಗ ಯಾವುದೇ ರೀತಿಯಲ್ಲಿ ಮರಣ ಹೊಂದಿದವರಿಗೆ ಹಾಗು ಅವರ ಕುಟುಂಬದ ಸದಸ್ಯರಿಗೆ ಜಾರಿ ಮಾಡಬೇಕು.
4. ಕೋವಿಡ್–19 ಕರ್ತವ್ಯದಲ್ಲಿರುವ ಎಲ್ಲಾ NHM ಗುತ್ತಿಗೆ/ಸ್ಕೀಂ ನೌಕರರಿಗೆ ಹೆಚ್ಚುವರಿಯಾಗಿ ಪ್ರತಿ ತಿಂಗಳು ರೂ. 25,000 ಪ್ರೋತ್ಸಾಹ ಧನ ಕೊಡಬೇಕು.
5. ಕೋವಿಡ್ –19 ಸೋಂಕಿತರಾದ ಸಿಬ್ಬಂದಿಗಳಿಗೆ ಕನಿಷ್ಠ ರೂ. 5 ಲಕ್ಷ ಪರಿಹಾರ ಕೊಡಬೇಕು.
6. ಕೋವಿಡ್ –19 ಕರ್ತವ್ಯದಲ್ಲಿರುವ ಎಲ್ಲಾ ಕಾರ್ಮಿಕರಿಗೂ ಉಚಿತ ಪಡಿತರ/ಆಹಾರ ಕೊಡಬೇಕು.
7. ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಎಲ್ಲಾ ಕುಟುಂಬಗಳಿಗೆ ರೂ.7500 ಕೊಡಬೇಕು.
8. ಸರ್ಕಾರಿ ಆರೋಗ್ಯ ವ್ಯವಸ್ಥೆ ಬಲಪಡಿಸಲು **GDP** ಯ ಶೇ.5ನ್ನು ಸಾರ್ವಜನಿಕ ಆರೋಗ್ಯ ವಲಯಕ್ಕೆ ಮೀಸಲಿಡಿ. ಆರೋಗ್ಯ ವ್ಯವಸ್ಥೆ ಖಾಸಗೀಕರಣ ನಿಲ್ಲಿಸಿರಿ.ಸಾರ್ವತ್ರಿಕ ಆರೋಗ್ಯ ವ್ಯವಸ್ಥೆ ಶಾಸನ ರಚಿಸಬೇಕು.
9. ಮೇ 10 ರಂದು ಮ್ರತರಾದ ಆಶಾ ಕಾರ್ಯಕರ್ತೆಯಾದ ಸಾಕಮ್ಮ (ಭೀಮಕ್ಕ) ರವರಿಗೆ 50 ಲಕ್ಷ ಪರಿಹಾರ ಕೊಡಬೇಕು.

# ಬೈಂದೂರು: ವಿದ್ಯುತ್ ಬಿಲ್ ಪಾವತಿ ಮುಂದೂಡಲು ಸಿಪಿಐ(ಎಂ) ಆಗ್ರಹ

ಕರೋನ ಮಹಾಮಾರಿ ಯಿಂದಾಗಿ ಲಾಕ್ ಡೌನ್ ಪರಿಣಾಮ, ಬಡ, ಮಧ್ಯಮ ವರ್ಗ, ಕೃಷಿಕೂಲಿ ಕಾರ್ಮಿಕರ ಜೀವನ ತ್ರಿಶಂಕು ಬದುಕು ಸಂಕಷ್ಟದಲ್ಲಿರುವಾಗಲೇ ವಿದ್ಯುತ್ ಬಿಲ್ ಪಾವತಿಯನ್ನು ಮುಂದೂಡಬೇಕೆಂದು ಸರಕಾರ, ನಿಗಮಕ್ಕೆ ಸ್ಪಷ್ಟ ಸೂಚನೆ ನೀಡಿದ್ದರೂ, ಕಳೆದ ತಿಂಗಳೇ ನಿಗಮದಿಂದ ಎಲ್ಲರ ಮೊಬೈಲ್‌ಗಳಿಗೆ "ಬಿಲ್ ಪಾವತಿ" ಮಾಡಿ ಎಂಬ ಸಂದೇಶಗಳನ್ನು ನೀಡಲಾಗಿತ್ತು. ಇದೀಗ ಅಧಿಕೃತವಾಗಿ ಮನೆ ಬಾಗಿಲಿಗೇ ಬಿಲ್ ಬಂದಿದ್ದು, ಹಲವೆಡೆ ದುಪ್ಪಟ್ಟು ಹಣವನ್ನು ನಮೂದಿಸಲಾಗಿದೆ. ಎರಡು ತಿಂಗಳ ಬಿಲ್ ನ್ನು ಒಟ್ಟಿಗೆ ಕಳುಹಿಸಿರುವುದು ಮಾತ್ರವಲ್ಲ ಸಾಮಾನ್ಯ ಬಳಕೆಗಿಂತ ಎರಡು ಪಟ್ಟು ಶುಲ್ಕವನ್ನು ವಿಧಿಸಲಾಗಿದೆ. ಗೊಂದಲಕಾರಿಯಾದ ತಪ್ಪು ತಪ್ಪು ಬಿಲ್‌ಗಳೂ ಗ್ರಾಹಕರನ್ನು ಆತಂಕಕ್ಕೆ ತಳ್ಳಿದೆ. ಲಾಕ್ ಡೌನ್ ಘೋಷಿಸಿದ ಸಂದರ್ಭದಲ್ಲಿ ಸರಕಾರ ನೀಡಿದ ಭರವಸೆ ಈಡೇರಬೇಕು. ಜನರಿಗೆ ತಕ್ಷಣದ ಆರ್ಥಿಕ ನೆರವುಗಳನ್ನು ನೀಡುವುದಕ್ಕೆ ಮುಂದಾಗಬೇಕು ಎಂದು ಸಿಪಿಐ(ಎಂ) ಬೈಂದೂರು ತಾಲೂಕು ಕಾರ್ಯದರ್ಶಿ ಸುರೇಶ್ ಕಲ್ಲಾಗರ ಸರಕಾರವನ್ನು ಆಗ್ರಹಿಸಿದ್ದಾರೆ.

*ಸುರೇಶ್ ಕಲ್ಲಾಗರ ಕಾರ್ಯದರ್ಶಿ, ಸಿಪಿಐ(ಎಂ) ಬೈಂದೂರು*

# ಪಿಪಿಪಿ ಅಡಿ ಬಸ್ಸು ನಿಲ್ದಾಣ: ಡಿವೈಎಫ್ಐ ತೀವ್ರ ವಿರೋಧ

ಸ್ಮಾರ್ಟ್ ಸಿಟಿ, ಈಗಾಗಲೆ ಬಿಡುಗಡೆಗೊಂಡಿರುವ ಎಡಿಬಿ ಸಾಲ, ರಾಜ್ಯ ಸರಕಾರದ ಅನುದಾನ ಸಹಿತ ಸಂಪನ್ಮೂಲಗಳ ಕ್ರೋಡೀಕರಣಕ್ಕೆ ಹಲವು ಅವಕಾಶಗಳಿದ್ದರೂ, ಖಾಸಗಿ ಲಾಬಿಗಳ ಹಿತಾಸಕ್ತಿಗಳನ್ನು ರಕ್ಷಿಸಲು ಖಾಸಗಿ, ಸರಕಾರಿ ಪಾಲುದಾರಿಕೆ (ಪಿಪಿಪಿ) ಯಲ್ಲಿ ಮಂಗಳೂರು ಸಾರ್ವಜನಿಕ ಸಾರಿಗೆ ಕೇಂದ್ರ (ಬಸ್ಸು ತಂಗುದಾಣ) ನಿರ್ಮಿಸಲು ರಾಜ್ಯ ಸಚಿವ ಸಂಪುಟ ಅವಕಾಶ ನೀಡಿರುವುದನ್ನು ಡಿವೈಎಫ್ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ತೀವ್ರವಾಗಿ ವಿರೋಧಿಸಿದೆ. ರಾಜ್ಯ ಸರಕಾರ ಈ ಜನವಿರೋಧಿ ತೀರ್ಮಾನವನ್ನು ತಕ್ಷಣ ಕೈ ಬಿಟ್ಟು ನಗರ ಪಾಲಿಕೆ ಅಡಿಯಲ್ಲಿಯೇ ಬಸ್ಸು ನಿಲ್ದಾಣ ನಿರ್ಮಿಸಬೇಕು ಎಂದು ಅಗ್ರಹಿಸಿದೆ.

ಸುಸಜ್ಜಿತ ಬಸ್ಸು ನಿಲ್ದಾಣ ಮಂಗಳೂರಿನ ನಾಗರಿಕರ ಬಹುಕಾಲದ ಕನಸು. ಪಂಪ್ ವೆಲ್ ನಲ್ಲಿ ಅದರ ನಿರ್ಮಾಣವನ್ನು ಡಿವೈಎಫ್ಐ ಬೆಂಬಲಿಸುತ್ತದೆ. ಆದರೆ, ಅದು ಸಾರ್ವಜನಿಕ ರಂಗದಲ್ಲಿ ಆಗಬೇಕು. ಮೂಲಭೂತ ಸೌಲಭ್ಯಗಳ ನಿರ್ಮಾಣ ಖಾಸಗಿ ಲಾಬಿಗಳ ಸಂಪತ್ತು ಹೆಚ್ಚಿಸುವ ಹಿಡನ್ ಅಜೆಂಡಾ ಹೊಂದಿರಬಾರದು. ಮಂಗಳೂರಿನ ಕೇಂದ್ರ ಮಾರುಕಟ್ಟೆ, ಹಲವು ಉಪ ಮಾರುಕಟ್ಟೆಗಳು ಖಾಸಗಿ, ಸಾರ್ವಜನಿಕ ಸಹಭಾಗಿತ್ವದ (ಪಿಪಿಪಿ) ಅಡಿ ನಿರ್ಮಾಣಗೊಳ್ಳುತ್ತಿದೆ. ಜಲ ಸಿರಿ ಹೆಸರಿನಲ್ಲಿ ಕುಡಿಯುವ ನೀರು ಯೋಜನೆ ಖಾಸಾಗೀಕರಣ ಗೊಳ್ಳುತ್ತಿದೆ. ಕಸ ಸಂಗ್ರಹ ಖಾಸಗೀಕರಣಗೊಂಡಿದೆ, ಎರಡು ಹಂತಗಳಲ್ಲಿ 360 ಕೋಟಿ, 750 ಕೋಟಿ ರೂಪಾಯಿಗಳನ್ನು ವಿದೇಶಿ ಎಡಿಬಿ ಬ್ಯಾಂಕ್ ನಿಂದ ಸಾಲ ಪಡೆದು ನಗರ ಪಾಲಿಕೆ ಪೂರ್ಣವಾಗಿ ಎಡಿಬಿ ಹಿಡಿತಕ್ಕೆ ಸಿಲುಕಿದೆ. ಸ್ಮಾರ್ಟ್ ಸಿಟಿ ಯೋಜನೆಯ ಹೆಸರಿನಲ್ಲಿ ಅನಗತ್ಯ ನಿರ್ಮಾಣಗಳಿಗೆ ಕೋಟಿ ಕೋಟಿ ಹಣ ದುರುಪಯೋಗಗೊಳ್ಳುತ್ತಿದೆ. ತಲಾ ಹನ್ನೆರಡು ಲಕ್ಷ ರೂಪಾಯಿ ವೆಚ್ಚದ ಸರಣಿ ಬಸ್ಸು ತಂಗುದಾಣಗಳನ್ನು ಮಳೆ, ಬಿಸಿಲಿನಿಂದ ರಕ್ಷಣೆ ನೀಡಲಾರದ ರೀತಿ ನಿರ್ಮಿಸಿ ಕೋಟ್ಯಾಂತರ ರೂಪಾಯಿ ವ್ಯರ್ಥ ಗೊಳಿಸಲಾಗಿದೆ. ನಗರ ಪಾಲಿಕೆ ವ್ಯಾಪ್ತಿಯಲ್ಲಿ ಜನಪರ ವಾದ ಯಾವ ಯೋಜನೆಗಳೂ ಜಾರಿಗೊಳ್ಳುತ್ತಿಲ್ಲ. ಈಗ ಕೇಂದ್ರ ಬಸ್ಸು ತಂಗುದಾಣವೂ ಖಾಸಾಗಿ, ಸರಕಾರಿ ಸಹಭಾಗಿತ್ವದ ಅಡಿ ನಿರ್ಮಾಣಗೊಂಡರೆ ನಗರ ಪಾಲಿಕೆಯಲ್ಲಿ ಎಲ್ಲವೂ ಖಾಸಗಿ ಪಾಲಾದಂತಾಗುತ್ತದೆ. ಪಾಲಿಕೆಯ ಚುನಾಯಿತ ಸದಸ್ಯರು, ಆಡಳಿತವನ್ನು ವಿಶ್ವಾಸಕ್ಕೆ ಪಡೆಯದೆ ಇದೆಲ್ಲವನ್ನು ಮಾಡುವುದಾದರೆ ಪಾಲಿಕೆಯ ಕೌನ್ಸಿಲ್ ಆದರೂ ಯಾಕಿರಬೇಕು? ಎಂದು ಡಿವೈಎಫ್ಐ ಪ್ರಶ್ನಿಸಿದೆ.

445 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳುವ ಆಧುನಿಕ ಬಸ್ಸು ತಂಗುದಾಣವು ಶಾಪಿಂಗ್ ಮಾಲ್, ಕಚೇರಿ ಸಂಕೀರ್ಣ, ಬಹು ಮಹಡಿ ಪಾರ್ಕಿಂಗ್ ಸ್ಥಳಗಳನ್ನು ಹೊಂದಿದೆ. ಆದರೆ ನಿರ್ಮಾಣದ ನಂತರ 40 ವರ್ಷಗಳ ಕಾಲ ದೀರ್ಘ ಅವಧಿಗೆ ಇಡೀ ಸಾರಿಗೆ ಕೇಂದ್ರ ಹೂಡಿಕೆ ಮಾಡಿದ ಖಾಸಗಿ ಕಂಪೆನಿಯ ಒಡೆತನಕ್ಕೆ ಸಿಲುಕುತ್ತದೆ. ನಲವತ್ತು ವರ್ಷಗಳ ನಂತರ ಕಟ್ಟಡದ ಬಾಳಿಕೆ ಅವಧಿ, ನವೀಕರಣ ವಿಸ್ತರಣೆ ಮುಂತಾದ ಕಾರಣಕ್ಕೆ ಮತ್ತೆ ಖಾಸಗಿಯವರ ಲೀಸ್ ನವೀಕರಣ ಗೊಳ್ಳುತ್ತದೆಯೇ ಹೊರತು ನಗರ ಪಾಲಿಕೆಯ ಒಡೆತನಕ್ಕೆ ಯಾವತ್ತೂ ಮರಳುವುದಿಲ್ಲ. ಇದು ಪಿಪಿಪಿ ಅಡಿ ನಿರ್ಮಾಣಗೊಳ್ಳುವ ಟೋಲ್ ರಸ್ತೆಯ ಮಾದರಿಯಾಗಿದ್ದು, ಲೀಸ್ ನವೀಕರಣಕ್ಕೆ ಕೊನೆಯೆಂಬುದು ಇರುವುದಿಲ್ಲ. ಇದು ಪೂರ್ಣವಾಗಿ ಸರಕಾರಿ ಭೂಮಿ,,ಸಂಪತ್ತಿನಲ್ಲಿ ಖಾಸಗಿಯವರ ತಿಜೋರಿ ತುಂಬಿಸುವ ಯೋಜನೆಯಾಗಿದೆ.

ಆದುದರಿಂದ ಸರಕಾರ ಈ ಜನವಿರೋಧಿ ನಿರ್ಧಾರವನ್ನು ವಾಪಾಸ್ ಪಡೆಯಬೇಕು. ಸ್ಮಾರ್ಟ್ ಸಿಟಿ, ಈಗಾಗಲೆ ಮಂಜೂರಾಗಿರುವ ಎಡಿಬಿ ಸಾಲ, ರಾಜ್ಯ ಸರಕಾರದ ಅನುದಾನಗಳ ಮೂಲಕ ಸಂಪನ್ಮೂಲ ಕ್ರೋಢೀಕರಿಸಿ ನಿಲ್ದಾಣ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ಆ ಮೂಲಕ ಪಾಲಿಕೆಯ ಸಂಪತ್ತು, ಆದಾಯವನ್ನು ಹೆಚ್ಚಿಸಬೇಕು. ಈ ಕುರಿತು ನಗರ ಪಾಲಿಕೆಯ ವಿಶೇಷ ಸಭೆ, ಜಿಲ್ಲಾ ಮಟ್ಟದ ಸರ್ವ ಪಕ್ಷಗಳ ವಿಶೇಷ ಸಭೆ ಕರೆದು ಸಮಗ್ರ ಚರ್ಚೆ ನಡೆಸಿ ಜನಾಭಿಪ್ರಾಯ ಸಂಗ್ರಹಿಸಬೇಕು, ಅದಕ್ಕಿಂತ ಮೊದಲು ಈಗ ಅನುಮೋದಿಸಿರುವ ಪಿ ಪಿ ಪಿ ಯೋಜನೆಯನ್ನು ತಕ್ಷಣ ಕೈ ಬಿಡಬೇಕು ಎಂದು ಡಿವೈಎಫ್ಐ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಆಗ್ರಹಿಸಿದ್ದಾರೆ.

*ಸಂತೋಷ್ ಬಜಾಲ್ ಜಿಲ್ಲಾ ಕಾರ್ಯದರ್ಶಿ,*
*ಡಿವೈಎಫ್ಐ ದಕ್ಷಿಣ ಕನ್ನಡ. 15.05.2020*

# ಅರಣ್ಯ ಭೂಮಿ ಸಾಗುವಳಿದಾರರ ಮೇಲಿನ ಅರಣ್ಯ ಇಲಾಖೆಯ ದೌರ್ಜನ್ಯ ತಡೆಯಲು ಒತ್ತಾಯ

ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,

ಮಾನ್ಯರೇ,

ಇಡೀ ರಾಜ್ಯದ ರೈತರು ಹಾಗೂ ಕೂಲಿಕಾರರು, ಕೋವಿಡ್ – 19 ವೈರಾಣುವಿನ ವಿರುದ್ಧದ ಹೋರಾಟದಲ್ಲಿ ತೊಡಗಿದ್ದಾರೆ. ಅದೇ ಸಂದರ್ಭದಲ್ಲಿ ಸರಕಾರ ಘೋಷಿಸಿದ ನಿರಂತರ ಹಲವು ಹಂತದ ಲಾಕ್ ಡೌನ್ ಜಾರಿಯಲ್ಲಿ ನಿರತರಾಗಿದ್ದಾರೆ. ಇದೇ ಕಾರಣಕ್ಕೆ ಅವರು ಸಾಕಷ್ಟು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪರಿಣಾಮಕಾರಿಯಾಗಿ ನೆರವು ನೀಡುತ್ತಿಲ್ಲ.

ಗ್ರಾಮೀಣ ಪ್ರದೇಶ ಇಂತಹ ಸಂಕಷ್ಟದಲ್ಲಿರುವಾಗಲೇ, ನಮ್ಮ ಅರಣ್ಯ ಇಲಾಖೆಯು ಅದಾಗಲೇ ಅರಣ್ಯ ಭೂಮಿ ಹಕ್ಕಿಗಾಗಿ, ಅರಣ್ಯ ಭೂಮಿ ಹಕ್ಕು ಮಾನ್ಯತಾ ಕಾಯ್ದೆಯಡಿ ಅರ್ಜಿಗಳನ್ನು ಸಲ್ಲಿಸಿ, ಅವುಗಳು ವಿಲೇವಾರಿಗೆ ವಿವಿಧ ಹಂತಗಳಲ್ಲಿ ಬಾಕಿ ಇದ್ದರೂ, ಈ ಲಾಕ್ ಡೌನ್ ಅವಧಿಯನ್ನು ದುರ್ಬಳಕೆ ಮಾಡಿಕೊಂಡು ಅರಣ್ಯ ಇಲಾಖೆ ಸಿಬ್ಬಂದಿ ರಾಜ್ಯದ ಹಲವೆಡೆ ಅರಣ್ಯ ಭೂಮಿ ಸಾಗುವಳಿದಾರರನ್ನು ಕಾನೂನು ಬಾಹಿರವಾಗಿ ದೌರ್ಜನ್ಯದ ಮೂಲಕ ಬೆದರಿಸಿ, ಕುಣಿ ಹೊಡೆಸಿ ಗಿಡ ನೆಡಲು ಮುಂದಾಗುತ್ತಿದೆ. ಸಾಗುವಳಿಯಲ್ಲಿ ತೊಡಗಿದವರ ಮೇಲೆ ಕಾನೂನು ಬಾಹಿರ ಮೊಕದ್ದಮೆ ಹೂಡಿ ಬಂದಿಸಲು ಕ್ರಮ ವಹಿಸುತ್ತಿರುವುದು ನಡೆದಿದೆ.

ರೈತರು ಸಂಕಷ್ಟದಲ್ಲಿರುವಾಗ ಇಂತಹ ದುಷ್ಕೃತ್ಯ ಅಕ್ಷಮ್ಯ ಮತ್ತು ಖಂಡನೀಯವಾಗಿದೆ.

ಉದಾ ಹರಣೆಗೆ, ಧಾರವಾಡ ಜಿಲ್ಲಾ ಕಲಘಟಗಿ ತಾಲೂಕಾ ಹಟಿಗನಾಳ್ ಗ್ರಾಮದ ಮತ್ತಿತರರ ಐದು ರೈತರನ್ನು ಪೋಲಿಸ್ ಠಾಣೆಗೆ ಬರುವಂತೆ ಇಲ್ಲವೇ ಭೂಮಿಯಾಚೆ ನಡೆಯುವಂತೆ ಒತ್ತಾಯಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಶಿರುಗುಪ್ಪ ತಾಲೂಕಾ ದೇಶನೂರು ಗ್ರಾಮದಲ್ಲೂ ಅಲ್ಲಿನ ರೈತರಿಗೆ ಸದಾ ಕಿರಿ ಮಾಡುವುದು ನಡೆದಿದೆ. ಅದೇ ರೀತಿ, ವಿಜಯಪುರ ಜಿಲ್ಲಾ ಸಿಂಧಗಿ ತಾಲೂಕಿನ ಗ್ರಾಮಗಳಲ್ಲಿ ರೈತರ ಹೊಲಗಳಲ್ಲಿ ಗಿಡ ನೆಡುವ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಇವು ಕೆಲವಷ್ಟೇ !

ಆದ್ದರಿಂದ ತಕ್ಷಣವೇ ತಾವು ಮಧ್ಯ ಪ್ರವೇಶ ಮಾಡಿ ಅರಣ್ಯ ಇಲಾಖೆಯ ಸಿಬ್ಬಂಧಿಯ ಅತಿಕ್ರಮಣ ತಡೆಯಲು ಅರಣ್ಯ ಭೂಮಿ ಸಾಗುವಳಿದಾರರನ್ನು ಸಂರಕ್ಷಿಸಲು ಈ ಮೂಲಕ ಮನವಿ ಮಾಡುವೆವು.

*ಜಿ.ಸಿ. ಬಯ್ಯಾರೆಡ್ಡಿ ಅಧ್ಯಕ್ಷರು, ಯು. ಬಸವರಾಜ*
*ಪ್ರಧಾನ ಕಾರ್ಯದರ್ಶಿ, (14.05.2020)*

## ಕೊರೋನಾ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಒಳಗಾದ ಆಟೋರಿಕ್ಷಾ ಚಾಲಕರಿಗೆ ಮುಖ್ಯಮಂತ್ರಿಗಳಿಂದ ಪರಿಹಾರ ಘೋಷಣೆಯಾದ ಧನ 5 ಸಾವಿರ ಹಣ ಶೀಘ್ರವಾಗಿ ನೀಡುವಂತೆ ಮನವಿ

ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ರಾಜ್ಯ ಸರ್ಕಾರ

ಮಾನ್ಯರೇ,

ಕೊರೋನ ವೈರಸ್, ಜಗತ್ತಿನಾದ್ಯಂತ್ಯ ತನ್ನ ಅಟ್ಟಹಾಸ ಮೆರೆಯುತ್ತಿದೆ. ಈ ಮಹಾಮಾರಿಯಿಂದ ಹಲವಾರು ದೇಶಗಳಲ್ಲಿ ಸಾವು ನೋವಿನ ಸಂಖ್ಯೆ ಹೆಚ್ಚಾಗಿದೆ. ಆರ್ಥಿಕವಾಗಿ ಬಹಳ ದೇಶಗಳು ಕುಂಟಿತಗೊಂಡಿವೆ.

ಇಂತಹ ಸಂಧರ್ಭದಲ್ಲಿ ನಮ್ಮ ದೇಶದಲ್ಲಿ ಮಾರ್ಚ್ ತಿಂಗಳಿಂದ 1,2,3 ನೇ ಹಂತದ ಲಾಕ್‌ಡೌನ್ ಘೋಷಣೆ ಮಾಡಿ, ಸಾಮಾಜಿಕ ಅಂತರ ಕಾಯ್ದುಕೊಂಡು ಈ ವೈರಸನ್ನು ನಿಯಂತ್ರಣ ಮಾಡಲು ಪ್ರಯತ್ನಗಳು ನಡೆಯುತ್ತಿವೆ.

ನಮ್ಮ ರಾಜ್ಯ ಸರ್ಕಾರವು ಕೂಡ ಕೇಂದ್ರ ಸರ್ಕಾರದ ಆದೇಶಗಳನ್ನು ಚಾಚು ತಪ್ಪದೆ ಪಾಲನೆ ಮಾಡುತ್ತಿದೆ. ಅದರಂತೆ ನಮ್ಮಗಳ ಮೇಲೆ ಲಾಕ್‌ಡೌನ್ ಹಾಕಿ ನಮ್ಮ ರಾಜ್ಯವನ್ನು ರಕ್ಷಿಸುವ ಕೆಲಸ ನಡೆಯುತ್ತಿದೆ.

ಈ ಲಾಕ್‌ಡೌನ್‌ನಿಂದ ಆಟೋರಿಕ್ಷಾ ಚಾಲಕರುಗಳು ಇಂದಿನ ದಿನದ ಸಂಪಾದನೆ ನಂಬಿಕೊಂಡು ಬದುಕನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದ ನಮ್ಮಗಳ ಮೇಲೆ ಬರಸಿಡಲಿನಂತೆ ಬಡಿದು ಬದುಕು ನಡೆಸಲು ಕುಟುಂಬಗಳು ಪರದಾಡುತ್ತಿವೆ.

ಇಂತಹ ಸಂದರ್ಭದಲ್ಲಿ ನಮ್ಮ ಘನ ಸರ್ಕಾರ, 5 ಸಾವಿರ, ಲಾಕ್‌ಡೌನ್ ಕೋವಿಡ್ – 19 ಪರಿಹಾರ ಘೋಷಿಸಿದೆ. ಇದನ್ನು ನಮ್ಮ ಸಂಘಟನೆಯು ಸ್ವಾಗತಿಸುತ್ತದೆ.

ಈ ಹಣವನ್ನು ಸಂಬಂಧಪಟ್ಟ ಫಲಾನುಭವಿಗಳಿಗೆ ಶೀಘ್ರವಾಗಿ ಅವರ ಬ್ಯಾಂಕ್ ಖಾತೆಗೆ ಕಳುಹಿಸಬೇಕೆಂದು ವಿನಂತಿಸುತ್ತೇವೆ.

ತಮ್ಮ ಮನೆಗಳಲ್ಲಿ ಈಗಾಗಲೇ ರೇಷನ್‌ಗಳು ಇಲ್ಲದೆ ಚಾಲಕರು ಪರದಾಡುವಂತಾಗಿದೆ. ದಿನನಿತ್ಯದ ಖಚಿಗೆ ಈ ಹಣ ಬಳಕೆ ಮಾಡಲು ತಾವುಗಳು ಈ ಕೂಡಲೇ ಹಣ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

1. ನಂತರ, ತಮ್ಮ ಸರ್ಕಾರದ ಆದೇಶದಲ್ಲಿ ಚಾಲನಪತ್ರ ಚಾಲ್ತಿಯಲ್ಲಿರುವಂತೆ 1–3–2020 ಎಂದು ಆದೇಶ ಹೊರಡಿಸಲಾಗಿದೆ. ಈ ಆದೇಶವನ್ನು ಜನವರಿ 1, 2020 ಪರಿಗಣಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ.
2. ಆಟೋರಿಕ್ಷಾದ ನಂಬರ್ ಹಾಗೂ ಘೋಷಣಾ ಪತ್ರ ಈ ಎರಡು ವಿಷಯಗಳನ್ನು ರದ್ದು ಪಡಿಸಬೇಕು. ಎಲ್ಲಾ ಆಟೋರಿಕ್ಷಾ ಚಾಲಕರಿಗೂ ಈ ಪರಿಹಾರ ತಲುಪಬೇಕು.
3. ಈಗಾಗಲೇ ಲಾಕ್‌ಡೌನ್‌ನಿಂದ ಪ್ರಯಾಣಿಕರಿಲ್ಲದೆ ವ್ಯಾಪಾರಗಳು ನಶಿಸಿಹೋಗಿವೆ. ಮುಂದಿನ ಮೂರು ತಿಂಗಳುಗಳು ಪ್ರತಿ ತಿಂಗಳೂ 7,500 ರೂ. ಗಳು ಪರಿಹಾರ ಧನ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇವೆ.
4. ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಒಳಗಾದ ಆಟೋ ಚಾಲಕರಿಗೆ 50 ಸಾವಿರ ರೂಪಾಯಿ ಹಣವನ್ನು ಸಾಲದ ರೂಪದಲ್ಲಿ ನೀಡಬೇಕೆಂದು ವಿನಂತಿ.

*ಮೀನಾಕ್ಷಿ ಸುಂದರಂ ಅಧ್ಯಕ್ಷರು, ಸಂತೋಷ್ ಕುಮಾರ್ ಖಜಾಂಚಿ, ಸಿ.ಎನ್. ಶ್ರೀನಿವಾಸ್ ಪ್ರಧಾನ ಕಾರ್ಯದರ್ಶಿ (14–05–2020)*



ಕೇರಳ ವಿದೇಶಿದಿಂದ ಬಂದಿರುವ ಅನಿವಾಸಿ ಭಾರತೀಯರಿಗಾಗಿ ಮಾಡಿರುವ ಕ್ವಾರಂಟೈನ್ ವ್ಯವಸ್ಥೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಈಗಾಗಲೆ ಸುಮಾರು ಒಂದು ಸಾವಿರದಷ್ಟು ಅನಿವಾಸಿಗಳು ಗಲ್ಫ್ ರಾಷ್ಟಗಳಿಂದ ಕೇರಳ ತಲುಪಿದ್ದಾರೆ. ವಿಮಾನದಿಂದ ಇಳಿದ ಒಂದು ತಾಸಿನ ಒಳಗಡೆ ಆರೋಗ್ಯ ತಪಾಸಣೆ, ವಿಮಾನ ನಿಲ್ದಾಣದ ಪ್ರಕ್ರಿಯೆಗಳನ್ನು ಮುಗಿಸಿ ಕ್ವಾರಂಟೈನ್ ಕೇಂದ್ರಗಳಿಗೆ ಕಳುಹಿಸಿಕೊಡಲಾಗುತ್ತದೆ. ವಿದೇಶದಿಂದ ಬಂದ ಎಲ್ಲರಿಗೂ ತಾರತಮ್ಯ ವಿಲ್ಲದೆ ಉತ್ತಮ ದರ್ಜೆಯ ಹೊಟೇಲ್ ಗಳಲ್ಲಿ ಕೊಠಡಿಗಳನ್ನು ಒದಗಿಸಿದೆ. ರಮಜಾನ್ ಉಪವಾಸ ವ್ರತ ಉಲ್ಲವರಿಗೆ ಸಂಜೆ ಇಫ್ತಾರ್, ರಾತ್ರಿ ಹತ್ತು ಗಂಟೆಗೆ ಡಿನ್ನರ್, ಮುಂಜಾನೆ ನಾಲ್ಕು ಗಂಟೆಗೆ ಸಹರಿಗೆ ಉತ್ತಮ ದರ್ಜೆಯ ಅವರು ಬಳಸುವ ಆಹಾರ ಒದಗಿಸುತ್ತದೆ. ಉಳಿದವರಿಗೆ ಅವರದೇ ಶೈಲಿಯ ಬೆಳಿಗ್ಗೆ ತಿಂಡಿ, ಮಧ್ಯಾಹ್ನ, ರಾತ್ರಿ ಊಟ, ಸಂಜೆ ಚಹಾ, ಲಘು ಉಪಹಾರವನ್ನು ಒದಗಿಸುತ್ತದೆ ಎಲ್ಲಾ ರೀತಿಯ ವೈದ್ಯಕೀಯ ಸೇವೆ, ಔಷಧಿ ಅವರ ಅಗತ್ಯ ತಕ್ಕಂತೆ ದೊರಕುತ್ತದೆ.

ಇದೆಲ್ಲವನ್ನು ಕೇರಳ ಸರಕಾರ ಉಚಿತವಾಗಿ ಒದಗಿಸುತ್ತಿದೆ. ಇದಕ್ಕೆ ಬೇಕಾದ ಸಂಪನ್ಮೂಲವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಒದಗಿಸಲಾಗುತ್ತಿದೆ. ಇದರ ಹೊರತು ಅಂತರಾಷ್ಟ್ರೀಯ, ತಾರಾ ದರ್ಜೆಯ ಹೊಟೇಲ್ ಗಳನ್ನು ಬಯಸುವವರು ಅದಕ್ಕಾಗಿ ತಮ್ಮ ಜೇಬಿನಿಂದ ಹಣ ಪಾವತಿಸಬೇಕಾಗುತ್ತದೆ. ಆ ರೀತಿ ಕೇವಲ ನಾಲ್ಕು ಜನ ಮಾತ್ರ ತ್ರೀಸ್ಟಾರ್ ಹೊಟೇಲ್ ಸೌಲಭ್ಯ ಪಡೆದಿದ್ದಾರೆ. ಉಳಿದವರು ಸರಕಾರ ನಿಗದಿ ಪಡಿಸಿದ ಹೊಟೇಲ್ ಗಳಲ್ಲಿ ಉಳಿದಿದ್ದಾರೆ. ಇಲ್ಲಿಯವರಗೆ ಒಬ್ಬ ಅನಿವಾಸಿಯೂ ವ್ಯವಸ್ಥೆ ಕುರಿತು ಅಸಮಾಧಾನ ವ್ಯಕ್ತ ಪಡಿಸಿಲ್ಲ. ಬದಲಿಗೆ ಎಲ್ಲೆಡೆಯಿಂದ ಮೆಚ್ಚುಗೆಯ ಮಹಾಪೂರ ಹರಿದಿದೆ. ಕೊರೋನ ಸಮಸ್ಯೆ ಜಾಗತಿಕವಾಗಿ ಇದೇ ರೀತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಸುಮಾರು ನಾಲ್ಕು ಲಕ್ಷ ಜನ ವಿದೇಶಗಳಿಂದ ಆಗಮಿಸಬಹುದು ಎಂದು ಕೇರಳ ಸರಕಾರ ಅಂದಾಜಿಸಿದ್ದು. ಅದಕ್ಕಾಗಿ ಎಲ್ಲಾ ರೀತಿಯ ಸಿದ್ದತೆಗಳನ್ನು ತಳಮಟ್ಟದಲ್ಲಿ ಮಾಡಿಕೊಳ್ಳುತ್ತಿದೆ.

ಕರ್ನಾಟಕದಲ್ಲಿ ಮಂಗಳೂರಿಗೆ ಆಗಮಿಸಿದ ಪ್ರಥಮ ವಿಮಾನದ ಸಂದರ್ಭದಲ್ಲಿ ಉಂಟಾದ ಅಧ್ವಾನಗಳಿಂದಾಗಿ ಕೇರಳದ ವ್ಯವಸ್ಥೆ ಗಮನ ಸೆಳೆಯುತ್ತಿದೆ. ಕರ್ನಾಟಕ ಸರಕಾರ ಕೇರಳ ಸರಕಾರದ ಕಾರ್ಯತಂತ್ರ, ಯೋಜನೆಯನ್ನು ಅಳವಡಿಸಿಕೊಳ್ಳುವುದು, ಅಧ್ಯಯನ ಮಾಡುವುದು ಒಳಿತು.
#Keralamodel

*–ಮುನೀರ್ ಕಾಟಿಪಳ್ಳ*



# ಜೀತದಾಳುಗಳನ್ನು ಸೃಷ್ಟಿಸುವ ಸರಕಾರಗಳು




ಪ್ರೊ. ಎಂ. ಚಂದ್ರ ಪೂಜಾರಿ

**ಕಾಯಿದೆ ರದ್ದುಪಡಿಸಲು ರಾಜ್ಯ ಸರಕಾರಗಳು ನೀಡುವ ಕಾರಣ ಸರಳವಾಗಿದೆ. ಕೊರೋನದಿಂದ ಆ ರಾಜ್ಯಗಳ ಆರ್ಥಿಕ ಸ್ಥಿತಿ ಕುಸಿದಿದೆ. ಕುಸಿದ ಆರ್ಥಿಕ ಸ್ಥಿತಿ ಸುಧಾರಿಸಬೇಕಾದರೆ ಉದ್ದಿಮೆಗಳು ಬಂಡವಾಳ ಹೂಡಬೇಕು. ಬಿಗಿ ಕಾರ್ಮಿಕ ಕಾಯಿದೆಗಳಿದ್ದರೆ ಉದ್ದಿಮೆಗಳು ಬಂಡವಾಳ ಹೂಡುವುದಿಲ್ಲ. ಕಾರ್ಮಿಕ ಕಾಯಿದೆಗಳು ಸಡಿಲಗೊಂಡರೆ ಬಂಡವಾಳ ಹರಿದು ಬರುತ್ತದೆ ಎನ್ನುವುದು ಮೊದಲ ಕಾರಣ. ಬೇರೆ ರಾಜ್ಯಗಳಿಗೆ ಉದ್ಯೋಗ ನಿಮಿತ್ತ ವಲಸೆ ಹೋದ ಕಾರ್ಮಿಕರು ಕೊರೋನ ಸಮಸ್ಯೆಯಿಂದ ಹಿಂದಕ್ಕೆ ಬರುತ್ತಿದ್ದಾರೆ. ಇವರಿಗೆಲ್ಲ ಉದ್ಯೋಗ ಸೃಷ್ಟಿಸುವುದು ರಾಜ್ಯ ಸರಕಾರದ ಜವಾಬ್ದಾರಿ. ಈ ಜವಾಬ್ದಾರಿಯನ್ನು ನಿರ್ವಹಿಸಲು ಬಿಗಿ ಕಾರ್ಮಿಕ ಕಾಯಿದೆಗಳು ಅಡ್ಡಿಯಾಗುತ್ತಿವೆ. ಆದುದರಿಂದ ಅವುಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಬೇಕೆನ್ನುವುದು ಎರಡನೇ ಕಾರಣ. ಮೂರನೇ ಕಾರಣ ಸ್ವಲ್ಪ ಸಂಕೀರ್ಣವಾಗಿದೆ. ಕೊರೋನ ಸಮಸ್ಯೆ ಚೀನಾದಿಂದಲೇ ಆರಂಭವಾಗಿದೆ ಎಂದು ಅಮೇರಿಕಾ ಆರೋಪಿಸುತ್ತಿದೆ. ಇದೇ ಜಗಳದ ಕಾರಣಕ್ಕೆ ಅಮೇರಿಕಾ ಮತ್ತು ಪಶ್ಚಿಮ ರಾಷ್ಟ್ರಗಳ ಬಹುರಾಷ್ಟ್ರೀಯ ಕಂಪೆನಿಗಳು ಚೀನಾದಿಂದ ತಮ್ಮ ಉದ್ದಿಮೆಗಳನ್ನು ಬೇರೆ ದೇಶಗಳಿಗೆ ಸ್ಥಳಾಂತರಿಸುವ ಸಾಧ್ಯತೆ ಇದೆ ಎನ್ನುವ ಊಹೆ ಚಲಾವಣೆಯಲ್ಲಿದೆ. ಒಂದು ವೇಳೆ ಈ ಊಹೆ ನಿಜವಾದರೆ ಬಹುರಾಷ್ಟ್ರೀಯ ಕಂಪೆನಿಗಳನ್ನು ಆಕರ್ಷಿಸಲು ಭಾರತ ರೆಡಿ ಇರಬೇಕಾಗುತ್ತದೆ, ಎನ್ನುವುದು ಮೂರನೇ ಕಾರಣ. ಈ ಮೂರು ಕಾರಣಗಳು ಕೂಡ ವಾಸ್ತವಕ್ಕೆ ದೂರವಾಗಿವೆ.**

**ಬತ್ತಿದ ಕೆರೆಯ ಕೆಸರು ಕಣ್ಣಿಗೆ ರಾಚುವಂತೆ ಬತ್ತಿದ ಸಂಸ್ಕೃತಿಯ ಕೆಸರು ಕ್ರೌರ್ಯ, ಹಿಂಸೆ, ಅಸಮಾನತೆಗಳ ರೂಪದಲ್ಲಿ ಮುಖಕ್ಕೆ ರಾಚುತ್ತಿವೆ. ಇದನ್ನೂ ಸಹಜವೆಂದು ಬಗೆಯುವುದು ಮತ್ತು ಸಣ್ಣಪುಟ್ಟ ಬದಲಾವಣೆಗಳನ್ನು ಮುಂದುವರಿಸಬಹುದೆಂದು ಬಗೆಯುವುದು ಅಮಾನುಷ ಕೃತ್ಯವಾಗುತ್ತದೆ. ಮೂಲಭೂತ ಪರಿವರ್ತನೆಗೆ ಕಾಲ ಪಕ್ವವಾಗಿದೆಯೆಂದು ತಿಳಿದು ಸಿದ್ಧತೆ ಮಾಡಿಕೊಳ್ಳುವುದು ಬುದ್ಧಿವಂತಿಕೆಯಾಗುತ್ತದೆ.**

ಕಾರ್ಮಿಕ ಕಾಯಿದೆಗಳನ್ನು ರದ್ದುಗೊಳಿಸಿ ಜೀತದಾಳುಗಳನ್ನು ಸೃಷ್ಟಿಸುವ ಸರಕಾರಗಳ ನಡೆಯನ್ನು ಪ್ರಶ್ನಿಸುವಉದ್ದೇಶ ಈ ಲೇಖನದ್ದು. ಈ ಸಮಸ್ಯೆಗೆ ಎರಡುಮೂರು ಆಯಾಮಗಳಿವೆ. ಒಂದು, ಕಾಯಿದೆಗಳು ರದ್ದುಗೊಂಡ ಸಂದರ್ಭ, ಎರಡು, ಪರಿಣಾಮಗಳು ಮತ್ತು ಮೂರು, ಕಾಯಿದೆಗಳನ್ನು ರದ್ದುಗೊಳಿಸಲು ನೀಡಿರುವ ಕಾರಣಗಳು. 1897ರಲ್ಲಿ ಮುಂಬಯಿಯಲ್ಲಿ ಪ್ಲೇಗ್ ಶುರುವಾಯಿತು. ಇದು ಬೇರೆ ಪ್ರದೇಶಗಳಿಗೆ ಹರಡದಂತೆ ತಡೆಗಟ್ಟಬೇಕಾಗಿತ್ತು. ಸಾರ್ವಜನಿಕ ಸಭೆಗಳನ್ನು, ಸಂಸ್ಥೆಗಳನ್ನು, ವ್ಯಾಪಾರ, ಉದ್ದಿಮೆಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸುವುದೇ ಉತ್ತಮ ಮಾರ್ಗವೆಂದು ಬ್ರಿಟಿಷ್ ಸರಕಾರ ನಿರ್ಧರಿಸಿತು. ಸಾರ್ವಜನಿಕ ವ್ಯವಹಾರಗಳನ್ನು ರದ್ದುಗೊಳಿಸಲು ಅಧಿಕಾರ ನೀಡುವದಿ ಎಪಿಡಮಿಕ್ ಡಿಸೀಸ್ ಆಕ್ಟನ್ನು ಬ್ರಿಟಿಷ್ ಸರಕಾರ 1897ರಲ್ಲಿ ಜಾರಿಗೆ ತಂದಿದೆ. ಇದೇ ಕಾಯಿದೆಯನ್ನು ಮತ್ತು ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಆಕ್ಟ್ 2005ಗಳನ್ನು ಬಳಸಿಕೊಂಡು ಮಾರ್ಚ್ 24ರಿಂದ ಕೇಂದ್ರ ಸರಕಾರ ದೇಶವ್ಯಾಪಿ ಲಾಕ್‌ಡೌನ್ ಘೋಷಿಸಿದೆ. ಸ್ಥಳೀಯ ಮಟ್ಟದಲ್ಲಿ ಸಮಸ್ಯೆಯನ್ನು ನಿಭಾಯಿಸಲು ಅವಶ್ಯವಿರುವ ತಿದ್ದುಪಡಿಯನ್ನು ಮಾಡಿಕೊಳ್ಳಲು ರಾಜ್ಯಗಳಿಗೆ ಕೇಂದ್ರ ಅವಕಾಶ ನೀಡಿದೆ. ಈ ಕಾಯಿದೆಗಳು ಜಾರಿಗೊಂಡ ನಂತರ ಸಾಮಾನ್ಯ ಸಂದರ್ಭದಲ್ಲಿರುವ ಹಲವು ಹಕ್ಕುಗಳು ಕಾಣೆಯಾಗಿವೆ.

ಪ್ಲೇಗ್ ತಡೆಗಟ್ಟಲು ಜಾರಿಗೆ ತಂದ ಕಾಯಿದೆಯನ್ನು ಬಳಸಿಕೊಂಡು ಬ್ರಿಟಿಷ್ ಸರಕಾರ ಸ್ವಾತಂತ್ರ್ಯ ಹೊರಾಟಗಾರರನ್ನೂ ಜೈಲಿಗೆ ಅಟ್ಟಲು ಮರೆಯಲಿಲ್ಲ. ಈಗಲೂ ಈ ಕಾಯಿದೆ ಜಾರಿಗೊಂಡ ಸಂದರ್ಭದಲ್ಲೇ ಸಿಎಎ, ಎನ್‌ಆರ್‌ಸಿ, ಎನ್‌ಪಿಆರ್ ವಿರುದ್ಧ ಹೋರಾಡಿದವರನ್ನು ಗುರುತಿಸಿ ಬಂಧಿಸಲಾಗುತ್ತಿದೆ, ಸರಕಾರದ ಪಾಲಿಸಿಗಳನ್ನು ಟೀಕಿಸುವವರನ್ನು ಬಂಧಿಸಲಾಗುತ್ತಿದೆ, ಸಾರ್ವಜನಿಕ ಪ್ರತಿಭಟನೆ ಕಾರಣಕ್ಕೆ ಹಿಂದೆ ಅನುಷ್ಠಾನಗೊಳ್ಳದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಾರ್ಮಿಕ ಕಾಯಿದೆ ರದ್ದುಗೊಳಿಸುವುದು ಕೂಡ ಇದೇ ಸಾಲಿನಲ್ಲಿ ಬರುವ ಕ್ರಮ. ಮೂಲಭೂತ ಹಕ್ಕುಗಳು ಜಾರಿಯಲ್ಲಿರುವ ಸಂದರ್ಭದಲ್ಲಿ ಕಾರ್ಮಿಕ ಕಾಯಿದೆಗಳನ್ನು ರದ್ದುಗೊಳಿಸುವ ಕ್ರಮ ದೊಡ್ಡ ವಿರೋಧವನ್ನು ಎದುರಿಸುತ್ತಿತ್ತು. ಆದರೆ ಈಗ ಕಾರ್ಮಿಕ ಸಂಘಟನೆಗಳು, ಸಾರ್ವಜನಿಕರು ಸಭೆ ಸೇರಿ ಪ್ರತಿಭಟಿಸುವ ಸ್ಥಿತಿಯಲ್ಲಿ ಇಲ್ಲ. ಇದೇ ಸಂದರ್ಭವನ್ನು ಬಳಸಿಕೊಂಡು ಕಾಯಿದೆಗಳನ್ನು ರದ್ದುಪಡಿಸಲಾಗಿದೆ. ಈ ಕ್ರಮದಸರಿ ತಪ್ಪುಗಳನ್ನು ಮತ್ತು ಪರಿಣಾಮಗಳನ್ನು ಚರ್ಚಿಸುವ ಮುನ್ನ ಎಲ್ಲದಕ್ಕೂ ಕಾರಣವಾಗಿರುವ ಲಾಕ್‌ಡೌನ್‌ನ್ನು ಪುನರ್ ಪರಿಶೀಲಿಸಬೇಕಾಗಿದೆ. ಏಕೆಂದರೆ ಸಮಷ್ಠಿ ಕಲ್ಯಾಣದ ಹೆಸರಲ್ಲಿ ತಳಸ್ತರದ ಜನರನ್ನು ಬೇಕಾಬಿಟ್ಟಿ ನಡೆಸಿಕೊಂಡ ಕತೆಯನ್ನು ಲಾಕ್‌ಡೌನ್ ಬಿಚ್ಚಿಡುತ್ತಿದೆ.

**ಲಾಕ್‌ಡೌನ್**

ಜನವರಿಯಿಂದಲೇ ನಮ್ಮ ನೆರೆ ರಾಷ್ಟ್ರ ಚೀನಾ ಕೊರೋನ ಸಮಸ್ಯೆಯಿಂದ ಪರದಾಡುತ್ತಿತ್ತು. ಆ ಸಂದರ್ಭದಲ್ಲೇ ಪರದೇಶಗಳಿಂದ ಬರುವ ಎಲ್ಲ ಪ್ರಯಾಣಿಕರನ್ನು ಪರೀಕ್ಷೆ ಮಾಡಿ ಕ್ವಾರಂಟೀನ್ ಮಾಡುತ್ತಿದ್ದರೆ 130 ಕೋಟಿಯಷ್ಟು ಜನರನ್ನು ಲಾಕ್‌ಡೌನ್ ಹೆಸರಲ್ಲಿ ಕೂಡಿಹಾಕುವ ಅನಿವಾರ್ಯತೆ ಸೃಷ್ಟಿಯಾಗುತ್ತಿರಲಿಲ್ಲ. ಒಂದು ವೇಳೆ ಲಾಕ್‌ಡೌನ್ ಮಾಡುವುದು ಅನಿವಾರ್ಯವಾದರೂ ಇಡೀ ದೇಶವನ್ನೇ ಲಾಕ್‌ಡೌನ್ ಮಾಡುವುದು ಎಷ್ಟು ಸರಿ. ಇದೊಂದು ಬಗೆಯಲ್ಲಿ ಕೆರೆಯಲ್ಲಿರುವ ಒಂದೆರಡು ಮೀನುಗಳನ್ನು ಹಿಡಿಯಲು ಇಡೀ ಕೆರೆಯನ್ನೇ ಬತ್ತಿಸಿದಂತಲ್ಲವೇ? ಸೋಂಕಿತರು ಹೆಚ್ಚಿರುವ ಪ್ರದೇಶವನ್ನು ಲಾಕ್‌ಡೌನ್ ಮಾಡಿ ಉಳಿದ ಪ್ರದೇಶಗಳಲ್ಲಿ ಆರ್ಥಿಕ ಚಟುವಟಿಕೆ ಮುಂದುವರಿಸಬಹುದಿತ್ತು. ಆರ್ಥಿಕ ಚಟುವಟಿಕೆಗಳು ನಡೆಯುತ್ತಿದ್ದರೆ ಕಾರ್ಮಿಕರು ದುಡಿದು ತಮ್ಮ ಊಟ ಗಳಿಸುತ್ತಿದ್ದರು. ರೋಗದ ಲಕ್ಷಣ ಇರುವವರನ್ನು ಪರೀಕ್ಷಿಸುವ ಕ್ರಮದ ಬದಲು ರ‍್ಯಾಂಡಮ್ ಪರೀಕ್ಷೆ ಮಾಡಿ ಸೋಂಕಿತರನ್ನು ಗುರುತಿಸಬೇಕಿತ್ತು. ಸೋಂಕಿತರನ್ನು ಗುರುತಿಸದೆ ಇಡೀ ಪ್ರದೇಶವನ್ನು ಲಾಕ್‌ಡೌನ್ ಮಾಡುವುದರಿಂದ ದಿನಕೂಲಿಗೆ ದುಡಿಯುವಜನರು ಹೆಚ್ಚು ನಷ್ಟ ಅನಭವಿಸುವಂತಾಯಿತು. ಏಕೆಂದರೆ ಕೆಲವು ಚದರ ಅಡಿ ಮನೆಯಲ್ಲಿ ಏಳೆಂಟು ಮಂದಿ ವಾಸಿಸುವ ಇವರು 'ದೈಹಿಕ ಅಂತರ' ಕಾಪಾಡುವುದು ಅಸಾಧ್ಯವಾಗಿತ್ತು. ಸೋಂಕಿತರು ಇತರರಿಗೆ ರೋಗ ಹಬ್ಬಿಸುವುದು ಸುಲಭವಾಯಿತು. ಇಂತಹ ಸಾಮಾನ್ಯ ಸಂಗತಿಗಳನ್ನೂ ಆಲೋಚಿಸದೆ ಲಾಕ್‌ಡೌನ್ ಘೋಷಿಸಿದ್ದು ಯಾರು? ಕಾರ್ಮಿಕರೇ? ನಾಯಕರೇ? ನಾಯಕರ ಅಯೋಜಿತ, ಅಸೂಕ್ಷ್ಮ ಲಾಕ್‌ಡೌನ್ ತೀರ್ಮಾನಗಳಿಗೆ ಇವತ್ತು ಕಾರ್ಮಿಕರು ಬೆಲೆ ತೆರುವಂತಾಗಿದೆ.

ಅಂದು 'ಆರೋಗ್ಯ ಮುಖ್ಯ, ಬದುಕಿ ಉಳಿದರೆ ಆರ್ಥಿಕತೆ ಬಗ್ಗೆ ಆಲೋಚಿಸಬಹುದು' ಎನ್ನುವ ವಾದ ಮುಂದಿಟ್ಟು ಅವೈಜ್ಞಾನಿಕ ಲಾಕ್‌ಡೌನ್‌ನ್ನು ಸಮರ್ಥಿಸಿಕೊಳ್ಳಲಾಯಿತು. ಇಂದು 'ಆರ್ಥಿಕ ಆರೋಗ್ಯ ಸುಧಾರಿಸದಿದ್ದರೆ ಕೊರೋನಕ್ಕಿಂತಲೂ ಹೆಚ್ಚಿನ ಆಪಾಯ ಎದುರಿಸಬೇಕಾಗಬಹುದು' ಎನ್ನುವ ವಾದ ಮುಂದಿಟ್ಟು ಲಾಕ್‌ಡೌನ್ ಲಿಫ್ಟ್ ಮಾಡಲು ತಯಾರಿ ನಡೆದಿದೆ. ಅಂದು ಆರೋಗ್ಯವೇ ಮುಖ್ಯ ಎನ್ನುವಾಗ ಯಾರ ಆರೋಗ್ಯ ಎನ್ನುವ ಪ್ರಶ್ನೆ ಕೇಳಲಿಲ್ಲ. ಇಂದು ಆರ್ಥಿಕ ಆರೋಗ್ಯ ಎನ್ನುವಾಗ ಯಾರ ಆರ್ಥಿಕ ಆರೊಗ್ಯ ಎನ್ನುವ ಪ್ರಶ್ನೆ ಕೇಳಿ ಬರುತ್ತಿಲ್ಲ. ಎಲ್ಲರ ಆರೋಗ್ಯವೇ ಮುಖ್ಯವಾಗುತ್ತಿದ್ದರೆ ಲಾಕ್‌ಡೌನ್ ಮುನ್ನ ದಿನದಿನದ ದುಡಿತದಿಂದ ಉಸಿರಾಡುವ ಕಾರ್ಮಿಕರ ಆರೋಗ್ಯದ ಪ್ರಶ್ನೆ ಮುಂಚೂಣಿಗೆ ಬರಬೇಕಿತ್ತು. ದೂರದ ಊರಲ್ಲಿ ದುಡಿಯುವ ಕಾರ್ಮಿಕರ ಸ್ಥಿತಿ ಕಾಡಬೇಕಿತ್ತು. ಊರಿಗೆ ಹೋಗಲು ಬಯಸುವ ಕಾರ್ಮಿಕರನ್ನು ಅವರ ಊರಿಗೆ ಕಳುಹಿಸಲು ವ್ಯವಸ್ಥೆ ಮಾಡಬೇಕಿತ್ತು. ಊರಿಗೆ ಹಿಂತಿರುಗಲು ವ್ಯವಸ್ಥೆ ಮಾಡುತ್ತಿದ್ದರೆ ವಲಸೆ ಕಾರ್ಮಿಕರು ನೂರಾರು ಮೈಲು ಕಾಲು ನಡಿಗೆಯಲ್ಲಿ ಹೋಗುವ ಅನಿವಾರ್ಯತೆ ಇರುತ್ತಿರಲಿಲ್ಲ. ಊಟ, ನೀರಿಲ್ಲದೆ ಹೆಂಗಸರು, ಮಕ್ಕಳು, ಮುದುಕರು ಮೈಲು ಗಟ್ಟಲೆ ನಡೆದು ತಮ್ಮ ಆರೋಗ್ಯ ಕೆಡಿಸಿಕೊಳ್ಳುವ ಅವಶ್ಯಕತೆ ಇರುತ್ತಿರಲಿಲ್ಲ. ರೈಲು ಹಳಿ ಮೇಲೆ ಮಲಗಿ ಪ್ರಾಣ ಕಳೆದುಕೊಳ್ಳುವ ಅಗತ್ಯ ಇರುತ್ತಿರಲಿಲ್ಲ.

ವಾಪಾಸ್ಸು ಹೋಗಲು ಇಚ್ಛಿಸದವರಿಗೆ ಊಟ, ವಸತಿ, ಉದ್ಯೋಗಗಳನ್ನು ಕಲ್ಪಿಸಬೇಕಿತ್ತು. ಈ ಎರಡನ್ನೂ ಮಾಡದೇ ಲಾಕ್‌ಡೌನ್ ಘೋಷಿಸಲಾಯಿತು. ಲಾಕ್‌ಡೌನ್ ಘೋಷಣೆ ಆದ ಹಲವು ದಿನಗಳ ನಂತರ ಕೇಂದ್ರ ಹಾಗು ರಾಜ್ಯ ಸರಕಾರಗಳು ರೇಶನ್ ಕೊಡಲು ಆರಂಭಿಸಿದವು. ಆದರೆ ವಸತಿ, ವಿಳಾಸ ಇಲ್ಲದ ವಲಸೆ ಕಾರ್ಮಿಕರಿಗೆ ಈ ರೇಶನ್ ತಲುಪಲೇ ಇಲ್ಲ. ಸರಕಾರೇತರ ಸಂಸ್ಥೆಗಳು, ದಾನಿಗಳು ಕೆಲವು ದಿನ ಊಟ ಕೊಟ್ಟರು. ಸ್ಥಳೀಯ ರಾಜಕಾರಣಿಗಳು ತಮ್ಮ ತಮ್ಮ ಪಕ್ಷದ ಕಾರ್ಯಕರ್ತರಿಗೆ ಆಹಾರದ ಕಿಟ್‌ಗಳನ್ನು ಕೊಟ್ಟರು. ಇವೆಲ್ಲ ಲೋಕಲ್ ಟಿವಿ ಚ್ಯಾನಲ್‌ಗಳಲ್ಲಿ, ಪತ್ರಿಕೆಗಳಲ್ಲಿ ಸುದ್ದಿ ಆದವು. ಈ ಸುದ್ದಿಗಳು ರಾಜಕಾರಣಿಗಳ ಔದಾರ್ಯ ಪ್ರದರ್ಶನಕ್ಕೆ ಬಳಕೆಯಾದಷ್ಟು ಮತ್ತು ಅನುಕೂಲಸ್ಥರ ಪಾಪ ಪ್ರಜ್ಞೆಯನ್ನು ಕಡಿಮೆ ಮಾಡಲು ಬಳಕೆ ಆದಷ್ಟು ವಲಸೆ ಕಾರ್ಮಿಕರ ಊಟದ ಸಮಸ್ಯೆಯನ್ನು ಪರಿಹರಿಸಲಿಲ್ಲ. ಒಂದು ವೇಳೆ ಅವರ ಸಮಸ್ಯೆ ಪರಿಹರಿಸುತ್ತಿದ್ದರೆ ಅವರು ತಮ್ಮ ಊರಿಗೆ ಹೋಗಲು ಹಪಹಪಿಸುತ್ತಿರಲಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ಕೆಲವು ತಿಂಗಳು ದುಡಿಯದಿದ್ದರೂ ಊಟಕ್ಕೆ ಸಮಸ್ಯೆ ಇಲ್ಲದವರ ಆರೋಗ್ಯ ಲಾಕ್‌ಡೌನ್‌ನಿಂದ ರಕ್ಷಣೆಯಾಗಿರಬಹುದು. ಆದರೆ ಬದುಕಿ ಉಳಿಯಲು ದುಡಿತವನ್ನೇ ನಂಬಿದ್ದ ಬಡ ಜನರ ಆರೋಗ್ಯಕ್ಕೆ ಲಾಕ್‌ಡೌನ್‌ನಿಂದ ಅನುಕೂಲವಾಗಿಲ್ಲ.

ಇನ್ನು ಕೆಲವು ದಿನಗಳಲ್ಲಿ ಎರಡು ತಿಂಗಳ ಲಾಕ್‌ಡೌನ್ ಪೂರ್ಣಗೊಳ್ಳುತ್ತದೆ. ಕೊರೋನ ಸಮಸ್ಯೆ ಪರಿಹಾರವಾಗಿಲ್ಲ. ಹಾಗೆಂದು ಸರಕಾರಗಳು ಲಾಕ್‌ಡೌನ್ ಮುಂದುವರಿಸಲು ಇಚ್ಛಿಸುತ್ತಿಲ್ಲ. ಇವತ್ತು ಅರ್ಥಿಕ ಆರೋಗ್ಯ ಸುಧಾರಿಸದಿದ್ದರೆ ಕೊರೋನಕ್ಕಿಂತಲೂ ಹೆಚ್ಚಿನ ಆಪಾಯ ಎದುರಿಸಬೇಕೆಂದು ಲಾಕ್‌ಡೌನ್ ಲಿಫ್ಟ್ ಮಾಡಲು ತಯಾರಿ ನಡೆದಿದೆ. ಇಂದು ಕೂಡ ಯಾರ ಆರ್ಥಿಕ ಆರೋಗ್ಯ ಸುಧಾರಿಸದಿದ್ದರೆ ಆಪಾಯ ಇದೆ ಎನ್ನುವ ಪ್ರಶ್ನೆ ಕೇಳುತ್ತಿಲ್ಲ. ಜನಸಾಮಾನ್ಯರ ಆರೋಗ್ಯ/ಆರ್ಥಿಕ ಆರೋಗ್ಯದ ಕಾಳಜಿಯನ್ನು ಖಜಾನೆ ತುಂಬಿಸಲು ಅಬಕಾರಿ ಇಲಾಖೆಯನ್ನು ಬಳಸಿಕೊಂಡ ನಿರ್ಧಾರದಲ್ಲಿ ಕಾಣಲು ಸಾಧ್ಯವೇ? ಈ ನಿರ್ಧಾರದಿಂದ ಜನ ವೈನ್ ಸ್ಟೋರ್‌ಗಳ ಮುಂದೆ ಕ್ಯೂ ನಿಂತರು. ಒಂದೆರಡು ದಿನಗಳಲ್ಲೇ ನೂರಾರು ಕೋಟಿಯಷ್ಟು ಮೊತ್ತವನ್ನು ಸರಕಾರದ ಬೊಕ್ಕಸಕ್ಕೆ ತುಂಬಿದರು. ಕಾರ್ಮಿಕ ಕಾಯಿದೆಗಳನ್ನು ರದ್ದುಗೊಳಿಸುವ ಕೆಲವು ರಾಜ್ಯಗಳ ನಿರ್ಧಾರವನ್ನು ಇದೇ ಸಾಲಿನಲ್ಲಿ ನೋಡಬಹುದು. ಕಾಯಿದೆ ರದ್ದುಗೊಳಿಸುವ ಉದ್ದೇಶ ಸರಳವಾಗಿದೆ. ಕೆಲವು ಬಡ ಕುಟುಂಬಗಳು ಬದುಕಲು ಬೇರೆ ದಾರಿ ಇಲ್ಲದೆ ತಮ್ಮ ಮಕ್ಕಳನ್ನು ಉಳ್ಳವರ ಮನೆಯಲ್ಲಿ ದುಡಿಯಲು ಬಿಡುತ್ತಿದ್ದರು. ಮಕ್ಕಳನ್ನು ಉಳ್ಳವರು ಬೇಕಾಬಿಟ್ಟಿ ದುಡಿಸಿಕೊಳ್ಳುತ್ತಾರೆ. ಹಾಗೆಂದು ಪೋಷಕರು ಉಳ್ಳವರನ್ನು ದೂರುವುದಿಲ್ಲ. ಬದಲು ಮಕ್ಕಳಿಗೆ ಹೊಂದಾಣಿಕೆ ಮಾಡಿಕೊಂಡು ಬದುಕಲು ಸಲಹೆ



**ಪುಟ 10 ಕ್ಕೆ**



# ಸರ್ವಾಧಿಕಾರಶಾಹಿಯನ್ನು ಗಟ್ಟಿಗೊಳಿಸಲು ಕೊವಿಡ್ ಮಹಾಮಾರಿಯ ಬಳಕೆ




ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

**ಮಹಾಮಾರಿಯಂತಹ ಸಂದರ್ಭಗಳನ್ನು ಸ್ವಾಧೀನ ಪಡಿಸಿಕೊಂಡು, ಅದರ ಹೆಸರಲ್ಲಿ ತನಗೆ ಬೇಕಾದ ಕ್ರಮಗಳನ್ನು ಕಟ್ಟುವುದು ಸರ್ವಾಧಿಕಾರಶಾಹಿ ಆಳ್ವಿಕೆಗಳ ಸ್ವಭಾವವೇ ಆಗಿದೆ. ಲಕ್ಷ-ಲಕ್ಷ ವಲಸೆ ಕಾರ್ಮಿಕರ ಬದುಕಿನ ಪ್ರಶ್ನೆಯನ್ನು ಅಮಾನವೀಯವಾಗಿ ನಿಭಾಯಿಸಿರುವ ವೈಖರಿ, ಕೆಲವು ರಾಜ್ಯ ಸರಕಾರಗಳು ಕಾರ್ಮಿಕ ಕಾನೂನುಗಳನ್ನು ಕಳಚಿ ಹಾಕಲು ಸುಗ್ರೀವಾಜ್ಞೆಗಳನ್ನು ತರಲು ಪ್ರೋತ್ಸಾಹಿಸಿರುವ ರೀತಿ, ಅಪಾರದರ್ಶಕ, ಜವಾಬುದಾರಿಕೆ ಇಲ್ಲದ ಒಂದು ಗೂಢಚಾರೀ ಆಳ್ವಿಕೆಯ ಸ್ಥಾಪನೆ ಮತ್ತು "ಅನಪೇಕ್ಷಿತ' ವ್ಯಕ್ತಿಗಳನ್ನು ಬೆನ್ನಟ್ಟುವುದು- ಇವೆಲ್ಲವೂ ಭಾರತೀಯ ಜನತೆಗೆ ಅಪಾಯಕಾರಿ ದಿನಗಳು ಕಾದಿವೆ ಎಂಬದುರ ಮುನ್ಸೂಚನೆಗಳು. ಈ ಹಿಂದುತ್ವ ಸರ್ವಾಧಿಕಾರಶಾಹೀ ರಥ ದೇಶವನ್ನು ಗುಲಾಮಗಿರಿಗೆ ಇಳಿಸುವುದನ್ನು ತಡೆಯ ಬಯಸುವ ಎಲ್ಲರ ಮುಂದೆ ಇರುವ ಕಾರ್ಯಭಾರ ಸ್ಪಷ್ಟವಾಗಿದೆ.**

**ಪ್ರಕಾಶ ಕಾರಟ್**

ಕೊವಿಡ್-19 ಮಹಾಮಾರಿ ಮೋದಿ ಸರಕಾರ ತಂದಿರುವ ಸರ್ವಾಧಿಕಾರಶಾಹಿ ವ್ಯವಸ್ಥೆಯನ್ನು ತೀವ್ರಗೊಳಿಸಿದೆ ಮತ್ತು ಗಟ್ಟಿಗೊಳಿಸಿದೆ. ಮೇ 2014ರಲ್ಲಿ ಮೋದಿ ಸರಕಾರ ಅಧಿಕಾರದಲ್ಲಿ ಪ್ರತಿಷ್ಠಾಪನೆಗೊಂಡಂದಿನಿಂದ ಸರ್ವಾದಿಕಾರಶಾಹಿ ಪ್ರವೃತ್ತಿ ಆರಂಭವಾಗಿದೆ. ಮೇ 2019ರಲ್ಲಿ ಅದು ಅಧಿಕಾರಕ್ಕೆ ಮರಳಿದ ನಂತರ ಇದು ಕ್ರೋಡೀಕರಣಗೊಂಡಿದೆ. ಈಗ ಒಂದು ವರ್ಷವಾಗುತ್ತಿರುವಾಗ ಕೊವಿಡ್ ಮಹಾಮಾರಿ ಸೃಷ್ಟಿಸಿರುವ ಅಸಾಮಾನ್ಯ ಸನ್ನಿವೇಶವನ್ನು ಸರ್ವಾಧಿಕಾರಶಾಹಿ ಆಳ್ವಿಕೆಯನ್ನು ಬಲಗೊಳಿಸಲು ಬಳಸಲಾಗುತ್ತಿದೆ.

ಈ ವೈರಸ್ ಭಾರತದ ಮೇಲೆ ತನ್ನೆಲ್ಲ ಬಲದೊಂದಿಗೆ ಎರಗುವ ಮೊದಲು ಕೂಡ ಸರಕಾರ ಸಿಎಎ/ಎನ್‌ಆರ್‌ಸಿ-ವಿರೋಧಿ ಪ್ರತಿಭಟನೆಗಳನ್ನು ದಮನ ಮಾಡುವಲ್ಲಿ ಮಗ್ನವಾಗಿತ್ತು. ಲಾಕ್‌ಡೌನ್ ಹೇರಿದ ಮೇಲೆ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿಗಳು, ಕರಾಳ ಕಾಯ್ದೆಗಳ ಬಳಕೆ, ಮತ್ತು ಮುಸ್ಲಿಂ ಸಮುದಾಯ, ಮಾಧ್ಯಮಗಳು ಹಾಗೂ ವಿರೋಧಿ ದನಿಗಳ ಮೇಲೆ ಗುರಿಯಿಡುವ ಕೆಲಸ ಎಷ್ಟೋ ಪಾಲು ಹೆಚ್ಚಿದೆ.

ದಿಲ್ಲಿಯಲ್ಲಿ ಅಮಿತ್ ಷಾ ಗೃಹ ಮಂತ್ರಾಲಯದ ಅಡಿಯಲ್ಲಿ ನಡೆಯುತ್ತಿರುವ ಸಂಗತಿಗಳು ಒಂದು ಬೋಧಕ, ಕರಾಳತೆಯ ಪಾಟ. ಎಲ್ಲಕ್ಕೂ ಮೊದಲು, ದಿಲ್ಲಿ ಪೊಲಿಸ್ ಈಶಾನ್ಯ ದಿಲ್ಲಿಯಲ್ಲಿನ ಕೋಮುವಾದಿ ಹಿಂಸಾಚಾರಕ್ಕೆ ಹಲವು ಮುಸ್ಲಿಂ ಯುವಜನರನ್ನು ಸುತ್ತುವರೆದಿದ್ದಾರೆ, ಅವರು ಯಾವುದೇ ಕಾನೂನು ದಾರಿಯನ್ನು ಹಿಡಿಯಲಾಗದಂತೆ ಜೈಲಿಗೆ ಹಾಕಿದ್ದಾರೆ. ಅದೇ ವೇಳೆಗೆ, ಬಿಜೆಪಿ ಮುಖಂಡ ಕಪಿಲ್ ಮಿಶ್ರರಿಂದ ಆರಂಭಿಸಿ ಹಿಂಸಾಚಾರಕ್ಕೆ ಕುಮ್ಮಕ್ಕು ನೀಡಿದವರೆಂದು ಗುರುತಿಸಲ್ಪಟ್ಟವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಇನ್ನೂ ಘಾತಕ ಕೆಲಸ ಎಂದರೆ, ಈ ಹಿಂಸಾಚಾರಕ್ಕೆ ಏನೇನೂ ಸಂಬಂಧವಿರದ ಸಿಎಎ-ವಿರೋಧಿ ವಿದ್ಯಾರ್ಥಿ ಪ್ರತಿಭಟನಾಕಾರರ ಮೇಲೆ ಗುರಿಯಿಟ್ಟಿದ್ದಾರೆ. ಹೀಗೆ ಬಂಧಿತರಾದವರಲ್ಲಿ ಜಾಮಿಯ ವಿಶ್ವವಿದ್ಯಾಲಯದ ಪಿಹೆಚ್‌ಡಿ ವಿದ್ಯಾರ್ಥಿನಿ 27 ವರ್ಷದ ಸಫೂರಾ ಝರ್ಗರ್ ಕೂಡ ಇದ್ದಾರೆ. ಕರಾಳ ಕಾಯ್ದೆ ಯು.ಎ.ಪಿ.ಎ. ಅಡಿಯಲ್ಲಿ, ಆಕೆ ಗರ್ಭಿಣಿಯಾಗಿದ್ದರೂ ಜೈಲಿನಲ್ಲಿ ಇಡಲಾಗಿದೆ. ಬಂಧಿತರಾದ ಇತರರಲ್ಲಿ ಜಾಮಿಯ ಮತ್ತು ಜೆಎನ್‌ಯುನ ಹಿಂದಿನ ವಿದ್ಯಾರ್ಥಿಗಳು ಮತ್ತು ಸಂಶೋಧಕರೂ ಇದ್ದಾರೆ. ಕೊರೊನ ವೈರಸ್ ಸಂಬಂಧಪಟ್ಟಂತೆ ಮುಸ್ಲಿಂ-ವಿರೋಧಿ ಪ್ರಚಾರಕ್ಕೆ ವಿರೋಧವನ್ನು ವ್ಯಕ್ತಪಡಿಸಿದವರನ್ನೂ ಕೂಡ ಕರಾಳ ಕಾಯ್ದೆಗಳ ಅಡಿಯಲ್ಲಿ ಬಂಧಿಸಲಾಗಿದೆ. ದಿಲ್ಲಿ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷ ಝಫರುಲ್ ಇಸ್ಲಾಮ್ ಖಾನ್ ರವರ ಮೇಲೆ, ಅವರು ಬಿಜೆಪಿಗೆ ಇಷ್ಟವಾಗದ ಒಂದು ಟ್ವಿಟ್ ಮಾಡಿದ್ದಕ್ಕಾಗಿ ರಾಜದ್ರೋಹದ ಆರೋಪವನ್ನು(ಐಪಿಸಿ ಸೆಕ್ಷನ್ 124 ಎ ಅಡಿಯಲ್ಲಿ) ಹಾಕಲಾಗಿದೆ. ಯು.ಎ.ಪಿ.ಎ.ಯನ್ನು ಪ್ರತಿಷ್ಠಿತ ಚಿಂತಕರುಗಳಾದ ಆನಂದ್ ತೇಲ್ತುಂಬ್ಡೆ ಮತ್ತು ಗೌತಮ್ ನವ್ಲಖ ರವರ ಮೇಲೆ ಅವರು ಭೀಮ-ಕೊರೆಗಾಂವ್ ಕೇಸಿನಲ್ಲಿ ಹಿಂಸಾಚಾರ ಪ್ರಚೋದಿಸಿದ್ದಾರೆಂಬ ಸುಳ್ಳು ಆರೋಪವನ್ನು ಹೇರಿ ಬಂಧಿಸಲು ಬಳಸಲಾಗಿದೆ. ಜೈಲುಗಳ ದಟ್ಟಣೆಯನ್ನು ಕಡಿಮೆ ಮಾಡಲು ಕೈದಿಗಳನ್ನು ಬಿಡುಗಡೆ ಮಾಡುತ್ತಿರುವಾಗ ರಾಜಕೀಯ ಮತ್ತು ಸಾಮಾಜಿಕ ಕಾರ್ಯಕರ್ತರ ಬಗ್ಗೆ ಇಂತಹ ಯಾವ ಪರಿಗಣನೆಯೂ ಇಲ್ಲದೆ ಜೈಲಿಗಟ್ಟಲಾಗಿದೆ.

ಮಹಾಮಾರಿ ವ್ಯಾಪಕವಾಗಿ ಹಬ್ಬುವ ಮೊದಲೇ ರಾಜದ್ರೋಹದ ಕಲಮು ವ್ಯಾಪಕವಾಗಿತ್ತು. ಅದು ಈಗ ಅತಿರೇಕಕ್ಕೆ ಹೋಗಿದೆ.

ಮಾಧ್ಯಮಗಳನ್ನು ಪಳಗಿಸುವುದು ಸರ್ವಾಧಿಕಾರಶಾಹಿಯ ಆಳ್ವಿಕೆಯ ಗುರಿಗಳಲ್ಲಿ ಒಂದು. ಲಾಕ್‌ಡೌನ್ ಪ್ರಕಟಿಸುವ ಕೆಲವೇ ಗಂಟೆಗಳ ಮೊದಲು ಪ್ರಧಾನ ಮಂತ್ರಿಗಳು ಮಾಧ್ಯಮ ಮಾಲಕರು ಮತ್ತು ಸಂಪಾದಕರುಗಳ ಒಂದು ಸಭೆ ಕರೆದು ಸಕಾರಾತ್ಮಕ ಕಥನಗಳನ್ನೇ ಹಾಕಬೇಕು, ನಕಾರಾತ್ಮಕವಾದುದನ್ನು, ಊಹಾಪೋಹಗಳನ್ನು ಹಾಕಬಾರದು ಎಂದು ಅವರಿಗೆ ಹೇಳಲಾಯಿತು. ಈ ತಾಕೀತನ್ನು ಅನುಸರಿಸಿ ಮಾಧ್ಯಮಗಳ ಬಾಯಿ ಮುಚ್ಚಿಸುವುದನ್ನು ಸಂಪಾದಕರುಗಳ ಮೇಲೆ ಎಫ್‌ಐಆರ್ ಹಾಕುವ ವರೆಗೂ ( ದಿ ವೈರ್‌ನ ಮುಖ್ಯ ಸಂಪಾದಕರ ಮೇಲೆ ಹಾಕಿರುವಂತೆ) ವಿಸ್ತರಿಸಲಾಗಿದೆ. ಒಂದು ಗುಜರಾತಿ ಸುದ್ದಿ ತಾಣದ ಸಂಪಾದಕ ಧವಳ ಪಟೇಲ್ ಮೇಲೆ ರಾಜದ್ರೋಹದ ಆರೋಪವನ್ನೂ ಹಾಕಲಾಗಿದೆ. ಅವರು ಮಾಡಿರುವ 'ಅಪರಾಧ'ವೆಂದರೆ, ಗುಜರಾತಿನ ಮುಖ್ಯಮಂತ್ರಿ ರೂಪಾನಿಯನ್ನು ರಾಜ್ಯದಲ್ಲಿ ಕೊವಿಡ್ ಮಹಾಮಾರಿಯನ್ನು ಸರಿಯಾಗಿ ನಿಭಾಯಿಸಲಾಗದ್ದಕ್ಕೆ ಬದಲಿಸಬಹುದು ಎನ್ನುವ ಒಂದು ವರದಿಯನ್ನು ಪ್ರಕಟಿಸಿದ್ದು. ಕಳೆದ ತಿಂಗಳು ಕಾಶ್ಮೀರದಲ್ಲಿ ಇಬ್ಬರು ಪತ್ರಕರ್ತರನ್ನು ಯು.ಎ.ಪಿ.ಎ. ಅಡಿಯಲ್ಲಿ ಬಂಧಿಸಲಾಯಿತು.

ಲಾಕ್‌ಡೌನ್ ಜಾರಿಯ ಬಗ್ಗೆ ಯಾವುದೇ ವಿಮರ್ಶೆಯೂ ನಿಷಿದ್ಧ. ಅಸ್ಸಾಂನ ಗೋಲಾಘಾಟ್ ಜಿಲ್ಲೆಯಲ್ಲಿ ಇಬ್ಬರು ಕಾರ್ಯಕರ್ತರು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಹಗರಣವನ್ನು ಬಯಲಿಗೆಳೆದರೆಂದು ಬಂಧಿಸಲಾಯಿತು. ಎರಡು ವರ್ಷಗಳ ಹಿಂದಿನ ಇದಕ್ಕೇನೂ ಸಂಬಂಧವಿಲ್ಲದ ಕೇಸಿನಲ್ಲಿ ಅವರನ್ನು ಬಂಧಿಸಲಾಗಿದೆ.

ಸರ್ವಾಧಿಕಾರಶಾಹಿಯ ಮೋದಿ ಬ್ರಾಂಡ್ ಎಲ್ಲ ಸ್ವತಂತ್ರ ಸಂಸ್ಥೆಗಳನ್ನು ಮತ್ತು ಆಳ್ವಿಕೆ ಮಿತಿ ದಾಟಿ ಹೋಗದಂತೆ ಇರುವ ವಿಧಿ-ನಿಯಮಗಳನ್ನೆಲ್ಲ ಕಳಚಿ ಹಾಕಲು ಪ್ರಯತ್ನಿಸುತ್ತಿದೆ. ಇದರಲ್ಲಿ ಅದು ಪಡೆದಿರುವ ಅತ್ಯಂತ ಆತಂಕಕಾರಿ ಯಶಸ್ಸು ಎಂದರೆ ಉನ್ನತ ನ್ಯಾಯಾಂಗಕ್ಕೆ ಸಂಬಂಧಪಟ್ಟದ್ದು. ನ್ಯಾಯಾಂಗ ಹೆಚ್ಚೆಚ್ಚಾಗಿ ಎಲುಬಿಲ್ಲದಂತಾಗುತ್ತಿದೆ, ಕಾರ್ಯಾಂಗದ ಆಗ್ರಹಗಳಿಗೆ ಮಣಿಯುತ್ತಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ 4ಜಿ ನಿರಾಕರಣೆ ಕುರಿತ ಪ್ರಕರಣದಲ್ಲಿ ಇತ್ತೀಚಿನ ಸುಪ್ರಿಂ ಕೋರ್ಟ್ ತೀರ್ಪು ಇದಕ್ಕೊಂದು ಉದಾಹರಣೆ. ಸ್ವತಃ ಸುಪ್ರಿಂ ಕೋರ್ಟ್ ನಾಗರಿಕರ ಮೂಲಭೂತ ಹಕ್ಕುಗಳ ಪರವಾಗಿ ಎದ್ದು ನಿಲ್ಲಲು ಹಿಂದೇಟು ಹಾಕುತ್ತಿರುವುದರಿಂದಾಗಿ ಮೋದಿ ಸರಕಾರಕ್ಕೆ ತನ್ನೆಲ್ಲ ಆಕ್ರೋಶಕಾರಿ ಧೋರಣೆಗಳಿಗೆ ಕಾನೂನು ಬದ್ಧತೆಯ ಉಡುಗೆ ತೊಡಿಸುವುದು ಸಾಧ್ಯವಾಗಿದೆ.

ಮಹಾಮಾರಿ ಸರ್ವಾಧಿಕಾರಶಾಹಿಯ ಇನ್ನೊಂದು ದುಷ್ಟ ಅಂಶವನ್ನು ಮುನ್ನೆಲೆಗೆ ತಂದಿದೆ. ಅದೆಂದರೆ, ಸಂವಿಧಾನದಲ್ಲಿ ಅಸ್ತಿತ್ವದಲ್ಲಿರುವ ಒಕ್ಕೂಟ ತತ್ವವನ್ನು ಕಳಚಿ ಹಾಕಿ ವಿಪರೀತ ಕೇಂದ್ರೀಕೃತ ಅಧಿಕಾರಶಾಹೀ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸುವುದು. ಕೇಂದ್ರ ಸರಕಾರ ವ್ಯವಸ್ಥಿತವಾಗಿ ರಾಜ್ಯಗಳ ಅಳಿದುಳಿದ ಅಧಿಕಾರಗಳನ್ನೂ ಉಲ್ಲಂಘಿಸಿ ಆದೇಶಗಳು ಮತ್ತು ಹಣಕಾಸು ದಿವಾಳಿತನದ ಮೂಲಕ ಮೊಣಕಾಲೂರುವಂತೆ ಮಾಡುವ ಕೆಲಸದಲ್ಲಿ ತೊಡಗಿದೆ. ಬಹಳಷ್ಟು ಪ್ರಚಾರ ಕೊಟ್ಟ ಮುಖ್ಯಮಂತ್ರಿಗಳೊಂದಿಗಿನ ಐದು ವಿಡಿಯೋ ಸಮ್ಮೇಳನಗಳ ನಂತರ, ಮುಖ್ಯಮಂತ್ರಿಗಳು ಮತ್ತೆ-ಮತ್ತೆ ಕೇಳಿದ ಒಂದು ಹಣಕಾಸು ಪ್ಯಾಕೇಜಿನ ಬಗ್ಗೆ ಸ್ಪಂದಿಸಲು ಪ್ರಧಾನ ಮಂತ್ರಿಗಳು ನಿರಾಕರಿಸಿದ್ದಾರೆ. ಅವರು ಕೇಳಿರುವುದು ತಮಗೆ ಸಲ್ಲತಕ್ಕ ಬಾಕಿಗಳನ್ನು ಕೊಡಬೇಕು ಮತ್ತು ಸಾಲ ಪಡೆಯುವ ಮಿತಿಯನ್ನು ಸುಲಭ ಷರತ್ತುಗಳ ಮೇಲೆ ಹೆಚ್ಚಿಸಬೇಕು ಎಂಬುದು. ಕೇಂದ್ರ ಸರಕಾರ ರಾಜ್ಯ ಸರಕಾರಗಳು ತನ್ನ ಮರ್ಜಿಗೆ ಒಳಪಟ್ಟಿರಬೇಕು ಎಂದು ಬಯಸುತ್ತಿದೆ. ಮಹಾಮಾರಿಯನ್ನು ಎದುರಿಸುವುದು ಒಂದು ಆರೋಗ್ಯ ಕ್ಷೇತ್ರದ ಪ್ರಶ್ನೆ, ಇದು ಸ್ಪಷ್ಟವಾಗಿಯೂ ರಾಜ್ಯ ಪಟ್ಟಿಯಲ್ಲಿರುವ ವಿಷಯ. ಆದರೂ ಕೇಂದ್ರ ಸರಕಾರ ವಿಪತ್ತು ನಿರ್ವಹಣೆ ಕಾಯ್ದೆಯನ್ನು ಬಳಸಿಕೊಂಡು ರಾಜ್ಯಗಳ ಮೇಲೆ ಅಸಂವೈಧಾನಿಕ ರೀತಿಯಲ್ಲಿ ಸವಾರಿ ಮಾಡುತ್ತಿದೆ.

ಈ ಸರ್ವಾಧಿಕಾರಶಾಹೀ ಆಳ್ವಿಕೆ ಲಕ್ಷ-ಲಕ್ಷ ವಲಸೆ ಕಾರ್ಮಿಕರ ಬದುಕಿನ ಪ್ರಶ್ನೆಯನ್ನು ಅಮಾನವೀಯವಾಗಿ ನಿಭಾಯಿಸಿರುವ ವೈಖರಿ, ಕೆಲವು ರಾಜ್ಯ ಸರಕಾರಗಳು ಕಾರ್ಮಿಕ ಕಾನೂನುಗಳನ್ನು ಕಳಚಿ ಹಾಕಲು ಸುಗ್ರೀವಾಜ್ಞೆಗಳನ್ನು ತರಲು ಪ್ರೋತ್ಸಾಹಿಸಿರುವ ರೀತಿ, ಅಪಾರದರ್ಶಕ, ಜವಾಬುದಾರಿಕೆ ಇಲ್ಲದ ಒಂದು ಗೂಢಚಾರೀ ಆಳ್ವಿಕೆಯ ಸ್ಥಾಪನೆ ಮತ್ತು "ಅನಪೇಕ್ಷಿತ' ವ್ಯಕ್ತಿಗಳನ್ನು ಬೆನ್ನಟ್ಟುವುದು- ಇವೆಲ್ಲವೂ ಭಾರತೀಯ ಜನತೆಗೆ ಅಪಾಯಕಾರಿ ದಿನಗಳು ಕಾದಿವೆ ಎಂಬದುರ ಮುನ್ಸೂಚನೆಗಳು.


ಹಿಂದಿನ ಅನುಭವಗಳಿಂದ ನಮಗೆ ಗೊತ್ತಿದೆ- ಕೊವಿಡ್ ಮಹಾಮಾರಿ ಅಂತ್ಯಗೊಂಡ ನಂತರ ಈ ಯಾವುದೇ ಪ್ರಜಾಪ್ರಭುತ್ವ-ವಿರೋದಿ, ಜನ-ವಿರೋಧಿ ಕ್ರಮಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ಇಂತಹ ಸಂದರ್ಭಗಳನ್ನು ಸ್ವಾಧೀನ ಪಡಿಸಿಕೊಂಡು, ಅದರ ಮೇಲೆ ಇಂತಹ ಆನುಷಂಗಿಕ ಕ್ರಮಗಳನ್ನು ಕಟ್ಟುವುದು ಸರ್ವಾಧಿಕಾರಶಾಹಿ ಆಳ್ವಿಕೆಗಳ ಸ್ವಭಾವವೇ ಆಗಿದೆ. ಮೋದಿಯವರ ಇತ್ತೀಚಿನ ಭಾಷಣದಲ್ಲಿ 21ನೇ ಶತಮಾನವನ್ನು ಭಾರತದ ಶತಮಾನವಾಗಿ ಮಾಡಬೇಕು, ಒಂದು ಸ್ವಾವಲಂಬೀ ಭಾರತವನ್ನು ಕಟ್ಟಬೇಕು ಎಂಬ ಜನಮರುಳು ಅಬ್ಬರದ ಮಾತು ಒಂದೆಡೆಯಾದರೆ, ತದ್ವಿರುದ್ಧವಾಗಿ ಇನ್ನೊಂದೆಡೆಯಲ್ಲಿ ದೇಶದ ಪ್ರಮುಖ ಸಾರ್ವಜನಿಕ ವಲಯದ ತೈಲಕಂಪನಿಗಳಲ್ಲಿ ಒಂದಾದ ಬಿಪಿಸಿಎಲ್‌ನ್ನು ಒಂದು ವಿದೇಶಿ ಕಂಪನಿಗೆ ಮಾರುವುದು ಮತ್ತು ಭಾರತವನ್ನು ಅಮೆರಿಕಾದ ಒಂದು ಅಡಿಯಾಳು ಮಿತ್ರನ ಮಟ್ಟಕ್ಕೆ ಇಳಿಸುವುದನ್ನು ಕಾಣುತ್ತಿದ್ದೇವೆ.

ಈ ಹಿಂದುತ್ವ ಸರ್ವಾಧಿಕಾರಶಾಹೀ ರಥ ದೇಶವನ್ನು ಗುಲಾಮಗಿರಿಗೆ ಇಳಿಸುವುದನ್ನು ತಡೆಯ ಬಯಸುವ ಎಲ್ಲರ ಮುಂದೆ ಇರುವ ಕಾರ್ಯಭಾರ ಸ್ಪಷ್ಟವಾಗಿದೆ. ಅವರೆಲ್ಲರೂ ಜನಗಳ ಜೀವನಾಧಾರಗಳು, ಅವರ ಪ್ರಜಾಪ್ರಭುತ್ವ ಹಕ್ಕುಗಳು, ಒಕ್ಕೂಟ ತತ್ವ ಮತ್ತು ಜಾತ್ಯತೀತ-ಪ್ರಜಾಪ್ರಭುತ್ವದ ಮೇಲೆ ಪ್ರಹಾರಗಳ ವಿರುದ್ಧ ಯಾವುದೇ ರಾಜಿಯಿಲ್ಲದ ಹೋರಾಟವನ್ನು ನಡೆಸಬೇಕಾಗಿದೆ. ಕೊವಿಡ್ ಬಿಕ್ಕಟ್ಟಿನ ನಂತರ ಒಂದು "ರಾಜದ್ರೋಹಾತ್ಮಕ" ಬಂಡಾಯಗಳ ಒಂದು ಅಲೆಯೇ ಎದ್ದು ಬರಲಿದೆ ಎಂಬುದನ್ನು ಸೂಚಿಸುತ್ತದೆ.

ಸಫೂರಾ ಝರ್ಗರ್



ಝಫರುಲ್ ಇಸ್ಲಾಮ್ ಖಾನ್



ಧವಳ ಪಟೇಲ್




**ಸರ್ವಾಧಿಕಾರಶಾಹಿಯ ಮೋದಿ ಬ್ರಾಂಡ್ ಪಡೆದಿರುವ ಅತ್ಯಂತ ಆತಂಕಕಾರಿ ಯಶಸ್ಸು ಎಂದರೆ ಉನ್ನತ ನ್ಯಾಯಾಂಗಕ್ಕೆ ಸಂಬಂಧಪಟ್ಟದ್ದು. ನ್ಯಾಯಾಂಗ ಹೆಚ್ಚೆಚ್ಚಾಗಿ ಎಲುಬಿಲ್ಲದಂತಾಗುತ್ತಿದೆ, ಕಾರ್ಯಾಂಗದ ಆಗ್ರಹಗಳಿಗೆ ಮಣಿಯುತ್ತಿದೆ. ಸ್ವತಃ ಸುಪ್ರಿಂ ಕೋರ್ಟ್ ನಾಗರಿಕರ ಮೂಲಭೂತ ಹಕ್ಕುಗಳ ಪರವಾಗಿ ಎದ್ದು ನಿಲ್ಲಲು ಹಿಂದೇಟು ಹಾಕುತ್ತಿರುವುದರಿಂದಾಗಿ ಮೋದಿ ಸರಕಾರಕ್ಕೆ ತನ್ನೆಲ್ಲ ಆಕ್ರೋಶಕಾರಿ ಧೋರಣೆಗಳಿಗೆ ಕಾನೂನು ಬದ್ಧತೆಯ ಉಡುಗೆ ತೊಡಿಸುವುದು ಸಾಧ್ಯವಾಗಿದೆ.**



**1918 ಸ್ಪಾನಿಶ್ ಫ್ಲೂ ಸಾಂಕ್ರಾಮಿಕದಲ್ಲಿ ಭಾರತದ ಬ್ರಿಟಿಷ್ ವಸಾಹತುಶಾಹಿ ಆಡಳಿತದ ಒಟ್ಟಾರೆ ನಿರ್ಲಕ್ಷವನ್ನು ಸಂಶೋಧನಾತ್ಮಕ ಅಧ್ಯಯನಗಳು ಬಹಿರಂಗಗೊಳಿಸಿವೆ. ಈ ಫ್ಲೂ ಕಾಯಿಲೆಯಿಂದ ಜಾಗತಿಕವಾಗಿ ಸಾವಿಗೀಡಾದ 5 ಕೋಟಿ ಜನರಲ್ಲಿ 1.2 ಕೋಟಿ ಜನರು ಭಾರತೀಯರೇ ಇದ್ದರೆಂಬುದು ಮತ್ತು ಒಂದನೇ ಜಾಗತಿಕ ಮಹಾಯುದ್ಧದಲ್ಲಿ ಸತ್ತ ಭಾರತೀಯರ ಸಂಖ್ಯೆಗಿಂತ ಹೆಚ್ಚೇ ಇದ್ದರೆಂಬುದು ಗಮನಿಸಲೇಬೇಕಾದ ಸಂಗತಿ. 1918ರ ಫ್ಲೂ ಪಿಡುಗಿನ ಬಗ್ಗೆ ಅದರಲ್ಲೂ ಬಡವರ ಕೆಳಸ್ತರದವರ ಬಗ್ಗೆ ಬ್ರಿಟಿಷ್ ವಸಾಹತುಶಾಹಿ ತೋರಿಸಿದ ದಿವ್ಯ ನಿರ್ಲಕ್ಷ ಮತ್ತು ಭಾರೀ ಸಾವುನೋವುಗಳು, ಯುದ್ಧಾನಂತರ ಅದು ತೋರಿಸಿದ ದರ್ಪ ಇತ್ಯಾದಿ ಇತರ ಅಂಶಗಳೊಂದಿಗೆ ಸ್ವಾತಂತ್ರ್ಯ ಚಳುವಳಿಯ ಮೇಲೆ ಗಾಢ ಪರಿಣಾಮ ಬೀರಿತ್ತು. ಅದು ತೀವ್ರ ಮತ್ತು ವ್ಯಾಪಕಗೊಳ್ಳುವುದಕ್ಕೆ ಕಾರಣವಾಗಿತ್ತು. ಕೊರೊನಾ ಮಹಾಮಾರಿಯ ಸಂದರ್ಭದಲ್ಲಿ ಇಂದಿನ ಸರಕಾರದ ಧೋರಣೆ ಬ್ರಿಟಿಷ್ ವಸಾಹತುಶಾಹಿಯ ದಿವ್ಯ ನಿರ್ಲಕ್ಷದ ಧೋರಣೆಗೆ ಹತ್ತಿರ ಬರುತ್ತಿದೆ. ಇದು ಅಂತಹುದೇ ಪರಿಣಾಮ ಬೀರಬಹುದೇ ಎಂದು ಕಾದು ನೋಡಬೇಕಾಗಿದೆ.**



# ಭಾರತದಲ್ಲಿ 1918ರ ಸ್ಪಾನಿಶ್ ಫ್ಲೂ: ಚಾರಿತ್ರಿಕ ಹಿನ್ನೋಟ

**ವಾಸುದೇವ ಉಚ್ಚಿಲ**

ಕೋವಿಡ್-19 ಸಾಂಕ್ರಾಮಿಕವು ಜಗತ್ತಿನ ಹಲವಾರು ದೇಶಗಳಲ್ಲಿ ಸಾವು-ನೋವು, ಆರ್ಥಿಕ ಸಂಕಷ್ಟಗಳನ್ನು ಉಂಟು ಮಾಡುತ್ತಿರುವ ಸಂದರ್ಭದಲ್ಲಿ 102 ವರ್ಷಗಳ ಹಿಂದೆ ಅಂದರೆ 1918 ರಲ್ಲಿ ಜಗತ್ತಿನ ದೇಶಗಳಿಗೆ ಎರಗಿದ್ದ ಸ್ಪಾನಿಶ್ ಇನಾಫ್ಲುಯೆಂಜಾ-ಸ್ಪಾನಿಶ್ ಫ್ಲೂ ಬಗ್ಗೆ ಅಧ್ಯಯನಗಳು ನಡೆಯುತ್ತಿವೆ.

1918 ರ ಫ್ಲೂ ಸಾಂಕ್ರಾಮಿಕದಿಂದ ಜಗತ್ತಿನಾದ್ಯಂತ ಕನಿಷ್ಠ ಐದು ಕೋಟಿ ಜನರು ಸತ್ತಿರಬಹುದೆಂದು ಅಂದಾಜು ಮಾಡಲಾಗಿದೆ. 1918 ರಲ್ಲಿ ಸೆಪ್ಟೆಂಬರ್ ಮತ್ತು ಡಿಸೆಂಬರ್ ತಿಂಗಳ ಮಧ್ಯಾವಧಿಯಲ್ಲಿ 1.2 ರಿಂದ 1.3 ಕೋಟಿ ಭಾರತೀಯರು ಸತ್ತಿರಬೇಕೆಂದು ಬ್ರಿಟಿಷ್ ದಾಖಲೆಗಳು ಸೂಚಿಸುತ್ತವೆ. "ಮೃತ ದೇಹಗಳನ್ನು ಕೊಂಡೊಯ್ಯಲು ಯಾರೂ ಇರಲಿಲ್ಲ ಮತ್ತು ನರಿಗಳೇ ಔತಣ ಮಾಡಿದವು" ಎಂಬುದಾಗಿ ಪ್ರತ್ಯಕ್ಷದರ್ಶಿಗಳು ಹೇಳಿದ ದಾಖಲೆಗಳೂ ಇವೆ.

ಭಾರತದಲ್ಲಿ 1918 ರ ಫ್ಲೂ ಪಿಡುಗಿನ ಬಗೆಗೆ ಹಲವಾರು ಸಂಶೋಧನೆಗಳು ನಡೆದಿವೆ. ಆ ಪಿಡುಗು ದಾಳಿಯಿಟ್ಟ ಸಂದರ್ಭ - ಭಾರತವು 150 ವರ್ಷಗಳ ಕಾಲ ಬ್ರಿಟಿಷ್ ವಸಾಹತುಶಾಹಿಯ ಆಡಳಿತಕೊಳಪಟ್ಟಿತ್ತು.

ವಸಾಹತು ಆಡಳಿತಗಾರರಾದ ಬಿಳಿಯ ಬ್ರಿಟಿಷರ ಕುಟುಂಬಗಳನ್ನು ಅಷ್ಟಾಗಿ ಈ ಪಿಡುಗು ಬಾಧಿಸಲಿಲ್ಲವಾದುದರಿಂದ ಬ್ರಿಟಿಷ್ ವಸಾಹತುಶಾಹಿಯ ಈ ಪಿಡುಗಿನ ಬಗ್ಗೆ ಅತೀವ ನಿರ್ಲಕ್ಷ್ಯವನ್ನು ವಹಿಸಿತು ಎಂಬುದಾಗಿ ಸಂಶೋಧನೆಗಳು ತಿಳಿಸುತ್ತವೆ.

**ಕ್ಯಾನ್ಸಾಸ್ ನಿಂದ ಮುಂಬಯಿಗೆ**

1918 ರ ಫ್ಲೂ ಪಿಡುಗನ್ನು ಸ್ಪಾನಿಶಾ ಫ್ಲೂ ಎಂದು ಕರೆಯಲಾಗುತ್ತಿದೆಯಾದರೂ, ವಾಸ್ತವದಲ್ಲಿ ಅದು ಸ್ಪೈನ್ ದೇಶದಲ್ಲಿ ಉದ್ಭವವಾದುದಲ್ಲ. ಅಮೆರಿಕಾ ಸಂಸ್ಥಾನದ ಪಶ್ಚಿಮ-ಮಧ್ಯದಲ್ಲಿ ಕ್ಯಾನ್ಸಾಸ್ ನಲ್ಲಿ ಫ್ಲೂ ವೈರಸ್ ಹುಟ್ಟಿ ಬೆಳೆದಿರಬೇಕೆಂದು ಈಗ ತಿಳಿಯಲಾಗಿದೆ. 1918 ರ ಆರಂಭದ ತಿಂಗಳಲ್ಲಿ ಹುಟ್ಟಿದ ಪಿಡುಗು ಸಾಂಕ್ರಾಮಿಕವಾಗಿ ಪೂರ್ವಕ್ಕೆ ಸಾಗುತ್ತಾ ಅಟ್ಲಾಂಟಿಕಾ ಸಾಗರ ದಾಟಿ ಯೂರೋಪ್ ಖಂಡಕ್ಕೆ ಬಂದಿತೆಂದು ತಿಳಿಯಲಾಗಿದೆ. 1914 ರಿಂದ ಒಂದನೇ ಜಾಗತಿಕ ಮಹಾಯುದ್ಧ ಆರಂಭವಾಗಿ ಇನ್ನೂ ಕೊನೆಗೊಂಡಿರಲಿಲ್ಲ. ದೀರ್ಘಕಾಲದ ಯುದ್ಧದಿಂದ ಸೈನಿಕರೂ ಬಳಲಿದ್ದರು. ಯೂರೋಪಿನ ಸೇನಾಪಡೆಗಳ ಪಶ್ಚಿಮದ ಅಡಗುತಾಣಗಳಲ್ಲಿ, ಬಳಲಿದ ಸೈನಿಕರ ಮೇಲೆ ವೈರಸ್ಸು ದಾಳಿ ಮಾಡಿತು. ಬಳಿಕ ವಾಣಿಜ್ಯ ನೌಕಾ ಮಾರ್ಗ ಮತ್ತು ಮಿಲಿಟರಿ ಸಾಗಣೆ ವಾಹನ ಮಾರ್ಗಗಳ ಮೂಲಕ ಸಾಗಿ ಭೂಗೋಳದ ಎಲ್ಲಾ ಮೂಲೆಗೂ ತಲುಪಿತು. ಮುಂಬಯಿಗೆ 1918 ಮೇ ಕೊನೆಯಲ್ಲಿ ತಲುಪಿತು.

**ಭಾರತದಲ್ಲಿ ಫ್ಲೂ ಪಿಡುಗಿನ ಅಸಮಾನ ವಿಸ್ತರಣೆ**

ಸಾಂಕ್ರಾಮಿಕದ ಪ್ರಥಮ ಅಲೆ ಆಗಮಿಸಿದಾಗ, ಅದು ಮಾರಣಾಂತಿಕವೆಂದು ಯಾರೂ ಭಾವಿಸಿರಲಿಲ್ಲ. ಕಾರ್ಮಿಕರ ಮೇಲೆ ಅದರ ಪರಿಣಾಮವನ್ನು ಬ್ರಿಟಿಷ್ ಅಧಿಕಾರಿಗಳು ಗಮನಿಸಿದರು. ದಿನಪೂರ್ತಿ ಕೆಲಸ ಮಾಡಲು ಜನರು ಅಸಮರ್ಥರಾಗಿದ್ದಾರೆ ಎಂದಷ್ಟೇ ಕೆಲವು ಅಧಿಕಾರಿಗಳು ವರದಿ ಮಾಡಿದರು.

ಸೆಪ್ಟೆಂಬರ್ ವೇಳೆ ಮುಂಬಯಿ ಸೋಂಕಿನ ಕೇಂದ್ರವಾಗಿತ್ತು. ವಾಣಿಜ್ಯ ಸಾಂದ್ರತೆ ಹಾಗೂ ಜನ ಸಾಂದ್ರತೆಯೇ ಅದರ ಕಾರಣವಾಗಿತ್ತು. ಇನ್ನಷ್ಟು ಭೀಕರವಾದುದು ಬರಲಿದೆ ಎಂದು ದಿನಪತ್ರಿಕೆಗಳು ವರದಿ ಮಾಡಿದ್ದವು.

ವೈರಸ್ಸು ನಗರಗಳಿಂದ ಹಳ್ಳಿಗಳಿಗೆ ವ್ಯಾಪಿಸಿತು. ವಾಣಿಜ್ಯ ಮತ್ತು ಅಂಚೆ ಮಾರ್ಗಗಳ ಮೂಲಕ ನುಗ್ಗಿತು ಎಂದು ಅಧ್ಯಯನವೊಂದು ತಿಳಿಸುತ್ತದೆ. ದಿನಕ್ಕೆ 150 ರಿಂದ 200 ಶವಗಳು ಸ್ಮಶಾನದ ಹೊರಗೆ ಕಾಯುತ್ತಿದ್ದವು ಎಂಬುದಾಗಿ ಅಂದಿನ ವೃತ್ತಾಂತಗಳು ತಿಳಿಸುತ್ತವೆ.

ಆದರೆ ಈ ಇನಾಫ್ಲುಯೆಂಜಾ ಮಾರಿಯು ಎಲ್ಲರನ್ನು ಒಂದೇ ರೀತಿಯಲ್ಲಿ ಬಾಧಿಸಲಿಲ್ಲ. ಭಾರತದಲ್ಲಿದ್ದ ಹೆಚ್ಚಿನ ಬ್ರಿಟಿಷ್ ಪ್ರಜೆಗಳು ತೋಟ ಹಿತ್ತಲು ಹೊಂದಿದ ವಿಶಾಲವಾದ ಮನೆಗಳಲ್ಲಿ ವಾಸಿಸುತ್ತಿದ್ದರು. ಅವರಿಗೂ ಅವರು ಗೃಹಕೃತ್ಯಕ್ಕೆ ನೇಮಿಸಿ ಕೊಳ್ಳುತ್ತಿದ್ದ ಸ್ಥಳೀಯರಿಗೂ ಈ ಸಾಂಕ್ರಾಮಿಕಗಳು ಅಷ್ಟಾಗಿ ಬಾಧಿಸಲಿಲ್ಲ. ಇವರಿಗೆ ಹೋಲಿಸಿದರೆ ಭಾರತದಲ್ಲಿ ನಗರವಾಸಿಗಳಾದ ಕೆಳ ವರ್ಗದವರು ಜನದಟ್ಟಣೆಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು; ಇವರಿಗೆ ಫ್ಲೂ ಹೆಚ್ಚಿಗೆ ಬಾಧಿಸಿತು. ಹಾಗಾಗಿ ದೇಶಾದ್ಯಂತ ವ್ಯಾಪಿಸಿರುವ ಸಾಂಕ್ರಾಮಿಕದ ಬಗ್ಗೆ ಬ್ರಿಟಿಷ್ ಪ್ರಜೆಗಳು ನಿರ್ಲಿಪ್ತ ಭಾವನೆಯಿಂದಿದ್ದರು ಎಂಬುದಾಗಿ ಅಧ್ಯಯನ ತಿಳಿಸುತ್ತದೆ. ಡಿಸೆಂಬರ್ ತಿಂಗಳ ಆರಂಭದಲ್ಲಿ ಸಂಯುಕ್ತ ಪ್ರಾಂತದ ಗವರ್ನರನು ತನ್ನ ಅಧಿಕೃತ ಪತ್ರ ವ್ಯವಹಾರದಲ್ಲಿ ಇನ್ಫ್ಲುಯಂಜಾ ಪ್ರಸ್ತಾಪವೇ ಮಾಡಿರಲಿಲ್ಲ.

ಆದರೆ ಭಾರತೀಯ ಪ್ರಜೆಗಳಿಗೆ ಈ ಕಾಯಿಲೆ ಬಗೆಗಿನ ಗ್ರಹಿಕೆ ತುಂಬ ಭಿನ್ನವಾಗಿತ್ತು. ಅವರು ಇದನ್ನೊಂದು ಜಾಗತಿಕ ವಿನಾಶ ಎಂದೇ ಭಾವಿಸಿದ್ದರು. ಪತ್ರಿಕಾ ವರದಿಯೊಂದು ಹೀಗೆ ಹೇಳಿತು. "ಭಾರತವು ಈ ಹಿಂದೆ ಇಷ್ಟೊಂದು ಕಷ್ಟ ಸಮಯವನ್ನು ಕಾಣಲೇ ಇಲ್ಲ... ಹಳ್ಳಿ, ಪಟ್ಟಣಗಳಲ್ಲಿ ದೇಶದ ಉದ್ದಗಲಕ್ಕೂ ದೊಡ್ಡ ಸಾವು ಕಾಣದ ಜಾಗವೇ ಇಲ್ಲ" ಎಂಬುದಾಗಿ ಅಂದಿನ ಪತ್ರಿಕೆಯೊಂದು ವರದಿ ಮಾಡಿತ್ತು.

**ಪರಿಣಾಮಗಳು**

ಭಾರತದ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಜನಸಂಖ್ಯೆಯ 4.5% ರಿಂದ 6% ಪ್ರಮಾಣದ ವರೆಗೆ ಸಾವುಗಳು ಸಂಭವಿಸಿದವು. ಆದರೆ ದಕ್ಷಿಣ ಮತ್ತು ಪೂರ್ವ ಭಾಗಕ್ಕೆ ವೈರಸ್ಸು ಸ್ವಲ್ಪ ತಡವಾಗಿ ತಲುಪಿ ದುರ್ಬಲಗೊಂಡಿದ್ದರಿಂದ, ಸಾವುಗಳು ಪ್ರಮಾಣ 1.5% ದಿಂದ 3% ವರೆಗಿತ್ತು.

ಭೌಗೋಲಿಕತೆಯೊಂದೇ ವಿಭಜಿಸುವ ಸಂಗತಿಯಾಗಿರಲಿಲ್ಲ. ಮುಂಬಯಿಯಲ್ಲಿ, ಬ್ರಿಟಿಷ್ ಪ್ರಜೆಗಳಿಗೆ ಹೋಲಿಸಿದರೆ, ಅಲ್ಲಿನ ಸಾವಿನ ಸಂಖ್ಯೆಯ ಏಳುವರೆ ಪಟ್ಟು ಮುಂಬಯಿಯ ಕೆಳಜಾತಿ ಜನರು ಫ್ಲೂನಿಂದ ಸಾವಿಗೀಡಾದರೆಂದು ಅಧ್ಯಯನವೊಂದು ತಿಳಿಸುತ್ತದೆ. ಬ್ರಿಟಿಷ್ ಇಂಡಿಯಾದಲ್ಲಿ 1000 ಜನಸಂಖ್ಯೆಗೆ 8.3 ಸರಾಸರಿ ಸಾವುಗಳಾಗಿದ್ದರೆ, ಮುಂಬಯಿ ಒಂದರಲ್ಲೇ ಸಾವಿನ ಪ್ರಮಾಣ ಸಾವಿರ ಜನರಿಗೆ 61.6 ಆಗಿತ್ತು. ಮುಂಬಯಿಯಲ್ಲಿ ಕೂಡಾ, ಸಾಮಾಜಿಕ ಆರ್ಥಿಕ ತಾರತಮ್ಯಗಳು ಮರಣ ಪ್ರಮಾಣದ ಹೆಚ್ಚಳಕ್ಕೆ ಕಾರಣವಾಗಿತ್ತು.

**1918 ಇನ್ಫ್ಲೂಯೆಂಜಾಗೆ ಮುಂಬಯಿಯಲ್ಲಿ ಬಲಿಯಾದ್ದು ಯಾರು?**

ಮುಂಬಯಿಯಲ್ಲಿ 1918 ರಲ್ಲಿ ಆಗಿದ್ದ ಫ್ಲೂ ಸಾವನ್ನು 1919ರ ಬ್ರಿಟಿಷ್ ವರದಿಯೊಂದು 1000 ಜನಸಂಖ್ಯೆಗೆ ಈ ರೀತಿ ಲೆಕ್ಕ ಹಾಕಿದೆ: ಕೆಳಜಾತಿಯ ಹಿಂದುಗಳು - 61.6; ಮುಸ್ಲಿಮರು - 19.2 ಇತರ ಹಿಂದೂ ಜಾತಿಗಳು - 18.9; ಭಾರತೀಯ ಕ್ರೈಸ್ತರು - 18.4; ಪಾರ್ಸಿಗಳು - 9; ಯೂರೋಪಿಯನ್ನರು - 8.3.

ಕೊಲ್ಕತ್ತಾದ ಆರೋಗ್ಯ ಅಧಿಕಾರಿಯು ಈ ವ್ಯತ್ಯಾಸ ದರಗಳ ಬಗ್ಗೆ ಹೀಗೆ ಹೇಳುತ್ತಾನೆ: "--. ಮರಣಬಾಹುಳ್ಯಕ್ಕೆ ಅಲ್ಲಿನ ಕೂಲಿಕಾರ ಜನಸಂಖ್ಯೆಯೇ ಕಾರಣ. ಅವರು ಅಮಾಯಕರು ಮತ್ತು ಬಡತನದಿಂದ ಬಾಧಿತರು, ಅತ್ಯಂತ ಕೊಳಕಾದ ಕತ್ತಲು ಕವಿದ ಗುಡಿಸಲಿನಲ್ಲಿ ಅಸ್ವಚ್ಛ ಪರಿಸರದಲ್ಲಿ ವಾಸಿಸುತ್ತಾರೆ. ಅವರು ನಿಭಾಯಿಸಲಾಗದ ಒಂದು ಜನವಿಭಾಗ" ನಿರ್ಗತಿಕ ಬಡವರ ಬಗ್ಗೆ ಅಧಿಕಾರಿಗಳ ಧೋರಣೆಯನ್ನು ಈ ಹೇಳಿಕೆ ವಿವರಿಸುತ್ತದೆ.

**ಬದಲಾವಣೆ ಹೇಗಾಯಿತು?**

ಸಾವಿನ ಸಂಖ್ಯೆ ಭಾರತದಲ್ಲಿ ಅಕ್ಟೋಬರ್ 1918 ರಲ್ಲಿ ಗರಿಷ್ಠ ಸಂಖ್ಯೆ ತಲುಪಿತು. ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಕ್ರಮೇಣ ಇಳಿಯಿತು. ಒಬ್ಬ ಅತ್ಯುನ್ನತ ಬ್ರಿಟಿಷ್ ಅಧಿಕಾರಿ ಡಿಸೆಂಬರ್‌ದಲ್ಲಿ ಬರೆದ; "ಒಂದು ಚಳಿಗಾಲದ ಮಳೆಯು ಎಲ್ಲವನ್ನು ಸರಿಪಡಿಸೀತು ಮತ್ತು ಎಲ್ಲವೂ ತನ್ನಿಂದ ತಾನೇ ನಿಧಾನ ಸುಧಾರಣೆ ಹೊಂದೀತು."

ಬ್ರಿಟಿಷ್ ವಸಾಹತುಶಾಹಿ ಆಡಳಿತದಲ್ಲಿ ಆಳಿಸಿಕೊಳ್ಳುವ ಭಾರತೀಯರು ತೀವ್ರ ದಬ್ಬಾಳಿಕೆಗಳನ್ನು ಎದುರಿಸಿದರು. ಪ್ರತಿಭಟನೆಯನ್ನು ನಡೆಸಿದರು. 1919 ರ ವಸಂತವು ಜಲಿಯಾನ್‌ವಾಲಾ ಬಾಗಾ ದೌರ್ಜನ್ಯಗಳನ್ನು ನೋಡುವಂತಾಯಿತು. ಐದು ವರ್ಷಗಳಿಂದ ಜಾಗತಿಕ ಯುದ್ಧದಲ್ಲಿ ಬ್ರಿಟಿಷರ ಪಾಲುಗಾರರಾಗಿ ಅನುಭವಿಸಿದ ಕಷ್ಟಗಳು ಒಂದೆಡೆ, ಇನ್ಫ್ಲುಯಂಜಾ ಮಹಾಮಾರಿಯಿಂದ ಆಗುತ್ತಿರುವ ಸಾವು ಇನ್ನೊಂದೆಡೆ. ಬ್ರಿಟಿಷ್ ವಸಾಹತು ಆಡಳಿತವು ಭಾರತೀಯ ಪ್ರಜೆಗಳನ್ನು ಮನುಷ್ಯರು ಎಂಬುದಾಗಿ ಎಂದೂ ಪರಿಗಣಿಸಲಿಲ್ಲ. ಒಂದು ರಾಷ್ಟ್ರೀಯ ಪತ್ರಿಕೆಯೊಂದು ಆಗ ಹೀಗೆ ಬರೆಯಿತು: "ಇಷ್ಟೊಂದು ಭೀಕರ ಹಾಗೂ ಮಾರಣಾಂತಿಕ ಸಾಂಕ್ರಾಮಿಕದ ಕಾಲದಲ್ಲಿ, ಭಾರತೀಯ ಸರಕಾರ ತೋರಿದ ನಿರ್ಲಕ್ಷವನ್ನು, ಬೇರೆ ಯಾವುದೇ ನಾಗರಿಕ ದೇಶದ ಸರ್ಕಾರವು ಮಾಡಿದ್ದು ಎಲ್ಲೂ ಕಂಡು ಬರುವುದಿಲ್ಲ."

1918 ಮಹಾಮಾರಿ ಫ್ಲೂ ಕಾಲದಲ್ಲಿ ಭಾರತದ ಬ್ರಿಟಿಷ್ ವಸಾಹತುಶಾಹಿಯ ಒಟ್ಟಾರೆ ನಿರ್ಲಕ್ಷವನ್ನು ಸಂಶೋದನಾತ್ಮಕ ಅಧ್ಯಯನಗಳು ಬಹಿರಂಗಗೊಳಿಸಿವೆ. ಈ ಫ್ಲೂ ಕಾಯಿಲೆಯಿಂದ ಜಾಗತಿಕವಾಗಿ ಸಾವಿಗೀಡಾದ 5 ಕೋಟಿ ಜನರಲ್ಲಿ 1.2 ಕೋಟಿ ಜನರು ಭಾರತೀಯರೇ ಆಗಿದ್ದರೆಂಬುದು ಮತ್ತು ಒಂದನೇ ಜಾಗತಿಕ ಮಹಾಯುದ್ಧದಲ್ಲಿ ಸತ್ತ ಭಾರತೀಯರ ಸಂಖ್ಯೆಗಿಂತ ಹೆಚ್ಚೇ ಇದ್ದರೆಂಬುದು ಗಮನಿಸಲೇಬೇಕಾದ ಸಂಗತಿ.

**ಮೈಸೂರು ಸಂಸ್ಥಾನದಲ್ಲಿ ಫ್ಲೂ:**


ಬ್ರಿಟಿಷ್ ವಸಾಹತುಶಾಹಿಯ ಅಧೀನಕ್ಕೆ ಒಳಪಟ್ಟ ದೇಶಿಯ ರಾಜಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನವೂ ಸೇರಿದ್ದು, 1918 ರ ಸ್ಪಾನಿಶ್ ಫ್ಲೂ ಪಿಡುಗನ್ನು ಸಂಸ್ಥಾನವು ಹೇಗೆ ನಿಭಾಯಿಸಿತೆಂಬ ಅಧ್ಯಯನಗಳೂ ಲಭ್ಯವಾಗುತ್ತಿವೆ.


1918 ರ ಜುಲೈ ತಿಂಗಳಿನಲ್ಲಿ ಬೆಂಗಳೂರಿಗೆ ಫ್ಲೂ ಪ್ರವೇಶ ಪಡೆದಿದ್ದರೂ, ಸೆಪ್ಟೆಂಬರ್ ಮಧ್ಯದಲ್ಲಿ ಒಮ್ಮೆಗೇ ಉಲ್ಬಣಿಸಿ ಪ್ರಾಂತದಾದ್ಯಂತ ಹರಡಿತು. ಸರ್ಕಾರಿ ದಾಖಲೆಗಳಂತೆ ಮೈಸೂರು ಪ್ರಾಂತದಲ್ಲಿ 8.83 ಲಕ್ಷ ಮಂದಿಗೆ ಸೋಂಕು ತಗಲಿತು ಮತ್ತು 1.66 ಲಕ್ಷ ಮಂದಿ ಸಾವಿಗೀಡಾದರು. 1918 ರಲ್ಲಿ ಮೈಸೂರು ಪ್ರಾಂತದಲ್ಲಿ ಸುಮಾರು ಸಾವಿರಕ್ಕೆ 20ರಷ್ಟು ಹೆಚ್ಚು ಫ್ಲೂ ಸಾವುಗಳಾಗಿದ್ದವು. ಇದು ಮುಂಬಯಿ ಪ್ರಾಂತ್ಯದ ಫ್ಲೂ ಸಾವಿನ ಪ್ರಮಾಣ (ಸಾವಿರಕ್ಕೆ 60)ಕ್ಕೆ ಹೋಲಿಸಿದರೆ ಬಹಳ ಕಡಿಮೆ ಇತ್ತು. ಆದರೆ ಮುಂಬಯಿ ಪ್ರಾಂತ್ಯ ಮತ್ತು ಇತರ ಬ್ರಿಟಿಶ್ ಪ್ರದೇಶಗಳಲ್ಲಿ ಸಾವು ನೋವುಗಳು 1919-1920ರಲ್ಲಿ ಮುಂದುವರೆದಿದ್ದವು. ಆದರೆ ಮೈಸೂರು ಪ್ರಾಂತ್ಯದಲ್ಲಿ 1918 ಕೊನೆಯ ಹೊತ್ತಿಗೆ ಸಾವು ನೋವುಗಳು ನಿಯಂತ್ರಣಕ್ಕೆ ಬಂದಿದ್ದವು.

ಮೈಸೂರು ಸಂಸ್ಥಾನವು ರೋಗ ಪೀಡಿತರ ಶುಶ್ರೂಷೆ, ಚಿಕಿತ್ಸೆಗೆ ಉತ್ತಮ ವ್ಯವಸ್ಥೆಯನ್ನು ಮಾಡಿತು. ಅಕ್ಟೋಬರ ತಿಂಗಳ ಮೈಸೂರು ದಸರಾ ಉತ್ಸವದ ವೈಭವವನ್ನು ಕುಗ್ಗಿಸಿ, ದಸರಾ ವಸ್ತುಪ್ರದರ್ಶನಕ್ಕಾಗಿ ನಿರ್ಮಿಸಿದ್ದ ತಾತ್ಕಾಲಿಕ ಕಟ್ಟಡವನ್ನು ಇನ್ಫ್ಲುಯಂಜಾ ಬಾಧಿತರ ಚಿಕಿತ್ಸೆಗಾಗಿ ಬಿಟ್ಟುಕೊಡಲಾಯಿತು. ಸರ್ಕಾರವು ಕೇಂದ್ರ 'ಅನ್ನ ಛತ್ರ'ವೊಂದನ್ನು ಸಂಘಟಿಸಿ, ಅಲ್ಲಿಂದ ಎಲ್ಲ ಅಗತ್ಯ ವಸ್ತುಗಳನ್ನು ವಿವಿಧ ರೆವಿನ್ಯೂ ವಿಭಾಗಗಳಿಗೆ ಕಳುಹಿಸುವ ವ್ಯವಸ್ಥೆ ಮಾಡಿತು. ಬೆಂಗಳೂರಿನ ಸಾರ್ವಜನಿಕ ಆರೋಗ್ಯ ಸಂಸ್ಥೆಯು 'ಥೈಮೋಲಾ' ಮತ್ತು ಇತರ ಔಷಧಿಗಳನ್ನು ಚಿಕಿತ್ಸಾಲಯಗಳಿಗೆ ತಲುಪಿಸುವ ವ್ಯವಸ್ಥೆ ಮಾಡಿತು. ಕಳ್ಳದಾಸ್ತಾನು ಮಾಡುವ ವ್ಯಾಪಾರಿಗಳಿಗೆ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ದಿವಾನ ಎಂ.

ಪುಟ 15 ಕ್ಕೆ





ವ್ಯಂಗ್ಯಚಿತ್ರಗಳು ಸುರೇಂದ್ರನ್, ದಿ ಹಿಂದು ಮತ್ತು ಪಿ.ಮಹಮ್ಮದ್



# ಬರುತ್ತಿದೆ, ಬರುತ್ತಿದೆ 20 ಲಕ್ಷ ಕೋಟಿಗಳ 'ಕೊವಿಡ್ ಜುಮ್ಲಾ'!

ಮೇ 12 ರ ರಾತ್ರಿ 8 ಗಂಟೆಯ ಪ್ರಧಾನ ಮಂತ್ರಿಗಳು ರಾಷ್ಟ್ರವನ್ನುದ್ದೇಶಿಸಿ ಕೊರೊನ ಕಾಲದ ಐದನೇ ಭಾಷಣ ಮಾಡಿದರು. ಕಳೆದ ಹಲವು ದಿನಗಳಿಂದ ಲಕ್ಷಾಂತರ ವಲಸೆ ಕಾರ್ಮಿಕರು ರಸ್ತೆಗಳಲ್ಲಿ ಪಡುತ್ತಿರುವ ಪಾಡು ಮುಖ್ಯಧಾರೆಯ ಮಾಧ್ಯಮಗಳೂ ನಿರ್ಲಕ್ಷಿಸಲಾಗದಂತಹ ಪರಿಸ್ಥಿತಿ ಏರ್ಪಟ್ಟಿದ್ದು, ಕೊನೆಗೂ ಇವರನ್ನು ಅವರವರ ಹುಟ್ಟೂರುಗಳಿಗೆ ತಲುಪಿಸಲು 'ಶ್ರಮಿಕ ಸ್ಪೆಷಲ್' ರೈಲುಗಳನ್ನು ಓಡಿಸಲು ಕೇಂದ್ರ ಸರಕಾರ ಒಪ್ಪಿಕೊಂಡ ಹಿನ್ನೆಲೆಯಲ್ಲಿ ಈ ಭಾಷಣವನ್ನು ಪ್ರಧಾನಿಗಳು ಮಾಡುತ್ತಿದ್ದುದರಿಂದ ಅದರಲ್ಲಿ ದೇಶವನ್ನು ಈಗ ಬಾಧಿಸುತ್ತಿರುವ ಈ ಜ್ವಲಂತ ಸಮಸ್ಯೆಯನ್ನು ನಿಭಾಯಿಸುವ ಬಗ್ಗೆ ಈಗಲಾದರೂ ಹೇಳುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಅದೂ ಹುಸಿಯಾಗಿದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಹೇಳಿರುವಂತೆ ವಲಸೆ ಕಾರ್ಮಿಕರ ಹತಾಶೆ, ಮಹಾಮಾರಿಯ ವಿರುದ್ಧ ಹೋರಾಟದ ಮುಂಚೂಣಿಯಲ್ಲಿರುವ ರಾಜ್ಯ ಸರಕಾರಗಳಿಗೆ ಸಂಪನ್ಮೂಲಗಳ ಪೂರೈಕೆ, ಮತ್ತು ಲಾಕ್‌ಡೌನ್ ಉಂಟು ಮಾಡಿರುವ ಹಸಿವು ಮತ್ತು ಉದ್ಯೋಗಹೀನತೆ ಈ ಬಗ್ಗೆ ಪ್ರಧಾನಿಗಳು ಮಾತನಾಡಲೇ ಇಲ್ಲ.

ಭಾಷಣದಲ್ಲಿ ಕೊನೆಗೂ ಪರಿಹಾರ ಪ್ಯಾಕೆಜಿನ ಪ್ರಸ್ತಾಪ ಬಂತು. ಈ ಬಾರಿ ಬಹುದೊಡ್ಡ ಪ್ಯಾಕೇಜನ್ನೇ ಕೊಡುತ್ತಿರುವುದಾಗಿ ಪ್ರಧಾನ ಮಂತ್ರಿಗಳು ಸಾರಿದರು, ಎಲ್ಲ ಜನವಿಭಾಗಗಳಿಗೆ ಪರಿಹಾರ ಕೊಡುವ 20 ಲಕ್ಷ ಕೋಟಿ ರೂ.ಗಳ "ಆತ್ಮನಿರ್ಭರ್ ಭಾರತ್" (ಸ್ವಾವಲಂಬೀ ಭಾರತ) ಬೃಹತ್ ಆರ್ಥಿಕ ಪ್ಯಾಕೇಜನ್ನು ಹಣಕಾಸು ಮಂತ್ರಿಗಳು ಪ್ರಕಟಿಸುವುದಾಗಿ ಹೇಳಿದರು. ಇದು ನಮ್ಮ ದೇಶದ ಜಿಡಿಪಿಯ 10ಶೇ.ದಷ್ಟಾಗುತ್ತದೆ ಎಂಬುದನ್ನು ಒತ್ತಿ-ಒತ್ತಿ ಹೇಳಿದರು. ನಂತರ, ಈಗಾಗಲೇ ಮೊದಲ ಲಾಕ್‌ಡೌನ್ ಆರಂಭಿಸಿದ "36 ಗಂಟೆಗಳ ಒಳಗೆ" ಪ್ರಕಟಿಸಿದ 1.7ಲಕ್ಷ ಕೋಟಿ ರೂ.ಗಳ ಪ್ಯಾಕೇಜ್ ಮತ್ತು ಅದರ ಮೊದಲು ಮತ್ತು ನಂತರ ಇದುವರೆಗೆ ರಿಝರ್ವ್ ಬ್ಯಾಂಕ್ ಪ್ರಕಟಿಸಿದ ಹಣಕಾಸು ಕ್ರಮಗಳೂ ಈ 20ಲಕ್ಷ ಕೋಟಿಯಲ್ಲಿ, ಅಥವ 10ಶೇ. ಜಿಡಿಪಿಯಲ್ಲಿ ಸೇರಿವೆ ಎಂದು ಸೇರಿಸಿದರು.

ಇದರ ಮೊತ್ತ ಎಷ್ಟೆಂದು ಅವರೇನೂ ಹೇಳಿಲ್ಲ. ಆದರೆ ಆಮೇಲಷ್ಟೇ ಹಲವರ ಗಮನಕ್ಕೆ ಬಂದದ್ದು. ವಾಸ್ತವವಾಗಿ ಜನಸಾಮಾನ್ಯರಿಗೆ ಅದುವರೆಗಿನ ಈ ಕ್ರಮಗಳಿಂದ ಏನೇನೂ ಸಿಕ್ಕಿರದಿದ್ದರೂ, ಅದರ ಮೊತ್ತ ಆಗಲೇ 9.8 ಲಕ್ಷ ಕೊಟಿ ರೂ. ಆಗಿದೆ ಎಂದು ಪರಿಣಿತರು ಆಮೇಲೆ ಲೆಕ್ಕ ಹಾಕಿದ್ದಾರೆ. (ಇಂಡಿಯನ್ ಎಕ್ಸ್‌ಪ್ರೆಸ್, ಮೇ 13-ವಿವರಗಳಿಗೆ ಪುಟ 14ರಲ್ಲಿರುವ ಬಾಕ್ಸ್ ನೋಡಿ) ಇಂತಹ ಅನುಭವದ ಹಿನ್ನೆಲೆಯಲ್ಲಿ ಇನ್ನು ಉಳಿದ 10.2 ಲಕ್ಷ ಕೋಟಿ ರೂ.ಗಳಲ್ಲಿ ಜನಸಾಮಾನ್ಯರ ಸಂಕಟಗಳನ್ನು ಪರಿಹರಿಸಲು ಎಷ್ಟು ತಾನೇ ಸಿಗಬಹುದು ಎಂಬ ಬಗ್ಗೆ ಸಂದೇಹ ಸಹಜವಾಗಿಯೇ ಮೂಡಿತ್ತು.

**ಮೊದಲ ಕಂತು:ವಾಸ್ತವತೆಯ ಅನಾವರಣ**

ಮೇ 13 ರಂದು ಹಣಕಾಸು ಮಂತ್ರಿಗಳು ಪ್ರಕಟಿಸಿದ 'ಪರಿಹಾರ'ಗಳ ಮೊದಲ ಕಂತು ಈ ಸಂದೇಹವನ್ನು ನಿಜಗೊಳಿಸಿದೆ. ಏಕೆಂದರೆ 20 ಲಕ್ಷ ಕೋಟಿ ಪ್ಯಾಕೆಜಿನಲ್ಲಿ, ಹಿಂದಿನ 9.8 ಲಕ್ಷ ಕೋಟಿಯ ನಂತರ ಈಗ 5.94 ಲಕ್ಷ ಕೋಟಿ ರೂ.ಗಳ ಈ ಕಂತಿನಲ್ಲಿ ಹಸಿವಿನಿಂದ ಬಳಲುತ್ತಿರುವ ವಲಸೆ ಕಾರ್ಮಿಕರಿಗೆ ಮತ್ತು ಜೀವನೋಪಾಯಗಳನ್ನು ಕಳಕೊಂಡ ಇತರ ದುಡಿಯುವ ಜನಗಳಿಗೆ ಏನೂ ಇರಲಿಲ್ಲ. ಇದರಲ್ಲಿ ಇದ್ದದ್ದು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಮತ್ತು ಬ್ಯಾಂಕಿಂಗೇತರ ಹಣಕಾಸು ಕಂಪನಿಗಳಿಗೆ ಸಾಲಗಳ ಗ್ಯಾರಂಟಿ, ಹಣದ ಲಭ್ಯತೆಯನ್ನು ಹೆಚ್ಚಿಸುವ ಇನ್ನಷ್ಟು ಕ್ರಮಗಳು.

ಎಂಎಸ್‌ಎಂಇಗಳಿಗೆ ಉತ್ತೇಜನೆಯ ಕ್ರಮಗಳು ಅಗತ್ಯ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಈ ಸರಕಾರದ ಆದ್ಯತೆಗಳೇನಾದರೂ ಏನು? ತುರ್ತಾಗಿ ಮತ್ತು ತಕ್ಷಣವೇ ನೆರವಿನ ಅಗತ್ಯವಿರುವ ಲಕ್ಷಾಂತರ ಜನಗಳು ಹೊಟ್ಟೆಗಿಲ್ಲದೆ ರಸ್ತೆಯಲ್ಲಿದ್ದಾರೆ, ಈ ಹೊತ್ತಿನ ಅನ್ನ ಎಲ್ಲಿಂದ ಬರುತ್ತದೆ ಎಂದು ನೋಡುತ್ತಿದ್ದಾರೆ. ಆದರೂ ಈ 20 ಲಕ್ಷ ಕೋಟಿ ಪ್ಯಾಕೇಜಿನಲ್ಲಿ ಅವರಿಗೇನಾದರೂ ಇದ್ದರೆ ಅದನ್ನೇ ಮೊದಲು ಏಕೆ ಪ್ರಕಟಿಸಿಲ್ಲ?

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾ ಯೆಚುರಿ ಹೇಳಿರುವಂತೆ ಇದು ಕೋಟ್ಯಂತರ ಜನಗಳ ಅಸ್ತಿತ್ವದ ಬಗ್ಗೆಯೇ ಸಂಪೂರ್ಣ ಸಂವೇದನಾಹೀನತೆ, ಈ ಪ್ಯಾಕೇಜ್ ಎನ್ನು ವುದು ಒಂದು ಪ್ರಹಸನ.

ಒಂದು ಪ್ರಜಾಪ್ರಭುತ್ವ ಸರಕಾರದ ಧೋರಣೆಗಳಲ್ಲಿ ಜನತೆಗೇ ಆದ್ಯತೆ ಸಿಗಬೇಕು. ಅದೂ ಅವರು ಸಂಕಟಪಡುತ್ತಿರುವಾಗ. ಏಕೆಂದರೆ ಅವರು ಆರೋಗ್ಯವಂತರಾಗಿದ್ದರೇ ಅರ್ಥವ್ಯವಸ್ಥೆ ಉತ್ತಮಗೊಳ್ಳಲು ಸಾಧ್ಯ. ಮೊದಲು ನೆರವು ಬೇಕಾಗಿರುವುದು ಅವರಿಗೇ. ನಮ್ಮ ಅರ್ಥ ವ್ಯವಸ್ಥೆಯ ಬೆನ್ನೆಲುಬಾದ ಶ್ರಮಿಕರನ್ನು ಉಪವಾಸ ಬಿಡುವುದು, ಹತಾಶಗೊಳಿಸುವುದು ಸಲ್ಲದು ಎನ್ನುತ್ತ ಯೆಚುರಿ ಈ ಪ್ಯಾಕೇಜ್ ದೇಶಕ್ಕೆ ಅತ್ಯಂತ ಅಗತ್ಯವಾಗಿರುವ ಉತ್ತೇಜನೆಯನ್ನೂ ಕೊಡುವುದಿಲ್ಲ, ಜೀವಗಳನ್ನು ಕಾಪಾಡುವುದೂ ಇಲ್ಲ ಎಂದಿದ್ದಾರೆ. ಬೇಡಿಕೆಯೇ ಇಲ್ಲದಿದ್ದರೆ ಪೂರೈಕೆ ಯಾರಿಗಾಗಿ?

ಎಂತಹ ಪ್ಯಾಕೇಜನ್ನು ಮೋದಿ ಸರಕಾರ ಮುಂದಿಡುತ್ತಿದೆ ಎಂಬ ಪ್ರಶ್ನೆ ಸಹಜವಾಗಿಯೇ ಈ ಮೊದಲ ಕಂತನ್ನು ನೋಡಿದಾಗ ಎದ್ದಿದೆ. ಜಗತ್ತಿನಲ್ಲೆಲ್ಲ ಪರಿಹಾರ ಪ್ಯಾಕೇಜ್‌ದ ಮೊತ್ತ ಅಂದರೆ ಸರಕಾರ ನಿಜವಾಗಿಯೂ ಮಾಡುವ ವೆಚ್ಚ. ಆದರೆ ಇಲ್ಲಿ ದೇಶದ ಕೇಂದ್ರೀಯ ಬ್ಯಾಂಕ್ ಕೈಗೊಳ್ಳುವ ಕ್ರಮಗಳ ಮೊತ್ತ, ಇತರ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳ ಮೂಲಕ ವಿತರಣೆಯಾಗ ಬೇಕೆಂದಿರುವ ಸಾಲಗಳ ಮೊತ್ತ ಮಾತ್ರವಲ್ಲ, ವ್ಯಕ್ತಿಗಳಿಗೆ ತೆರಿಗೆ ಪಾವತಿಯನ್ನು ಭಾಗಶಃ ಮುಂದೂಡಿದ್ದರೆ, ಆ ಮೊತ್ತವೂ ಸರಕಾರದ ಉತ್ತೇಜನೆಯ ಮೊತ್ತಕ್ಕೆ ಸೇರಿಕೊಳ್ಳುತ್ತದೆ; ಸರಕಾರ ಹಿಂದಿರುಗಿಸಬೇಕಾಗಿದ ಮೊತ್ತವನ್ನು ಹಿಂದಿರುಗಿಸದೇ ಬಾಕಿಯಿಟ್ಟುಕೊಂಡಿದ್ದರೆ, ಈಗ ಈ ಪ್ಯಾಕೇಜಿನ ಭಾಗವಾಗಿ ಅದನ್ನು ಹಿಂದಿರುಗಿಸುತ್ತಿದ್ದರೆ, ಅದೂ 20ಲಕ್ಷ ಕೋಟಿಗೆ ಸೇರುತ್ತದೆ! ಈಗಾಗಲೇ ಅಸ್ತಿತ್ವಲ್ಲಿರುವ ಯೋಜನೆಗಳನ್ನು ಹೊಸ ಪೊಟ್ಟಣದಲ್ಲಿ ಸುತ್ತಿ ಕೊಟ್ಟರೆ ಅದೂ ಸೇರುತ್ತದೆ!

ಸರಕಾರ ಕೇವಲ ನಾಲ್ಕು ಗಂಟೆಗಳ ನೋಟೀಸಿನಲ್ಲಿ ಹಾಕಿದ ಲಾಕ್‌ಡೌನಿನಿಂದಾಗಿ ಅತ್ಯಂತ ಹೆಚ್ಚು ಸಂಕಷ್ಟದಲ್ಲಿರುವ ವಿಭಾಗಗಳಾದ ವಲಸೆ ಕಾರ್ಮಿಕರು ಮತ್ತಿತರ ಬಡವಿಭಾಗಗಳಿಗೆಂದು ಮೇ 14 ರಂದು ಪ್ರಕಟಿಸಿದ ಈ ಪ್ಯಾಕೇಜಿನ ಎರಡನೇ ಕಂತು ಈ ಕಸರತ್ತನ್ನು ಇನ್ನಷ್ಟು ಸ್ಪಷ್ಟವಾಗಿ ತೋರಿಸಿದೆ. ಇದನ್ನು ಇಲ್ಲಿ ಕೊಟ್ಟಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೋ ಹೇಳಿಕೆ ವಿಶ್ಲೇಷಿಸಿದೆ.




## ಎರಡನೇ ಕಂತು: ಒಂದು ಕ್ರೂರ ವಂಚನೆ

20 ಲಕ್ಷ ಕೋಟಿ ರೂ.ಗಳ ಹಣಕಾಸು ಪ್ಯಾಕೇಜಿನ ಎರಡನೆ ಕಂತು ಒಂದು ಕ್ರೂರ ವಂಚನೆಯಾಗಿ ಬಿಟ್ಟಿದೆ. ಈ ಪ್ಯಾಕೇಜಿನಲ್ಲಿ ವಲಸೆ ಕಾರ್ಮಿಕರು, ರೈತರು ಮತ್ತು ಇತರ ಬಡವರಿಗೆ ಪರಿಹಾರದ ನಿರೀಕ್ಷೆಗಳಿದ್ದವು. ಹಣಕಾಸು ಮಂತ್ರಿಗಳ ಭಾಷಣ ಸರಕಾರ ಜನಗಳಿಗೆ ನೆರವಾಗಲು ಏನು ಮಾಡಿದೆ ಎಂಬುದರ ಬಗ್ಗೆ ಸುಳ್ಳು ದಾವೆಗಳನ್ನೇ ಮಾಡಿದ್ದಾರೆ. ನಮ್ಮ ಜನಗಳ ಅತ್ಯಂತ ಹೆಚ್ಚು ಬಾಧಿತವಾದ ಯಾವ ವಿಭಾಗಕ್ಕೂ, ನಿರ್ದಿಷ್ಟವಾಗಿ ವಲಸೆ ಕಾರ್ಮಿಕರು, ಬೀದಿ ಮಾರಾಟಗಾರರು, ಮನೆಗೆಲಸದವರು, ಮೀನುಗಾರಿಕಾ ಕಾರ್ಮಿಕರು ಮುಂತಾದವರಿಗೆ ಸರಕಾರ ಒಂದೇ ಒಂದು ಪೈಸೆಯನ್ನೂ ವರ್ಗಾಯಿಸಿಲ್ಲ. ಇದು ಮುಖ್ಯವಾಗಿ ಸಾಲಗಳಿಗೆ ಅನುವು ಮಾಡಿಕೊಡುವ ಪ್ಯಾಕೇಜಷ್ಟೇ ಆಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಟೀಕಿಸಿದೆ.


ಒಂದೇ ಒಂದು ನೇರ ಪ್ರಯೋಜನ ಎಂದರೆ ಉಚಿತವಾಗಿ ಆಹಾರಧಾನ್ಯಗಳನ್ನು ಒದಗಿಸುವುದನ್ನು ವಿಸ್ತರಿಸಲು 3500 ಕೋಟಿ ರೂ.ಗಳು ಮಾತ್ರ.

ಪುಟ 14 ನೋಡಿ

ವ್ಯಂಗ್ಯಚಿತ್ರ: ಪಂಜು ಗಂಗೊಳ್ಳಿ




ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ್ ಭಾರತ ನಡುವೆ ವ್ಯಂಗ್ಯಚಿತ್ರ: ಅಲೋಕ್ ನಿರಂತರ್




## ಜೀತದಾಳುಗಳನ್ನು ಸೃಷ್ಟಿಸುವ ಸರಕಾರಗಳು..... ಪುಟ 6 ರಿಂದ

ನೀಡುತ್ತಾರೆ. ಗತಿಯಿಲ್ಲದ ಕುಟುಂಬಗಳು ತಾವು ಬದುಕಿ ಉಳಿಯಲು ತಮ್ಮ ಮಕ್ಕಳ ಭವಿಷ್ಯವನ್ನು ಬಲಿಕೊಟ್ಟಂತೆ ಸರಕಾರಗಳು ತಮ್ಮ ದುಡಿಯುವ ತಳಸ್ತರದ ಜನರ ಭವಿಷ್ಯವನ್ನು ಬಲಿ ಕೊಡುತ್ತಿವೆ.

**ರದ್ದುಗೊಂಡ ಕಾಯಿದೆಗಳು**

ಉತ್ತರ ಪ್ರದೇಶ ಜಾರಿಯಲ್ಲಿದ್ದ 38 ಕಾರ್ಮಿಕ ಕಾಯಿದೆಗಳಲ್ಲಿ 35ನ್ನು 3 ವರ್ಷಗಳ ಅವಧಿಗೆ ರದ್ದುಗೊಳಿಸಿದೆ. ಈ ಕೆಳಗಿನ ಮೂರು ಕಾಯಿದೆಗಳು ಮಾತ್ರ ಜೀವಂತ ಇವೆ. ಬಿಲ್ಡಿಂಗ್ ಅಂಡ್ ಅದರ್ ಕನ್‌ಸ್ಟ್ರಕ್ಷನ್ ವರ್ಕ್ಸ್ ಆಕ್ಟ್, 1996, ವರ್ಕ್‌ಮೆನ್ ಕಾಂಪೆನ್‌ಶೇಷನ್ ಆಕ್ಟ್, 1923, ಬಾಂಡೆಡ್ ಲೇಬರ್ಸ್ ಆಕ್ಟ್, 1976 ಮತ್ತು ಸೆಕ್ಷನ್ 5 ಆಫ್ ಪೇಮೆಂಟ್ಸ್ ಆಫ್ ವೇಜಸ್ ಆಕ್ಟ್ 1936. ರದ್ದುಗೊಂಡ ಪ್ರಮುಖ ಕಾಯಿದೆಗಳು ಇಂತಿವೆ. ಫ್ಯಾಕ್ಟರೀಸ್ ಆಕ್ಟ್, ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್, ಟ್ರೇಡ್ ಯೂನಿಯನ್ ಆಕ್ಟ್, ಇನ್‌ಡಸ್ಟ್ರಿಯಲ್ ಸೇಫ್ಟಿ, ಹಲ್ತ್, ವರ್ಕಿಂಗ್ ಕಂಡಿಶನ್, ಪೇಮೆಂಟ್ ಆಫ್ ಮಿನಿಮಮ್ ವೇಜಸ್ ಆಕ್ಟ್, ಪೇಮೆಂಟ್ ಆಫ್ ಭೋನಸ್ ಅಂಡ್ ಪ್ರೊವಿಡೆಂಡ್ ಫಂಡ್ ಮುಂತಾದ ಕಾಯಿದೆಗಳು ರದ್ದುಗೊಂಡಿವೆ. ಕೆಲಸದ ಅವಧಿ, ರಜೆ, ಕ್ಯಾಂಟೀನ್, ಕೆಲಸಗಾರರ ಆರೋಗ್ಯ, ಭದ್ರತೆ, ಅವಗಢದ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳು, ಫ್ಯಾಕ್ಟರಿಯಲ್ಲಿರಬೇಕಾದ ಕನಿಷ್ಠ ಸವಲತ್ತುಮುಂತಾದ ವುಗಳನ್ನುಫ್ಯಾಕ್ಟರೀಸ್ ಆಕ್ಟ್ 1987 ಒಳಗೊಂಡಿದೆ. ಕಾರ್ಮಿಕರು ಮತ್ತು ಮ್ಯಾನೇಜ್‌ಮೆಂಟ್ ನಡುವಿನ ತಕರಾರುಗಳನ್ನು ಪರಿಹರಿಸುವ ಮೆಕಾನಿಸಂನ್ನು ಇಂಡಸ್ಟ್ರೀಯಲ್ ಡಿಸ್ಪ್ಯುಟ್ ಆಕ್ಟ್ 1947 ನೀಡುತ್ತದೆ. 100ಕ್ಕಿಂತ ಹೆಚ್ಚಿನ ಕೆಲಸಗಾರರು ದುಡಿಯುವ ಫ್ಯಾಕ್ಟರಿ ಮುಚ್ಚುನ ಮುನ್ನ ಸರಕಾರದ ಒಪ್ಪಿಗೆ ಪಡೆಯಬೇಕೆಂದು ಈ ಕಾಯಿದೆ ಆದೇಶಿಸುತ್ತದೆ. ಕಾನೂನುಬಾಹಿರವಾಗಿ ಫ್ಯಾಕ್ಟರಿ ಮುಚ್ಚಿದರೆ ಅಥವಾ ಕೆಲಸದಿಂದ ತೆಗೆದರೆ ಕೆಲಸಗಾರರಿಗೆ ಪರಿಹಾರ ಕೊಡಬೇಕೆಂದು ಕಾಯಿದೆ ಸೂಚಿಸುತ್ತದೆ, ಕೆಲಸದ ಸಂದರ್ಭದಲ್ಲಿ ತಮಗಾಗುವ ಅನ್ಯಾಯವನ್ನು ಪ್ರಶ್ನಿಸಲು ಮತ್ತು ನ್ಯಾಯಕ್ಕಾಗಿ ಸಂಘಟಿತರಾಗಿ ಹೊರಾಡಲು ಟ್ರೇಡ್ ಯೂನಿಯನ್ ಆಕ್ಟ್ ಅವಕಾಶ ಕಲ್ಪಿಸುತ್ತದೆ. ಕನಿಷ್ಠ ಏಳು ಅಥವಾ ಅದಕ್ಕಿಂತ ಹೆಚ್ಚಿನ ಕೆಲಸಗಾರರು ಸೇರಿಕೊಂಡು ಕಾರ್ಮಿಕ ಸಂಘಟನೆ ಕಟ್ಟಿಕೊಳ್ಳಬಹುದೆಂದು ಟ್ರೇಡ್ ಯೂನಿಯನ್ ಆಕ್ಟ್ 1947 ಹೇಳುತ್ತದೆ. ಊಟ, ವಸತಿ, ಶಿಕ್ಷಣ, ಆರೊಗ್ಯ ಇತ್ಯಾದಿ ಮೂಲಸೌಕರ್ಯಗಳನ್ನು ಖರೀದಿಸುವ ಶಕ್ತಿ ನೀಡುವ ಕನಿಷ್ಠ ವೇತನವನ್ನು ಕೆಲಸಗಾರರಿಗೆ ನೀಡಬೇಕೆಂದು ಮಿನಿಮಮ್ ವೇಜಸ್ ಆಕ್ಟ್ 1948 ಹೇಳುತ್ತದೆ. ಮಾಲೀಕರು, ಕೆಲಸಗಾರರು ಮತ್ತು ಸರಕಾರದ ಪ್ರತಿನಿಧಿಗಳನ್ನು ಇರುವ ವೇಜ್ ಬೋರ್ಡ್‌ನ್ನು ಸರಕಾರ ನೇಮಿಸುತ್ತದೆ. ಈ ಬೊರ್ಡ್ ಕಾಲಕಾಲಕ್ಕೆ ನೀಡಬೇಕಾದ ಕನಿಷ್ಠ ವೇತನವನ್ನು ನಿರ್ಧರಿಸುತ್ತದೆ.

ಕೆಲಸಗಾರರಿಗೆ ಬಲ ನೀಡುವ ಕಾಯಿದೆಗಳನ್ನು ರದ್ದುಗೊಳಿಸುವ ಮೂಲಕ ಹಲವು ಸಂದೇಶಗಳನ್ನು ಸರಕಾರ ರವಾನಿಸುತ್ತಿದೆ. ಕ್ಯಾಂಟೀನ್, ಶೌಚಾಲಯ, ಗಾಳಿ, ಬೆಳಕುಗಳಿಲ್ಲದ ನರಕಸದೃಶ್ಯ ಸ್ಥಳಗಳಲ್ಲಿ ಕೆಲಸ ಮಾಡಲು ರೆಡಿ ಆಗಿ ಎನ್ನುವ ಸಂದೇಶ. ಆಪಾಯಕಾರಿ ಮೆಶಿನ್‌ಗಳಲ್ಲಿ ಕೆಲಸ ಮಾಡುವವರು ಗ್ಲೌಸ್, ಹೆಲ್ಮಟ್ ಇತ್ಯಾದಿ ರಕ್ಷಾ ಕವಚಗಳನ್ನು ನಿರೀಕ್ಷಿಸಬೇಡಿ ಎನ್ನುವ ಸಂದೇಶ. ಕೆಲಸದ ಅವಧಿ 8ರಿಂದ 12 ಗಂಟೆಗಳಿಗೆ ವಿಸ್ತರಿಸಬಹುದು. ಹಾಗೆಂದು ಹೆಚ್ಚಿನ ಅವಧಿಗೆ ಹೆಚ್ಚಿನ ಸಂಬಳ ನಿರೀಕ್ಷಿಸಬೇಡಿ ಎನ್ನುವ ಸಂದೇಶ. ವಾರಕ್ಕೊಂದು ರಜೆ, ಹಬ್ಬ ಹರಿದಿನಗಳಿಗೆ ರಜೆ ಇದೆ ಎನ್ನುವ ಭ್ರಮೆ ಇಟ್ಟುಕೊಳ್ಳಬೇಡಿ. ಕೆಲಸ ಸಂದರ್ಭದಲ್ಲಿ ಅವಘಡ ಆಗಿ ಕಾರ್ಮಿಕರು ಗಾಯಗೊಂಡರೆ ಅವರ ಕುಟುಂಬದವರೇ ನೋಡಿಕೊಳ್ಳಬೇಕು. ರಜೆ, ಸಂಬಳ, ಸವಲತ್ತು ಎಲ್ಲವೂ ಕಡಿತಗೊಂಡಿದೆ ಎಂದು ಸಂಘ ಕಟ್ಟಿಕೊಂಡು ಪ್ರತಿಭಟಿಸಲು ನಿಂತರೆ ಕೆಲಸ ಕಳೆದುಕೊಳ್ಳುವುದು ಗ್ಯಾರಂಟಿ. ಮಾಲೀಕನ ಕೆಟ್ಟ ನಿರ್ಧಾರಗಳಿಂದ ಉದ್ದಿಮೆ ಸೋತರೆ ಫ್ಯಾಕ್ಟರಿ ಮುಚ್ಚುವುದು ಗ್ಯಾರಂಟಿ. ಮಾಲೀಕರ ತಪ್ಪಿಗೆ ಕೆಲಸ ಕಳೆದುಕೊಂಡ ಕಾರ್ಮಿಕರು ಪರಿಹಾರ ನಿರೀಕ್ಷಿಸುವ ಅಭ್ಯಾಸದಿಂದ ಹೊರಬರಬೇಕು. ಕೆಲಸಕ್ಕೆ ಎಷ್ಟು ಸಂಬಳ ಕೊಡಬೇಕೆಂದು ಮಾಲೀಕ ತೀರ್ಮಾನಿಸುತ್ತಾನೆ. ಅವನು ಕೊಡುವ ಸಂಬಳ ಶ್ರಮಿಕರ ಊಟ, ವಸತಿ, ಶಿಕ್ಷಣ, ಆರೋಗ್ಯ ಖರ್ಚುಗಳನ್ನು ಭರಿಸದಿದ್ದರೂ ಶ್ರಮಿಕರು ಸುಮ್ಮನಿರಬೇಕು. ಅಂದರೆ ಕಾರ್ಮಿಕ ಕಾಯಿದೆಗಳನ್ನು ರದ್ದುಗೊಳಿಸಿ ಕಾರ್ಮಿಕರನ್ನು ಜೀತದಾಳುಗಳನ್ನಾಗಿ ಪರಿವರ್ತಿಸುವ ಪ್ರಯತ್ನ ಇದು. ಅನುಕೂಲಸ್ಥರ ಆರ್ಥಿಕ ಆರೋಗ್ಯ ಸುಧಾರಿಸಲು ಕಾರ್ಮಿಕರ ಆರ್ಥಿಕ ಆರೋಗ್ಯವನ್ನು ಬಲಿಕೊಡುವ ಕ್ರಮ ಇದು.




ಕಾಯಿದೆ ರದ್ದುಪಡಿಸಲು ರಾಜ್ಯ ಸರಕಾರಗಳು ನೀಡುವ ಕಾರಣ ಸರಳವಾಗಿದೆ. ಕೊರೋನದಿಂದ ಆ ರಾಜ್ಯಗಳ ಆರ್ಥಿಕ ಸ್ಥಿತಿ ಕುಸಿದಿದೆ. ಕುಸಿದ ಆರ್ಥಿಕ ಸ್ಥಿತಿ ಸುಧಾರಿಸಬೇಕಾದರೆ ಉದ್ದಿಮೆಗಳು ಬಂಡವಾಳ ಹೂಡಬೇಕು. ಬಿಗಿ ಕಾರ್ಮಿಕ ಕಾಯಿದೆಗಳಿದ್ದರೆ ಉದ್ದಿಮೆಗಳು ಬಂಡವಾಳ ಹೂಡುವುದಿಲ್ಲ. ಕಾರ್ಮಿಕ ಕಾಯಿದೆಗಳು ಸಡಿಲಗೊಂಡರೆ ಬಂಡವಾಳ ಹರಿದು ಬರುತ್ತದೆ ಎನ್ನುವುದು ಮೊದಲ ಕಾರಣ. ಬೇರೆ ರಾಜ್ಯಗಳಿಗೆ ಉದ್ಯೋಗ ನಿಮಿತ್ತ ವಲಸೆ ಹೋದ ಕಾರ್ಮಿಕರು ಕೊರೋನ ಸಮಸ್ಯೆಯಿಂದ ಹಿಂದಕ್ಕೆ ಬರುತ್ತಿದ್ದಾರೆ. ಇವರಿಗೆಲ್ಲ ಉದ್ಯೋಗ ಸೃಷ್ಟಿಸುವುದು ರಾಜ್ಯ ಸರಕಾರದ ಜವಾಬ್ದಾರಿ. ಈ ಜವಾಬ್ದಾರಿಯನ್ನು ನಿರ್ವಹಿಸಲು ಬಿಗಿ ಕಾರ್ಮಿಕ ಕಾಯಿದೆಗಳು ಅಡ್ಡಿಯಾಗುತ್ತಿವೆ. ಆದುದರಿಂದ ಅವುಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಬೇಕೆನ್ನುವುದು ಎರಡನೇ ಕಾರಣ. ಮೂರನೇ ಕಾರಣ ಸ್ವಲ್ಪ ಸಂಕೀರ್ಣವಾಗಿದೆ. ಕೊರೋನ ಸಮಸ್ಯೆ ಚೀನಾದಿಂದಲೇ ಆರಂಭವಾಗಿದೆ ಎಂದು ಆಮೇರಿಕಾ ಆರೋಪಿಸುತ್ತಿದೆ. ಚೀನಾದ ನಿರಾಕರಣೆಯ ನಡುವೆಯೂ ಪಶ್ಚಿಮದ ರಾಷ್ಟ್ರಗಳು ಚೀನಾವನ್ನು ಸಂದೇಹದಿಂದ ನೋಡುವುದು ಕಡಿಮೆಯಾಗಿಲ್ಲ. ಇದೇ ಜಗಳದ ಕಾರಣಕ್ಕೆ ಆಮೇರಿಕಾ ಮತ್ತು ಪಶ್ಚಿಮ ರಾಷ್ಟ್ರಗಳ ಬಹುರಾಷ್ಟ್ರೀಯ ಕಂಪೆನಿಗಳು ಚೀನಾದಿಂದ ತಮ್ಮ ಉದ್ದಿಮೆಗಳನ್ನು ಬೇರೆ ದೇಶಗಳಿಗೆ ಸ್ಥಳಾಂತರಿಸುವ ಸಾಧ್ಯತೆ ಇದೆ ಎನ್ನುವ ಊಹೆ ಚಲಾವಣೆಯಲ್ಲಿದೆ. ಒಂದು ವೇಳೆ ಈ ಊಹೆ ನಿಜವಾದರೆ ಬಹುರಾಷ್ಟ್ರೀಯ ಕಂಪೆನಿಗಳನ್ನು ಆಕರ್ಷಿಸಲು ಭಾರತ ರೆಡಿ ಇರಬೇಕಾಗುತ್ತದೆ. ಅಂದರೆ ಬಂಡವಾಳ ಬಯಸುವ ರೂಪದಲ್ಲಿ ನಮ್ಮ ಸಂಪನ್ಮೂಲವನ್ನು ಬಳಸಬಹುದೆನ್ನುವ ಸಂದೇಶ ನೀಡಬೇಕು. ಈ ಊಹೆಯ ಭಾಗವಾಗಿ ಕಾರ್ಮಿಕ ಕಾಯಿದೆಗಳು ರದ್ದುಗೊಂಡಿವೆ ಎನ್ನುವುದು ಮೂರನೇ ಕಾರಣ.

ವಾಸ್ತವ

ಈ ಮೂರು ಕಾರಣಗಳು ಕೂಡ ವಾಸ್ತವಕ್ಕೆ ದೂರವಾಗಿವೆ. ಕಾಯಿದೆ ರದ್ದು ಪಡಿಸಿದ ರಾಜ್ಯ ಮಾತ್ರವಲ್ಲ ಇಡೀ ದೇಶದ ಆರ್ಥಿಕ ಸ್ಥಿತಿ ಕೊರೋನ ಸಮಸ್ಯೆಗೆ ಮುನ್ನವೇ ಪಾತಾಳ ಸೇರಿತ್ತು. ಕೇಂದ್ರ ಸರಕಾರದ ದೋಷಪೂರಿತ ಆರ್ಥಿಕ ನೀತಿಗಳಿಂದ ದೇಶದ ಆರ್ಥಿಕತೆ ಹಳ್ಳ ಹಿಡಿದಿರುವ ಕತೆ ಎಲ್ಲರಿಗೂ ತಿಳಿದಿರುವ ವಿಷಯ. ಅದನ್ನು ಪುನಃ ಇಲ್ಲಿ ಚರ್ಚಿಸುವ ಅವಶ್ಯಕತೆ ಇಲ್ಲ. ಇನ್ನು ಉತ್ತರ ಪ್ರದೇಶ, ಮಧ್ಯಪ್ರದೇಶಗಳ ಆರ್ಥಿಕ ಸ್ಥಿತಿ ಬಗ್ಗೆ ಚರ್ಚಿಸುವುದಾದರೆ ಇವು ಐವತ್ತರ ದಶಕದಿಂದಲೇಅಭಿವೃದ್ಧಿ ಹೊಂದಿದ ರಾಜ್ಯಗಳ ಸಾಲಿನಲ್ಲಿ ಇರಲೇ ಇಲ್ಲ. ಬಿಹಾರ, ಮಧ್ಯಪ್ರದೇಶ, ಉತ್ತರ ಪ್ರದೇಶಗಳನ್ನು ಬೀಮಾರು (ಹಿಂದಿಯಲ್ಲಿ ರೋಗಗ್ರಸ್ಥ) ರಾಜ್ಯಗಳೆಂದು ಗುರುತಿಸಲಾಗುತ್ತಿತ್ತು. ಇವನ್ನು ಬೀಮಾರು ಮಾಡಿದ್ದು ಕಾರ್ಮಿಕರಲ್ಲ. ಇಲ್ಲಿನ ರಾಜ್ಯ ಸರಕಾರಗಳು ಇತರ ರಾಜ್ಯಗಳಂತೆ ಜನಪ್ರತಿನಿಧಿಗಳನ್ನು ಹೊಂದಿದ್ದವು. ಜಾತಿ, ಧರ್ಮ, ದುಡ್ಡಿನ ಬಲದಲ್ಲಿ ಅಲ್ಲಿನ ಅನುಕೂಲಸ್ಥರು ಜನಪ್ರತಿನಿಧಿಗಳಾಗುತ್ತಿದ್ದರು. ಇವರು ರಾಜ್ಯದ ಕೃಷಿ, ವ್ಯಾಪಾರ, ಉದ್ದಿಮೆ, ಕಾರ್ಮಿಕ, ಶಿಕ್ಷಣ, ಆರೋಗ್ಯ ಕಾಯಿದೆಗಳನ್ನು ಮಾಡುತ್ತಿದ್ದರು. ಈ ಕಾಯಿದೆಗಳನ್ನು ಅಲ್ಲಿನ ನೌಕರಶಾಹಿ ಜಾರಿಗೆ ತರುತ್ತಿತ್ತು. ಹಲವು ದಶಕಗಳ ಕಾಲ ಅಲ್ಲಿನ ಮೇಲ್ಜಾತಿಗಳೇ ನೌಕರಶಾಹಿಯಲ್ಲಿ ತುಂಬಿದ್ದರು. ನಂತರದ ದಿನಗಳಲ್ಲಿ ಹಿಂದುಳಿದ ಜಾತಿಗಳಿಂದಲೂ ನೌಕರಶಾಹಿ ಬಂದಿದೆ. ಹಾಗೆಂದು ಇವರು ಭ್ರಷ್ಟಾಚಾರದಲ್ಲಿ ಮೇಲ್ಜಾತಿಗಳು ಹಾಕಿಕೊಟ್ಟ ಮಾದರಿಯನ್ನು ಮೀರಲಿಲ್ಲ. ಹೀಗೆ ಲಂಚ, ಭ್ರಷ್ಟಾಚಾರಗಳು ಬೇರೆ ರಾಜ್ಯಗಳಲ್ಲಿ ಸುದ್ದಿ ಮಾಡುವ ಮೊದಲೇ ಈ ರಾಜ್ಯಗಳಲ್ಲಿ ಕಾರುಬಾರು ಮಾಡುತ್ತಿದ್ದವು. ಮಾಧ್ಯಮ ಮತ್ತು ನ್ಯಾಯಾಂಗಗಳು, ಜನಪ್ರತಿನಿಧಿಗಳು ಮತ್ತು ನೌಕರಶಾಹಿಗಿಂತ ವಿಶೇಷ ಭಿನ್ನ ಇರಲಿಲ್ಲ. ಇವರೆಲ್ಲ ಸೇರಿ ಈ ರಾಜ್ಯಗಳನ್ನು ಬೀಮಾರು ರಾಜ್ಯ ಮಾಡಿದ್ದಾರೆ.

ಹಾಗೆಂದು ಜನಪ್ರತಿನಿಧಿಗಳ, ನೌಕರಶಾಹಿಯ, ನ್ಯಾಯಾಂಗದ ಸಂಬಳ, ಪಿಂಚಣಿ, ಸಾರಿಗೆ, ಸಂಪರ್ಕ ಸವಲತ್ತುಗಳನ್ನು ರದ್ದುಗೊಳಿಸುವ ಆರ್ಡಿನೆನ್ಸ್‌ನ್ನು ಈ ರಾಜ್ಯಗಳು ಜಾರಿಗೆ ತರಲಿಲ್ಲ. ಅಷ್ಟು ಮಾತ್ರವಲ್ಲ ರಾಜ್ಯದ ಅಭಿವೃದ್ಧಿ ನೀತಿಯನ್ನು ರೂಪಿಸುವವರ, ಅನುಷ್ಠಾನಗೊಳಿಸುವವರ, ನ್ಯಾಯ ತೀರ್ಮಾನ ಮಾಡುವವರ ಕೆಲಸದ ಅವಧಿ ಕೂಡ ವಿಸ್ತರಣೆಗೊಂಡಿಲ್ಲ. ನೀತಿ ನಿರೂಪಣೆ, ಅನುಷ್ಠಾನ ಮಾಡುವವರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವ ತಿದ್ದುಪಡಿಗಳನ್ನು ಈ ರಾಜ್ಯಗಳು ಮಾಡಿಲ್ಲ. ಆದರೆ ಆರ್ಥಿಕ ನೀತಿ ರೂಪಿಸುವಲ್ಲಿ, ಅನುಷ್ಠಾನಗೊಳಿಸುವಲ್ಲಿ, ಸರಿತಪ್ಪುಗಳನ್ನು ತೀರ್ಮಾನಿಸುವಲ್ಲಿ ಏನೇನೂ ಪಾತ್ರ ಇಲ್ಲದ ಕಾರ್ಮಿಕರ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಕ್ರಮಗಳನ್ನು ಕೈಗೊಂಡಿದ್ದಾರೆ. ಕಾರ್ಮಿಕರು ಆದೇಶ ನೀಡುವುದಿಲ್ಲ; ಮೇಲಿನವರ ಆದೇಶವನ್ನು ಪಾಲಿಸುತ್ತಾರೆ. ಆದೇಶ ಪಾಲನೆಯಿಂದ ಅನುಕೂಲವಾದರೆ ಎಲ್ಲ ಮಾನಸಮ್ಮಾನಗಳು ಮೇಲಿನವರಿಗೆ ಹೋಗುತ್ತವೆ. ಒಂದು ವೇಳೆ ಆದೇಶ ಪಾಲನೆಯಿಂದ ನಷ್ಟವಾದರೆ ಎಲ್ಲ ಸಮಸ್ಯೆಗಳನ್ನೂ ಕೆಳಗಿನವರು ಅನುಭವಿಸಬೇಕಾಗುತ್ತದೆ. ಇದನ್ನು ಫ್ಯೂಡಲ್ ಮಾನಸಿಕ ಸ್ಥಿತಿ ಎನ್ನುವುದು. ಇಂತಹ ಮಾನಸಿಕ ಸ್ಥಿತಿ ಇಡೀ ದೇಶವ್ಯಾಪಿ ಇದೆ. ಆದೇಶ ಮಾಡುವವರ ತಪ್ಪನ್ನು ಆದೇಶ ಪಾಲಿಸುವವರ ಮೇಲೆ ಹೊರಿಸುವುದು ಸಾಮಾನ್ಯವಾಗಿದೆ. ಯೋಗ್ಯತೆ ಬದಲು ಜಾತಿ, ಧರ್ಮ, ಲಿಂಗ, ವರ್ಗ ಇತ್ಯಾದಿ ಚಾರಿತ್ರಿಕ ಅನುಕೂಲದಿಂದ ಅಧಿಕಾರಕ್ಕೆ ಏರುವವರ ಸಂಖ್ಯೆ ಹೆಚ್ಚಾದಂತೆ ಎಲ್ಲ ದೋಷಗಳಿಗೆ ಕೆಳಗಿನವರನ್ನು ಕಾರಣ ಮಾಡುವುದು ಹೆಚ್ಚಾಗುತ್ತದೆ.

ಈ ರಾಜ್ಯಗಳ ಆರ್ಥಿಕ ದುಃಸ್ಥಿತಿಗೆ ಅಲ್ಲಿನ ಜನಪ್ರತಿನಿಧಿಗಳು, ನೌಕರಶಾಹಿ, ನ್ಯಾಯಾಂಗ, ಮಾಧ್ಯಮಗಳು ಕಾರಣ. ಇವು ಸುಧಾರಿಸದಿದ್ದರೆ ಅಲ್ಲಿನ ಆರ್ಥಿಕ ಸ್ಥಿತಿ ಸುಧಾರಿಸುವುದಿಲ್ಲ. ಇವನ್ನು ಸುಧಾರಿಸುವ ಒಂದೂ ಕ್ರಮವು ಕಾಣುತ್ತಿಲ್ಲ. ಅದರ ಬದಲು ರಾಜ್ಯದ ಭವಿಷ್ಯವನ್ನು ತೀರ್ಮಾನಿಸುವಲ್ಲಿ ಏನೇನೂ ಪಾತ್ರ ಇಲ್ಲದ ಕಾರ್ಮಿಕರ ಕಾಯಿದೆಗಳನ್ನು ರದ್ದುಗೊಳಿಸಿ ಹೊಸ ಹೂಡಿಕೆ ನಿರೀಕ್ಷಿಸುವುದು ಬಂಡವಾಳಿಗರಿಗೆ ಮಾಡುವ ಅವಮಾನ. ಬಂಡವಾಳ ಹೂಡುವವರು ಮೂರ್ಖರಲ್ಲ. ಅವರಿಗೆ ಸಡಿಲ ಕಾರ್ಮಿಕ ಕಾಯಿದೆ ಜೊತೆಗೆ ಒಪ್ಪಂದಗಳನ್ನು ಜಾರಿಗೊಳಿಸುವ ಕಾನೂನು ವ್ಯವಸ್ಥೆ, ಖಾಸಗಿ ಆಸ್ತಿ ಮತ್ತು ಜೀವದ ಭದ್ರತೆ, ಅಚ್ಚುಕಟ್ಟಾದ ಸಾರಿಗೆ ಸಂಪರ್ಕ, ನುರಿತ ಮಾನವ ಸಂಪನ್ಮೂಲ, ಭ್ರಷ್ಟಾಚಾರರಹಿತ ಆಡಳಿತ ಇವೆಲ್ಲ ಮುಖ್ಯ. ಇವುಗಳ ಸುಧಾರಣೆ ಇಲ್ಲದೆ ಕಾರ್ಮಿಕ ಕಾಯಿದೆಗಳನ್ನು ರದ್ದುಗೊಳಿಸುವುದರಿಂದ ಆ ರಾಜ್ಯಗಳ ಆರ್ಥಿಕ ಸ್ಥಿತಿ ಸುಧಾರಿಸುವುದಿಲ್ಲ. ಇವೆಲ್ಲ ಸುಧಾರಣೆಗಳನ್ನು ಬಹುರಾಷ್ಟ್ರೀಯ ಕಂಪೆನಿಗಳಿಗೂ ಬಯಸುತ್ತವೆ. ಆದುದರಿಂದ ಇತರ ಸುಧಾರಣೆಗಳಿಲ್ಲದೆ ಕೇವಲ ಕಾರ್ಮಿಕ ಕಾಯಿದೆಗಳನ್ನು ರದ್ದುಪಡಿಸಿ ಬಹುರಾಷ್ಟ್ರೀಯ ಕಂಪೆನಿಗಳ ಹೂಡಿಕೆ ನಿರೀಕ್ಷಿಸುವುದು ಹಗಲು ಕನಸು ಕಾಣುವುದಕ್ಕೆ ಸಮ.

ಬತ್ತಿದ ಸಂಸ್ಕೃತಿ

ತಳಸ್ತರ ವಿರುದ್ಧದ ನೀತಿಗಳು ಕೊರೋನ ಸಂದರ್ಭದ ಸ್ಪೆಶಾಲಿಟಿ ಇಲ್ಲ. ನಮ್ಮ ಇಡೀ ಅಭಿವೃದ್ಧಿ ರಾಜಕಾರಣ, ಸಮಾಜ, ಸಂಸ್ಕೃತಿಗಳು ಹಿಂದಿನಿಂದಲೂ ತಳಸ್ತರ ವಿರುದ್ಧವೇ ಇದ್ದುದು. ನಮ್ಮ ತೆರಿಗೆ ನೀತಿ, ಭೂನೀತಿ, ಹಣಕಾಸು ನೀತಿ, ಸಾಲ ನೀತಿ, ಶಿಕ್ಷಣ, ಆರೋಗ್ಯ ನೀತಿಗಳು ಯಾವುವು ಕೂಡ ತಳಸ್ತರ ಜನರ ಪರ ಇಲ್ಲ. ಇವೆಲ್ಲವೂ ಸಂಪನ್ಮೂಲವನ್ನು ಮೇಲಿನಿಂದ ಕೆಳಗೆ ಹರಿಸುವ ಬದಲು ಕೆಳಗಿನಿಂದ ಮೇಲೆ ಹರಿಸುತ್ತಿವೆ. ಪ್ರಜಾಪ್ರಭುತ್ವ ಎಂದರೆ ಜನರಿಂದ ಜನರಿಗಾಗಿ ಜನರೇ ನಡೆಸುವ ಸರಕಾರ ಎನ್ನುವುದು ಕ್ರಮೇಣ ಬಲಾಢ್ಯರಿಂದ ಬಲಾಢ್ಯರಿಗಾಗಿ ಬಲಾಢ್ಯರೇ ನಡೆಸುವ ಸರಕಾರಗಳಾಗಿವೆ. ಬಲಾಢ್ಯಪರ ಕಾಯಿದೆ, ಕಾನೂನುಗಳನ್ನು ಜಾರಿಗೆ ಬಂದಿವೆ. ಇವು ಅನಧಿಕೃತರನ್ನು, ಬಡವರನ್ನು, ಅಸಮಾರ್ಥರನ್ನು, ಕ್ರಿಮಿನಲ್‌ಗಳನ್ನು, ದೇಶದ್ರೋಹಿಗಳನ್ನು ಸೃಷ್ಟಿಸುತ್ತಿವೆ. ಇವೇ ಪ್ರಜಾಪ್ರಭುತ್ವ ಎಂದು ಜನರನ್ನು ಸಮೂಹ ಮಾಧ್ಯಮ ಒಪ್ಪಿಸುತ್ತಿದೆ. ಜನರ ದೃಷ್ಟಿಕೋನ, ಲೋಕದೃಷ್ಟಿ, ಅಭಿರುಚಿ, ಆಶಯಗಳನ್ನು ಸಮೂಹ ಮಾಧ್ಯಮರೂಪಿಸುತ್ತಿದೆ. ತಮ್ಮ ಸಮಸ್ಯೆ ಪರಿಹಾರಕ್ಕೆ ಸಂಘಟಿತ ಪ್ರಯತ್ನಕ್ಕಿಂತ ನಾಯಕರನ್ನು ಅದರಲ್ಲೂ ಸರ್ವಾಧಿಕಾರಿಗಳನ್ನು ಅವಲಂಬಿಸುವುದು ವಾಸಿ ಎಂದು ಜನರನ್ನು ಒಪ್ಪಿಸುತ್ತಿದೆ. ಮಾಸ್ ಮೀಡಿಯಾ ರೀತಿಯಲ್ಲೇ ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಯು ಜನರ ದೃಷ್ಟಿಕೋನವನ್ನು ರೂಪಿಸುತ್ತಿವೆ. ಅಸಮಾನತೆ ಸಹಜ ಎನ್ನುವ ಪಾಠವನ್ನು ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಯ ಪಠ್ಯ, ಸಾಂಸ್ಥಿಕ ಹಾಗು ಭೌತಿಕ ಸ್ವರೂಪಗಳು ಮಾಡುತ್ತಿವೆ. ಇದು ಆದೇಶಕ್ಕೆ ತಲೆಬಾಗಲು ತರಬೇತು ನೀಡುತ್ತಿದೆ. ಇದು ಬಡತನಕ್ಕೆ ಬಡವರೇ ಕಾರಣವೆಂದು ಜನರನ್ನು ನಂಬಿಸುತ್ತಿದೆ.

ಇಂತಹ ಪರಿಸರದಲ್ಲಿ ಕಾರ್ಮಿಕ ಕಾಯಿದೆಗಳನ್ನು ರದ್ದುಗೊಳಿಸಿದನ್ನು ಕೋರ್ಟ್‌ನಲ್ಲಿ ಪ್ರಶ್ನಿಸಿದರೆ ಅಲ್ಲಿ ನ್ಯಾಯ ಸಿಗಬಹುದೆನ್ನುವ ಗ್ಯಾರಂಟಿ ಇಲ್ಲ. ಏಕೆಂದರೆ ವಲಸೆ ಕಾರ್ಮಿಕರ ಸ್ಥಿತಿ ತುಂಬಾ ಚಿಂತಾಜನಕವಾಗಿದೆ, ಕೋರ್ಟ್ ಮಧ್ಯಪ್ರವೇಶ ಮಾಡಿ ಅವರ ಸ್ಥಿತಿಯನ್ನು ಸುಧಾರಿಸಲು ಸರಕಾರಕ್ಕೆ ಆದೇಶ ನೀಡಬೇಕೆನ್ನುವ ಕೋರಿಕೆಯನ್ನು ಉನ್ನತ ನ್ಯಾಯಾಲಯ ಪರಿಗಣಿಸಿಲ್ಲ. ಇದೇ ರೀತಿಯಲ್ಲಿ ಕೊರೋನ ಸಂದರ್ಭದಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಆರಂಭಿಸಿ ಗ್ರಾಮೀಣ ಜನರಿಗೆ ಉದ್ಯೋಗ ನೀಡಲು ಆದೇಶಿಸಬೇಕೆನ್ನುವ ಕೋರಿಕೆಯನ್ನು ಕೂಡ ಕೋರ್ಟ್ ವಿಚಾರಣೆಗೆ ಎತ್ತಿಕೊಂಡಿಲ್ಲ. ಇಂತಹ ಜನಪರ ಸಮಸ್ಯೆಗಳ ವಿಚಾರಣೆಗಳಿಗೆ ಅವಕಾಶ ನೀಡದ ಕೋರ್ಟ್ ಜನಾಂಗೀಯ ದ್ವೇಷದ ಬೀಜ ಬಿತ್ತುವ ಮಾಧ್ಯಮ ಒಡೆಯನ ಸಮಸ್ಯೆ ಪರಿಹಾರಕ್ಕೆ ತುರ್ತು ಅವಕಾಶ ನೀಡಿದೆ. ಇಂದು ಕೋರ್ಟ್ ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕಿಂತ ಹೆಚ್ಚು ಅಧಿಕಾರದಲ್ಲಿರುವ ಸರಕಾರದ ಧ್ವನಿಯನ್ನು ಪ್ರತಿನಿಧಿಸುತ್ತಿದೆ. ಇಂತಹ ಕೋರ್ಟ್‌ನಿಂದ ಕಾರ್ಮಿಕರ ಹಕ್ಕು ಹರಣವಾಗುವುದನ್ನು ತಡೆಗಟ್ಟಲು ಸಾಧ್ಯವಿಲ್ಲ. ಇವೆಲ್ಲವೂ ಹಿಂದಿನಿಂದಲೂ ನಡೆದುಕೊಂಡು ಬಂದ ಸಂಗತಿಗಳು. ಆದರೆ ಸಂಕಷ್ಟದ ಇಂದಿನ ದಿನಗಳಲ್ಲಿ ಇವು ತಮ್ಮ ನಿಜ ಸ್ವರೂಪವನ್ನು ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ವ್ಯಕ್ತ ಪಡಿಸುತ್ತಿವೆ. ಬತ್ತಿದ ಕೆರೆಯ ಕೆಸರು ಕಣ್ಣಿಗೆ ರಾಚುವಂತೆ ಬತ್ತಿದ ಸಂಸ್ಕೃತಿಯ ಕೆಸರು ಕ್ರೌರ್ಯ, ಹಿಂಸೆ, ಅಸಮಾನತೆಗಳ ರೂಪದಲ್ಲಿ ಮುಖಕ್ಕೆ ರಾಚುತ್ತಿವೆ. ಇದನ್ನೂ ಸಹಜವೆಂದು ಬಗೆಯುವುದು ಮತ್ತು ಸಣ್ಣಪುಟ್ಟ ಬದಲಾವಣೆಗಳನ್ನು ಮುಂದುವರಿಸಬಹುದೆಂದು ಬಗೆಯುವುದು ಅಮಾನುಷ ಕೃತ್ಯವಾಗುತ್ತದೆ. ಮೂಲಭೂತ ಪರಿವರ್ತನೆಗೆ ಕಾಲ ಪಕ್ವವಾಗಿದೆಯೆಂದು ತಿಳಿದು ಸಿದ್ಧತೆ ಮಾಡಿಕೊಳ್ಳುವುದು ಬುದ್ಧಿವಂತಿಕೆಯಾಗುತ್ತದೆ.

ಶತಮಾನೋತ್ಸವ ಲೇಖನ ಮಾಲೆ-26

# ಧೀರೋದಾತ್ತ ತೆಭಾಗಾ ಹೋರಾಟ

**1946-47ರ ತೆಭಾಗಾ ಚಳುವಳಿಯು ಮರೆಯಲಾಗದ ಪರಿಣಾಮವನ್ನು ಬೀರಿತು; ಹೋರಾಟದ ಕೆಚ್ಚನ್ನು ಮತ್ತು ತ್ಯಾಗ ಭಾವವನ್ನು ಮತ್ತು ಒಡನಾಡಿ ಭಾವನೆಯನ್ನು ರೈತರಲ್ಲಿ ತುಂಬಿತು; ಸಂಘಟಿತ ವರ್ಗ ಹೋರಾಟವಿಲ್ಲದೇ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ಕಲಿಸಿತು. ದೇಶದ ಇತರ ಭಾಗಗಳ ರೈತ ಹೋರಾಟಗಳಿಗಿಂತ ತೆಭಾಗಾ ಚಳುವಳಿಯು ವಿಶಿಷ್ಟವಾದದ್ದು. ಬೇರೆಲ್ಲಾ ಪ್ರಾಂತಗಳಲ್ಲಿ, ಹೋರಾಟಗಳು ಕೆಲವು ಪ್ರದೇಶಗಳಿಗೆ ಸೀಮಿತವಾಗಿದ್ದವು, ಅದೇ ಬಂಗಾಳದಲ್ಲಿ ಚಳುವಳಿಯು ಇಡೀ ಪ್ರಾಂತವನ್ನು ಆವರಿಸಿಕೊಂಡಿತ್ತು. ಈ ಚಳುವಳಿಯ ಅತ್ಯಂತ ಗಮನಾರ್ಹ ಅಂಶವೇನೆಂದರೆ ಅದು ವರ್ಗಹೋರಾಟ ಆಧಾರಿತ ಹಿಂದೂ-ಮುಸ್ಲಿಂ ಐಕ್ಯತೆಯ ದೀಪವನ್ನು ಬೆಳಗಿದ್ದು, ಮತ್ತು ಅದು ನೌಖಾಲಿಯನ್ನೂ ಒಳಗೊಂಡಂತೆ ಬಂಗಾಳದ ಎಲ್ಲಾ ಕಡೆಗಳಿಂದಲೂ ಎಲ್ಲಾ ಸಮುದಾಯಗಳ ಲಕ್ಷಾಂತರ ರೈತರನ್ನು ಹುರಿದುಂಬಿಸಿ ತನ್ನ ತೆಕ್ಕೆಗೆ ತೆಗೆದುಕೊಂಡದ್ದು.**

**ಕನ್ನಡಕ್ಕೆ: ಟಿ.ಸುರೇಂದ್ರ ರಾವ್**

ಯುದ್ಧಾನಂತರದ ಅವಧಿಯಲ್ಲಿ, 1946ರ ಆದಿಯಲ್ಲಿ, ಬರ್ಗಾದಾರರಿಗೆ ತೆಭಾಗ, ಅಂದರೆ ಮೂರನೇ ಎರಡು ಭಾಗ ಸಿಗಬೇಕು ಎಂಬ ಬೇಡಿಕೆಯ ಆಧಾರದಲ್ಲಿ ಒಂದು ಹೋರಾಟವನ್ನು ಶುರುಮಾಡಬೇಕು ಎಂದು ಬಂಗಾಳ ಪ್ರಾಂತ ಕಿಸಾನ್ ಸಭಾವು ತೀರ್ಮಾನ ಮಾಡಿತು. ಹೀಗಾಗಿ, ಬ್ರಿಟನ್ನಿನಿಂದ ಬಂದ ಕ್ಯಾಬಿನೆಟ್ ಕಮಿಷನ್ (ಸಂಪುಟ ಆಯೋಗ)ನೊಂದಿಗೆ ಚರ್ಚೆ ಮತ್ತು ಇತರ ರಾಜಕೀಯ ಬೆಳವಣಿಗೆಗಳು ನಡೆಯುತ್ತಿರುವಾಗಲೇ, ಬಂಗಾಳದಲ್ಲಿ ತೆಭಾಗಾ ಚಳುವಳಿಯ ಅಲೆ ಮೇಲೇರುತ್ತಿತ್ತು.

ಬಂಗಾಳದ ರೈತರು ಭೂಮಾಲಕರ ಪಾಲನ್ನು ಕಡಿಮೆ ಮಾಡಬೇಕೆಂಬ ಘೋಷಣೆ ಎತ್ತುತ್ತಾ ಬಂದಿದ್ದರು. ತೆಭಾಗಾ ಅಂದರೆ ಬೆಳೆದ ಒಟ್ಟು ಫಸಲಿನಲ್ಲಿ ಒಂದು ಭಾಗವನ್ನು ಭೂಮಾಲಕ ಅಥವಾ ಜೋತೆದಾರನಿಗೆ ಕೊಟ್ಟು, ಉಳಿದ ಮೂರನೇ ಎರಡು ಭಾಗವನ್ನು ಬರ್ಗಾದಾರ್(ಅಥವಾ ಅಧಿಯಾರ್ ಅಥವಾ ಬಾಗಿದಾರ್ ಅಥವಾ ಬಾಗ್‌ಚಾಶಿ ಎಂದು ಬಂಗಾಳದ ಬೇರೆ ಬೇರೆ ಕಡೆಗಳಲ್ಲಿ ಕರೆಯುತ್ತಿದ್ದ) ಒಬ್ಬ ಭಾಗ ಬೆಳೆಗಾರ (ಬಂಗಾಳದ ಗೇಣಿ ಕಾಯಿದೆ 1855 ಪ್ರಕಾರ ಗೇಣಿದಾರ ಅಲ್ಲ) ತನಗೇ ಇಟ್ಟುಕೊಳ್ಳುವುದು. ಸಾಮಾನ್ಯ ರೂಢಿಯ ಪ್ರಕಾರ ಫಸಲನ್ನು ಮಾಲಕ ಮತ್ತು ಫಸಲು ಕೊಯ್ಯುವವ ಪರಸ್ಪರ 50:50 ಹಂಚಿಕೊಳ್ಳುವುದು ಇತ್ತು.

ಹಲವಾರು ಪ್ರದೇಶಗಳಲ್ಲಿ, ಬರ್ಗಾದಾರನಿಗೆ ಕೊಟ್ಟ ಬೆಳೆ-ಸಾಲದ ಮೇಲೆ ದುಬಾರಿ ಬಡ್ಡಿ ವಿಧಿಸುವುದು, ಕಡಿಮೆ ಬೆಳೆ ಬಂದ ವರ್ಷ ಬಿತ್ತನೆ ಹಾಗು ನಂತರದ ಸಮಯದಲ್ಲಿ ನೀಡಿದ ಆಹಾರಕ್ಕಾಗಿ ಹೀಗೆ ಬೇರೆ ಬೇರೆ ಹೆಸರಿನಲ್ಲಿ ಈ ಸಾಗುವಳಿದಾರನ ಅರ್ಧ ಭಾಗವನ್ನು ಕಡಿತ ಮಾಡಲಾಗುತ್ತಿತ್ತು. ಹೀಗೆ ಸುಗ್ಗಿಯ ನಂತರ ಕೂಡ, ಸಾಗುವಳಿದಾರ ಭೂಮಾಲಕನ ಮರ್ಜಿಯಲ್ಲಿ ದಿವಾಳಿ ಆಗುತ್ತಿದ್ದುದೇ ಹೆಚ್ಚು. ಈ ಶೋಷಣೆಯ ವಿಧಾನವನ್ನು ಬರ್ಗಾದಾರರು ತೀವ್ರವಾಗಿ ವಿರೋಧಿಸುತ್ತಿದ್ದರು ಮತ್ತು ಇದರ ಪರಿಣಾಮವಾಗಿ ಶುರುವಾದ ಚಳುವಳಿಯು ಜನರ ಭಾಷೆಯಲ್ಲಿ ತೆಭಾಗಾ ಚಳುವಳಿ ಎಂದು ಪ್ರಸಿದ್ಧವಾಗಿತ್ತು.

ಬರ್ಗಾದಾರರ ಹಕ್ಕುಗಳನ್ನು ಬಂಗಾಳ ಭೂಕಂದಾಯ ಆಯೋಗವು 1940ರಲ್ಲಿ ಒಪ್ಪಿಕೊಂಡು ಬಂಗಾಳದ ಸರ್ಕಾರಕ್ಕೆ ವರದಿ ನೀಡಿತು. ಇದನ್ನು ಜನರು ಹಾಗೂ ಸರ್ಕಾರ ಒಪ್ಪಿಕೊಂಡರು. ಆದರೆ ಈ ಶಿಫಾರಸುಗಳನ್ನು ಸರ್ಕಾರವು ಜಾರಿ ಮಾಡಲಿಲ್ಲ.

ಈ ಹಿನ್ನೆಲೆಯಲ್ಲಿ, ತೆಭಾಗಾ ಬೇಡಿಕೆ ಮೇಲೆ ಕಿಸಾನ್ ಸಭಾ ನೀಡಿದ ಕರೆಯು ಅತ್ಯಂತ ಕಡಿಮೆ ಸಮಯದಲ್ಲಿ ಬಂಗಾಳದ ಲಕ್ಷಾಂತರ ಬರ್ಗಾದಾರರನ್ನು ಆಕರ್ಷಿಸಿತು. ಕಿಸಾನ್ ಸಭಾ ನೇತೃತ್ವದ ಬಂಗಾಳದ ರೈತರ ಈ ತೆಭಾಗಾ ಚಳುವಳಿಯು ಅತ್ಯಂತ ದೊಡ್ಡ, ಉಗ್ರ ರೂಪದ ವಿಶಾಲ ತಳಹದಿಯ ವರ್ಗ ಹೋರಾಟವಾಗಿತ್ತು, ಅದು ಕಮ್ಯುನಿಸ್ಟರ ನಾಯಕತ್ವದಲ್ಲಿತ್ತು. ಆದು ಪ್ರಾಂತೀಯ ಮಟ್ಟದ ಚಳುವಳಿಯಾಗಿದ್ದರೂ, ವಿಶೇಷವಾಗಿ ಬರ್ಗಾದಾರರ ಸಂಖ್ಯೆ ಎಲ್ಲಿ ಹೆಚ್ಚಿತ್ತೋ ಮತ್ತು ಶೋಷಣೆ ಹೆಚ್ಚಾಗಿತ್ತೋ, ಬಂಗಾಳದ ಆ ಉತ್ತರ ಜಿಲ್ಲೆಗಳಲ್ಲಿ ಬರ್ಗಾದಾರರ ಸ್ಪಂದನೆ ಅತ್ಯಮೋಘವಾಗಿತ್ತು. ಅದು ತನ್ನ ತೆಕ್ಕೆಯಲ್ಲಿ ಬಂಗಾಳದ 28 ಜಿಲ್ಲೆಗಳ 15 ಜಿಲ್ಲೆಗಳನ್ನು ಒಳಗೊಂಡಿತ್ತು ಮತ್ತು ಜೋತೆದಾರರು, ಅವರ ಗೂಂಡಾಗಳು ಮತ್ತು ಪೋಲಿಸರ ವಿರುದ್ಧ ಕನಿಷ್ಟ 50 ಲಕ್ಷ ಬಡ ಹಾಗೂ ತೀರ ದಮನಿತ ವಿಭಾಗದ ರೈತರು ವೀರೋಚಿತವಾಗಿ ಹೋರಾಡಿದರು; ಎಲ್ಲಾ ಕಡೆಗಳಲ್ಲೂ ಕೋಮು ದ್ವೇಷ ಹಾಗೂ ಗಲಭೆಗಳ ನಡುವೆಯೂ ಸರ್ಕಾರಿ ಹಾಗೂ ಸರ್ಕಾರೇತರ ಅಪಪ್ರಚಾರಗಳನ್ನು ಧಿಕ್ಕರಿಸಿದರು. ಮಾರ್ಗದರ್ಶನ ನೀಡುವ ಹಾಗೂ ಸ್ಥಳೀಯವಾಗಿ ಚಳುವಳಿಯನ್ನು ನಡೆಸುವ ಸಲುವಾಗಿ ರೈತರು ತಾವೇ ತಾವಾಗಿ ಹಲವಾರು ಪ್ರದೇಶಗಳಲ್ಲಿ ಸ್ಥಳೀಯ ಕ್ರಿಯಾ ಸಮಿತಿಗಳನ್ನು ರಚಿಸಿಕೊಂಡಿದ್ದರು.

ನವೆಂಬರ್ 1946 ರಿಂದ ಫೆಬ್ರವರಿ 1947ರವರೆಗೆ ಇಡೀ ಸುಗ್ಗಿಯ ಸಮಯದಲ್ಲಿ ಈ ಚಳುವಳಿ ವ್ಯಾಪಿಸಿತ್ತು. ಎಲ್ಲ ಕಡೆಗಳಲ್ಲೂ ಮುಖ್ಯವಾಗಿ ಉತ್ತರ ಜಿಲ್ಲೆಗಳಾದ ದಿನಾಜ್‌ಪುರ್, ರಂಗ್‌ಪುರ್ ಮತ್ತು ಜಲಪೈಗುರಿ, ಕರಾವಳಿಯಲ್ಲಿ 24-ಪರಗಣ ಮತ್ತು ಖುಲ್ನಾ, ಪೂರ್ವದಲ್ಲಿ ಮೈಮೆನ್‌ಸಿಂಗ್ ಜಿಲ್ಲೆ, ಆದಿವಾಸಿ ಪ್ರದೇಶಗಳಾದ ಅಸ್ಸಾಮ್ ಗಡಿಯಲ್ಲಿನ ಗಾರೋ ಬೆಟ್ಟಪ್ರದೇಶದಲ್ಲಿ ಹೋರಾಡುತ್ತಿದ್ದ ರೈತರ ಮೇಲೆ ಪೋಲಿಸರು ಭೀಕರ ದಾಳಿ ದಬ್ಬಾಳಿಕೆಗಳನ್ನು ನಡೆಸಿದರು. ಜೋತೆದಾರರು ಮತ್ತವರ ಗೂಂಡಾಗಳು ರೈತರನ್ನು ಹೊಡೆದರು ಮತ್ತು ಕೊಂದು ಹಾಕಿದರೂ ಕೂಡ.

ನಂತರದ ತಿಂಗಳಲ್ಲಿ ಮುಖ್ಯವಾಗಿ ಜನವರಿ ಮತ್ತು ಫೆಬ್ರವರಿ 1947ರಲ್ಲಿ, ಶಸ್ತ್ರಸಜ್ಜಿತ ಪೋಲಿಸ್ ಪಡೆಗಳು ಅನೇಕ ಕಡೆಗಳಲ್ಲಿ ಗೋಲಿಬಾರ್ ಮಾಡಿದರು. ಎಲ್ಲರೂ ಸೇರಿ 70 ರೈತರು - ಹಿಂದೂ, ಮುಸ್ಲಿಂ ಮತ್ತು ಆದಿವಾಸಿ ಪುರುಷರು ಮತ್ತು ಮಹಿಳೆಯರು – ಈ ಚಳುವಳಿಯಲ್ಲಿ ಪ್ರಾಣ ತೆತ್ತರು. ಬಹುಪಾಲು ಪೋಲಿಸ್ ಗೋಲಿಬಾರಿನಲ್ಲಿ ಮಡಿದರೆ ನಾಲ್ವರು ಜೈಲಿನಲ್ಲಿ ಕೊನೆಯುಸಿರೆಳೆದರು. ರೈತರ ಹೋರಾಟವನ್ನು ಬಗ್ಗುಬಡಿಯಬೇಕೆಂದು



ಕಲಾವಿದ ಸೋಮನಾಥ ಹೋರೆ ಕಂಡಂತೆ

ತೀರ್ಮಾನಿಸಿದ ಮುಸ್ಲಿಂ ಲೀಗ್ ಸಚಿವ ಸಂಪುಟ ಭಾರಿ ದಾಳಿ ದಬ್ಬಾಳಿಕೆಗಳನ್ನು ಮಾಡಿತು. ಹಿಂದು ಮತ್ತು ಮುಸ್ಲಿಂ ಜೋತೆದಾರರು ಭವಿಷ್ಯದ ಸಂವಿಧಾನ ಮತ್ತು ಮಧ್ಯಂತರ ಸರ್ಕಾರದ ವಿಚಾರವಾಗಿ ಪರಸ್ಪರ ಕಚ್ಚಾಡುತ್ತಿದ್ದರೂ, ಲೀಗ್ ಸರ್ಕಾರದ ದಾಳಿ ದಬ್ಬಾಳಿಕೆಯ ದಮನಕಾರಿ ಕಾರ್ಯಾಚರಣೆಗಳನ್ನು ಬೆಂಬಲಿಸುವ ಮೂಲಕ ತಮ್ಮ ವರ್ಗ ಗುಣವನ್ನು ಬಯಲು ಮಾಡಿಕೊಂಡರು.

ಆದರೆ, ಹೋರಾಡುತ್ತಿದ್ದ ರೈತರು ಎಂದಿಗೂ ಶರಣಾಗಲಿಲ್ಲ, ಬದಲು ತಮ್ಮ ನ್ಯಾಯಯುತ ಬೇಡಿಕೆಗಳ ಬಗ್ಗೆ ಅದಮ್ಯ ನಂಬಿಕೆ ಇಟ್ಟು ಧೈರ್ಯದಿಂದ ದಾಳಿಯನ್ನು ಎದುರಿಸಿದರು. ತೆಭಾಗಾ ಚಳುವಳಿಯು ಇಡೀ ರೈತ ಸಮುದಾಯವನ್ನು, ಪುರುಷರು ಮತ್ತು ಮಹಿಳೆಯರು ಜತೆಗೂಡಿ, ಮುಖ್ಯವಾಗಿ ಕೃಷಿಕೂಲಿಗಾರರನ್ನೂ ಒಳಗೊಂಡಂತೆ ಎಲ್ಲಾ ಬಡ ವಿಭಾಗದ ದುಡಿಯುವವರನ್ನು ಬಡಿದೆಬ್ಬಿಸಿತು, ಹಲವಾರು ಕಡೆಗಳಲ್ಲಿ ಉಗ್ರ ಹೋರಾಟ ನಡೆಯಿತು. ದೊಡ್ಡ ಸಂಖ್ಯೆಯಲ್ಲಿ ಮಹಿಳಾ ರೈತರು ಈ ಚಳುವಳಿಯಲ್ಲಿ ಕ್ರಿಯಾಶೀಲ ಪಾತ್ರ ವಹಿಸಿದರು ಮತ್ತು ಪೋಲಿಸರ ವಿರುದ್ಧ ವೀರಾವೇಶದಿಂದ ಹೋರಾಡಿದರು. ಜನಜನಿತವಾದ ಘಟನೆಯೊಂದರಲ್ಲಿ, ರೈತ ಮಹಿಳೆಯೊಬ್ಬರು ಶಸ್ತ್ರಸಜ್ಜಿತ ಪೋಲಿಸರೊಬ್ಬರಿಂದ ರೈಫಲನ್ನು ಕಸಿದುಕೊಂಡರು ಕೂಡ.

1946-47ರ ತೆಭಾಗಾ ಚಳುವಳಿಯು ಮರೆಯಲಾಗದ ಪರಿಣಾಮವನ್ನು ಬೀರಿತು; ಹೋರಾಟದ ಕೆಚ್ಚನ್ನು ಮತ್ತು ತ್ಯಾಗ ಭಾವವನ್ನು ಮತ್ತು ಒಡನಾಡಿ ಭಾವನೆಯನ್ನು ರೈತರಲ್ಲಿ ತುಂಬಿತು; ಸಂಘಟಿತ ವರ್ಗ ಹೋರಾಟವಿಲ್ಲದೇ ಏನನ್ನೂ ಸಾಧಿಸಲು ಸಾಧ್ಯವಿಲ್ಲ ; ಕೃಷಿ ಕಾರ್ಮಿಕರು ಮತ್ತು ಬಡ ರೈತರು ಬರ್ಗಾದಾರರನ್ನೂ ಒಳಗೊಂಡಂತೆ ಹೋರಾಡಲು ಒಗ್ಗೂಡಬೇಕು, ಆ ಮೂಲಕ ವರ್ಗ ಐಕ್ಯತೆ ಹಾಗೂ ಸ್ವಾಭಿಮಾನವನ್ನು ಬೆಳೆಸುತ್ತದೆ; ವರ್ಗ ಹೋರಾಟದಲ್ಲಿ ಮಹಿಳಾ ರೈತರೂ ಪ್ರಮುಖವಾದ ಪಾತ್ರ ವಹಿಸಬೇಕು; ವರ್ಗ ಹೋರಾಟದಲ್ಲಿ ಶೋಷಕರು ಯಾವಾಗಲೂ ನಂಬಿಕೆ ದ್ರೋಹ ಬಗೆಯುತ್ತಾರೆ; ಮತ್ತು ಈ ಚಳುವಳಿಯನ್ನು ಸಾಕಷ್ಟು ತಯಾರಿಯೊಂದಿಗೆ ಮತ್ತು ಉತ್ತಮ ರಾಜಕೀಯ ತಿಳುವಳಿಕೆಯೊಂದಿಗೆ ಮುಂದುವರಿಸಬೇಕು ಎಂಬುದನ್ನು ಕಲಿಸಿತು.


ಇವೆಲ್ಲವುಗಳ ನಡುವೆಯೂ, ನಾಯಕತ್ವದಿಂದ ಕೆಲವು ತಪ್ಪುಗಳು ಆದವು: ಪೋಲಿಸ್ ಮತ್ತು ಜೋತೆದಾರರ ದಾಳಿಗಳಿಂದ ರಕ್ಷಣೆ ಪಡೆಯಲು ಸ್ವಯಂಸೇವಕರ ಸಂಘಟನೆಯನ್ನು ರಚಿಸುವ ನಿಟ್ಟಿನಲ್ಲಿ ಸಾಕಷ್ಟು ಸಿದ್ಧತೆಯಾಗಿರಲಿಲ್ಲ; ದೊಡ್ಡ ಮಟ್ಟದಲ್ಲಿ ಪೋಲಿಸ್ ದಬ್ಬಾಳಿಕೆ ಶುರುವಾಗುವ ತನಕವೂ ಕಾರ್ಮಿಕ ವರ್ಗದ ಬೆಂಬಲ ಪಡೆದಿರಲಿಲ್ಲ; ಈ ಚಳುವಳಿಗೆ ಬೆಂಬಲವಾಗಿ ಪ್ರಟ್ಟಣಗಳ ಮಧ್ಯಮ ವರ್ಗದವರನ್ನು ಕರೆತರುವಲ್ಲಿ ಅಗತ್ಯ ಪ್ರಯತ್ನ ಮಾಡಿರಲಿಲ್ಲ; ಬರ್ಗಾದಾರರಿಗೆ ಮೂರನೇ ಎರಡು ಪಾಲು ಪಡೆಯುವಲ್ಲಿ ದೊಡ್ಡ ಮತ್ತು ಸಣ್ಣ ಜೋತೆದಾರರ ನಡುವೆ ವ್ಯತ್ಯಾಸ ಮಾಡದ ಪರಿಣಾಮವಾಗಿ ದೊಡ್ಡ ಜೋತೆದಾರರು ಬಹುಪಾಲು ಸಣ್ಣ ಜೋತೆದಾರರನ್ನು ತಮ್ಮ ಜೊತೆಯಲ್ಲಿ ಇಟ್ಟುಕೊಂಡು, ದಾಳಿಯಲ್ಲಿ ಅವರ ಬೆಂಬಲವನ್ನೂ ಪಡೆಯಲು ಸಾಧ್ಯವಾಯಿತು; ಹಾಗೆಂದ ಮಾತ್ರಕ್ಕೆ, ಈ ತಪ್ಪುಗಳು ಈ ಚಳುವಳಿಯ ಮಹತ್ವವನ್ನು ಅಥವಾ ವೀರಾವೇಶವನ್ನು ಯಾವುದೇ ಕಾರಣಕ್ಕೂ ಕುಗ್ಗಿಸಲಿಲ್ಲ.

ದೇಶದ ಇತರ ಭಾಗಗಳ ರೈತ ಹೋರಾಟಗಳಿಗಿಂತ ತೆಭಾಗಾ ಚಳುವಳಿಯು ವಿಶಿಷ್ಟವಾದದ್ದು. ಬೇರೆಲ್ಲಾ ಪ್ರಾಂತಗಳಲ್ಲಿ, ಹೋರಾಟಗಳು ಕೆಲವು ಪ್ರದೇಶಗಳಿಗೆ ಸೀಮಿತವಾಗಿದ್ದವು, ಅದೇ ಬಂಗಾಳದಲ್ಲಿ ಚಳುವಳಿಯು ಇಡೀ ಪ್ರಾಂತವನ್ನು ಆವರಿಸಿಕೊಂಡಿತ್ತು. ಉದಾಹರಣೆಗೆ, ಕೇರಳದಲ್ಲಿ ಭೂಮಾಲಕರ ವಿರುದ್ಧದ ರೈತ ಚಳುವಳಿಯು ಹಿಂದಿನ ಮಲಬಾರ್ ಜಿಲ್ಲೆಗೆ, ವಿಶೇಷವಾಗಿ ಉತ್ತರದ ಪ್ರದೇಶಗಳಿಗೆ ಸೀಮಿತವಾಗಿತ್ತು. ಅದೇ ರೀತಿಯಲ್ಲಿ, ಆಂಧ್ರದಲ್ಲಿ, ರೈತ ಚಳುವಳಿಯು(ತೆಲಂಗಾಣ ಚಳುವಳಿ ಹೊರತುಪಡಿಸಿ) ಬಹುಪಾಲು ಕೃಷ್ಣಾ, ಗುಂಟೂರು ಮತ್ತು ಗೋದಾವರಿ ಜಿಲ್ಲೆಗಳಿಗೆ ಸೀಮಿತವಾಗಿತ್ತು. ಮತ್ತು ಮಹಾರಾಷ್ಟ್ರದಲ್ಲಿ ರೈತ ಚಳುವಳಿಯು ವಾರ್ಲಿ ರೈತರು ಮತ್ತು ಒಂದೆರಡು ತಾಲೂಕುಗಳಿಗೆ ಮಾತ್ರ ಸೀಮಿತವಾಗಿತ್ತು.

ಬಹಳ ಮುಖ್ಯವಾಗಿ, ಆಗಸ್ಟ್ 1946ರಲ್ಲಿ ಕಲ್ಕತ್ತಾದಲ್ಲಿ ಪದೇ ಪದೇ ಏಳುತ್ತಿದ್ದ ಸಣ್ಣ-ಸಣ್ಣ ಅವಧಿಗಳ ಕೋಮು ಹತ್ಯಾಕಾಂಡ ಮತ್ತು ಅಕ್ಟೋಬರ್ 1946ರಲ್ಲಿ ಪೂರ್ವ ಜಿಲ್ಲೆಗಳಲ್ಲಿ ಒಂದಾಗಿದ್ದ ನೌಖಾಲಿಯಲ್ಲಿನ ಗಲಭೆಗಳ ಹಿಂದೆಯೇ ನಡೆದ ಶೋಷಿತ ರೈತರ ವರ್ಗ-ಚಳುವಳಿಯಾಗಿತ್ತು ತೆಭಾಗಾ ಚಳುವಳಿ. ಈ ಚಳುವಳಿ ನಡೆದ ಮುಖ್ಯ ಪ್ರದೇಶದಲ್ಲಿ ಯಾವುದೇ ಒಂದು ಸಮುದಾಯಕ್ಕೆ ಸೇರಿದ ರೈತರಾಗಿರದೇ ಅವರು ಹಿಂದೂ ಮತ್ತು ಮುಸ್ಲಿಂ ಎರಡೂ ಸಮುದಾಯಗಳಿಗೆ ಸೇರಿದವರಾಗಿದ್ದರು. ಅಲ್ಲಿ ಜತೆಯಲ್ಲೇ ಆದಿವಾಸಿ ವಿಭಾಗದ ರೈತರೂ

ಪುಟ 14 ಕ್ಕೆ

**ದೊಡ್ಡ ಸಂಖ್ಯೆಯಲ್ಲಿ ಮಹಿಳಾ ರೈತರು ಈ ಚಳುವಳಿಯಲ್ಲಿ ಕ್ರಿಯಾಶೀಲ ಪಾತ್ರ ವಹಿಸಿದರು ಮತ್ತು ಪೋಲಿಸರ ವಿರುದ್ಧ ವೀರಾವೇಶದಿಂದ ಹೋರಾಡಿದರು.**



**ರೈತ ಸ್ವಯಂಸೇವಕ ಪಡೆ**



# 36 ಲಾಕ್‌ಡೌನ್ ದಿನಗಳಲ್ಲಿ 13 ಕೋಟಿ ಉದ್ಯೋಗ ನಷ್ಟ

## ನಗರಪ್ರದೇಶಗಳ 80ಶೇ. ಕಾರ್ಮಿಕರು ಉದ್ಯೋಗ ಕಳಕೊಂಡಿದ್ದಾರೆ

ಪ್ರತಿವಾರ ಉದ್ಯೋಗದ ಸರ್ವೆ ನಡೆಸುವ ಸಿಎಂಐಇ ಸಂಸ್ಥೆಯ ಎಪ್ರಿಲ್ ತಿಂಗಳ ವರದಿ ಈಗ ಬಂದಿದೆ. ಇಡೀ ಎಪ್ರಿಲ್ ತಿಂಗಳಲ್ಲಿ 12.12 ಕೋಟಿ ಉದ್ಯೋಗ ನಷ್ಟ ಸಂಭವಿಸಿದೆ ಎಂದು ಅದು ತೋರಿಸಿದೆ. ಮಾರ್ಚ್ ಕೊನೆಯ ವಾರದಲ್ಲಿ ಅಂದರೆ ಲಾಕ್ಡೌನಿನ ಮೊದಲ ವಾರದಲ್ಲಿ 85 ಲಕ್ಷ ಉದ್ಯೋಗಗಳು ನಷ್ಟ ಆದವು ಎಂದು ಈ ಹಿಂದೆ ಅದರ ಸರ್ವೆ ಹೇಳಿತ್ತು. ಅಂದರೆ ಲಾಕ್ ಡೌನಿನ 36 ದಿನಗಳಲ್ಲಿ ಒಟ್ಟು 13 ಕೋಟಿ ಉದ್ಯೋಗ ನಷ್ಟವಾಗಿದೆ. ಇದು ಹಿಂದಿನ ಹಣಕಾಸು ವರ್ಷದಲ್ಲಿ ಸರಾಸರಿ ಉದ್ಯೋಗಿಗಳ ಸಂಖ್ಯೆಯ 30ಶೆ.ದಷ್ಟು. ಅಂದರೆ ಸುಮಾರು ಪ್ರತಿ ಮೂರರಲ್ಲಿ ಎರಡು ಉದ್ಯೋಗಗಳಷ್ಟೇ ಉಳಿದಿವೆ.

ಮತ್ತೊಂದು ಆತಂಕಕಾರಿ ಸಂಗತಿಯೆಂದರೆ ಹೀಗೆ ಉದ್ಯೋಗ ಕಳಕೊಮಡವರಲ್ಲಿ ಅರ್ಧದಷ್ಟು ಯುವಜನತರು. 20 ರಹರೆಯದಲ್ಲಿರುವ 2.7 ಕೋಟಿ ಮತ್ತು 30ರ ಹರೆಯದಲ್ಲಿರುವ 3.3. ಕೋಟಿ, ಅಂದರೆ 20 ರಿಂದ 40 ವಯೋಗುಂಪಿನ ಒಟ್ಟು 6 ಕೋಟಿ ಯುವಜನರು ಉದ್ಯೋಗ ಕಳಕೊಂಡಿದ್ದಾರೆ.

ನಿಜ, ಇವು ಅಂದಾಜು ಅಂಕಿ–ಅಂಶಗಳಷ್ಟೇ. ಆದರೆ ದೇಶ, ಅದರಲ್ಲೂ ಜನಸಾಮಾನ್ಯರು ಎಂತಹ ಆರ್ಥಿಕ ಸಂಕಟವನ್ನು ಎದುರಿಸಬೇಕಾಗಿ ಬಂದಿದೆ ಎಂಬುದನ್ನು ಇದು ಖಂಡಿತವಾಗಿಯೂ ಸೂಚಿಸುತ್ತದೆ ಎನ್ನುತ್ತಾರೆ ಪರಿಣಿತರು.

ಎಪ್ರಿಲ್ ತಿಂಗಳ ಸರ್ವೆಯ ಅಂಕಿ–ಅಂಶಗಳ ವಿವರಗಳಿಗೆ ಹೋದಾಗ ಇನ್ನಷ್ಟು ಆಘಾತಕಾರೀ ಚಿತ್ರಗಳು ಮೂಡಿ ಬರುತ್ತವೆ.

ವಿಭಾಗವಾರು ಏರಿಳಿಕೆಗಳನ್ನು ನೋಡಿ

| | |
|---|---|
| ಸಣ್ಣ ವ್ಯಾಪಾರಿಗಳು ಮತ್ತು ಕೂಲಿಗಳು | –9.1 ಕೋಟಿ |
| ಉದ್ಯಮಿಗಳು | –1.8 ಕೋಟಿ |
| ಸಂಬಳದಾರ ನೌಕರರು | –1.8 ಕೋಟಿ |
| **ರೈತರು** | **+58 ಲಕ್ಷ** |
| **ಒಟ್ಟು** | **–12.12 ಕೋಟಿ** |

ಮುಕ್ಕಾಲು ಪಾಲು ಉದ್ಯೋಗ ನಷ್ಟ ಆಗಿರುವುದು ಸಣ್ಣ ವ್ಯಾಪಾರಿಗಳು ಮತ್ತು ಕೂಲಿಗಳಿಗೆ. ಇದರಲ್ಲಿ ಬೀದಿ ಮಾರಾಟಗಾರರು, ಸಣ್ಣ–ಪುಟ್ಟ ವ್ಯಾಪಾರಿಗಳು, ಅಂಗಡಿದಾರರು, ಅಲ್ಲಿ ಕೆಲಸ ಮಾಡುವವರು ಮತ್ತು ದಿನಗೂಲಿಗಳು ಸೇರುತ್ತಾರೆ. ಇವರು ನಮ್ಮ ಉದ್ಯೋಗ ಪಿರಮಿಡ್ಡಿನ ತಳಭಾಗದಲ್ಲಿರುವ ದೊಡ್ಡ ವಿಭಾಗ, ಅದಕ್ಕನುಗುಣವಾಗಿ ದೊಡ್ಡ ಪ್ರಮಾಣದಲ್ಲಿ ನಷ್ಟ ಅನುಭವಿಸಿದ್ದಾರೆ.

ಉದ್ಯಮಿಗಳು ಎನ್ನುವಾಗ ಇಲ್ಲಿ ಹೆಚ್ಚಾಗಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ್ರ ಪ್ರಮಾಣದ ಉದ್ದಿಮೆಗಳವರು(ಎಂಎಸ್ಎಂಇ), ಕೆಲವು ದೊಡ್ಡ ಪ್ರಮಾಣದ ಉದ್ದಿಮೆದಾರರು ನಷ್ಟ ಅನುಭವಿಸಿರಬಹುದು. ಆದರೂ ಬಹುಪಾಲು ಈ ಎಂಎಸ್ಎಂಇ ಗಳದ್ದೇ.

ಮಾಸಿಕ ಸಂಬಳ ಪಡೆಯುವ ನೌಕರರಲ್ಲೂ 1.8 ಕೋಟಿ ಜನ ಉದ್ಯೋಗ ಕಳಕೊಂಡಿದ್ದಾರೆ ಎಂಬುದು ಗಮನಾರ್ಹ.

ರೈತರ ಸಂಖ್ಯೆ, ಅಂದರೆ ಕೃಷಿಯಲ್ಲಿ ತೊಡಗಿರುವವವರ ಸಂಖ್ಯೆ ಮಾತ್ರ ಸುಮಾರು 58 ಲಕ್ಷದಷ್ಟಾದರೂ ಹೆಚ್ಚಾಗಿದೆ. ಆದರೆ ಇದರರ್ಥ ಕೃಷಿ ರಂಗದಲ್ಲಿ ಉದ್ಯೋಗಾವಕಾಶ ಹೆಚ್ಚಿದೆಯೆಂದೇನಲ್ಲ. ನಗರಗಳಲ್ಲಿ ಉದ್ಯೋಗ ಕಳೆದುಕೊಂಡು ಊರಿಗೆ ಮರಳಿದವರಲ್ಲಿ ಕೆಲವರು ಮತ್ತೆ ಕೃಷಿರಂಗದಲ್ಲೇ ಏನೋ ಕೆಲಸ ಹುಡುಕಿಕೊಂಡಿದ್ದಾರೆ ಎಂದರ್ಥ. ಅಂದರೆ ಕೃಷಿರಂಗದ ಒಟ್ಟು ಆದಾಯ ಈಗ ಈ ಹೆಚ್ಚುವರಿ 58ಲಕ್ಷ ಜನಗಳ ನಡುವೆಯೂ ಹಂಚಿ ಹೋಗುತ್ತದೆ, ವಾಸ್ತವಿಕವಾಗಿ ರೈತರ ತಲಾ ಆದಾಯ ಇಳಿಯುತ್ತದೆ. ಅಲ್ಲದೆ ಇದು ಕಟಾವಿನ ಸಮಯವಾದ್ದರಿಂದ ಸದ್ಯಕ್ಕೆ ಇವರಿಗೆ ಏನೋ ತುಸು ಆದಾಯ ಬರುವ ಕೆಲಸ ಸಿಕ್ಕಿದೆ. ಮುಂದೇನು ಎಂಬ ಚಿಂತೆ ಇದ್ದೇ ಇದೆ.

ಒಟ್ಟಾರೆಯಾಗಿ, ಲಾಕ್‌ಡೌನಿನಿಂದಾಗಿ ಆಗಿರುವ 13 ಕೊಟಿ ಉದ್ಯೋಗನಷ್ಟಗಳಲ್ಲಿ 8.5 ಕೋಟಿ ನಗರ ಪ್ರದೇಶಗಳಲ್ಲಿ, 4.5 ಕೋಟಿ ಗ್ರಾಮೀಣ ಪ್ರದೇಶಗಳಲ್ಲಿ. ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವವರ ಸಂಖ್ಯೆ ತುಸು ಹೆಚ್ಚಾಗಿದ್ದರ ಅರ್ಥ, ಗ್ರಾಮೀಣ ಪ್ರದೇಶದ ಉಳಿದ ವಲಯುಗಳಲ್ಲಿ. ಮುಖ್ಯವಾಗಿ ಚಿಲ್ಲರೆ ವ್ಯಾಪಾರಗಳಲ್ಲಿ, ಸಾರಿಗೆ ಮುಂತಾದವುಗಳಲ್ಲಿ ಇನ್ನಷ್ಟು ಹೆಚ್ಚು ನಷ್ಟಗಳು ಉಂಟಾಗಿವೆ. ಇವರು ಈ ಮೊದಲಿನಂತೆ ನಗರಗಳಿಗೂ ಹೋಗುವಂತಿಲ್ಲ.

ಇವೆಲ್ಲ ಅನಿರೀಕ್ಷಿತವೇನಲ್ಲ. ಇದನ್ನು ಮುಂಗಂಡು ಸರಕಾರ ಸರಿಯಾದ ಯೋಜನೆಯೊಂದಿಗೆ ಲಾಕ್‌ಡೌನ್ ಹಾಕಿದ್ದರೆ ಜನಸಾಮಾನ್ಯರು ಅದರಲ್ಲೂ ಕೋಟ್ಯಂತರ ವಲಸೆ ಕಾರ್ಮಿಕರು ಈಗ ಕಾಣುತ್ತಿರುವಂತೆ ಹಸಿವು, ಅವಮಾನ, ಸಾವುಗಳನ್ನು ಎದುರಿಸಬೇಕಾಗಿ ಬರುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಕಾರ್ಮಿಕ ಸಂಘಟನೆಗಳು ಮತ್ತು ಪ್ರಜಾಪ್ರಭುತ್ವವಾದಿಗಳು ಆಗ್ರಹಿಸಿರುವಂತೆ ಅಗತ್ಯ ಇರುವ ಎಲ್ಲರಿಗೆ 10 ಕೆ.ಜಿ. ಆಹಾರಧಾನ್ಯಗಳು ಸೇರಿದಂತೆ ಆವಶ್ಯಕ ವಸ್ತುಗಳನ್ನು ಮತ್ತು ಸ್ಥಬ್ಧಗೊಂಡ ಅರ್ಥವ್ಯವಸ್ಥೆ ಮತ್ತೆ ಚಾಲನೆ ಪಡೆಯುವ ವರೆಗೆ, ಅಂದರೆ ಮುಂದಿನ ಮೂರು ತಿಂಗಳಾದರೂ ಒಂದು ಕುಟುಂಬಕ್ಕೆ ತಿಂಗಳಿಗೆ 7500 ರೂ. ಕೊಡುವ ವ್ಯವಸ್ಥೆ ಮಾಡಿದ್ದರೆ ದೇಶದ ಜನಸಾಮಾನ್ಯರು ಇಷ್ಟೊಂದು ಸಂಕಟ ಪಡುವ ಅಗತ್ಯ ಬರುತ್ತಿರಲಿಲ್ಲ. ಇದಕ್ಕೆ ಹೆಚ್ಚೆಂದರೆ ಜಿಡಿಪಿಯ 3ಶೇ. ವೆಚ್ಚ ತಗಲುತ್ತದಷ್ಟೇ.

ಹಿಡಿಯಷ್ಟು ಸೂಪರ್ ಶ್ರೀಮಂತರಿಗೆ, ನಮ್ಮ ಬ್ಯಾಂಕುಗಳಿಗೆ ನಷ್ಟ ಉಂಟುಮಾಡಿ ಆರಾಮವಾಗಿ ಇರುವ, ದೇಶ ಬಿಟ್ಟು ಪಲಾಯನ ಮಾಡಿದ ಮಂದಿಗೂ 69 ಸಾವಿರ ಕೋಟಿ ರೂ.ಗಳನ್ನು ಇತ್ತೀಚೆಗಷ್ಟೇ ಕೊಟ್ಟಿರುವ ಸರಕಾರಕ್ಕೆ ಇದು ಖಂಡಿತಾ ಅಸಾಧ್ಯವೇನಲ್ಲ. ಆದರೆ ಅದು ಪರಿಹಾರದ ಹೆಸರಲ್ಲಿ ಕೊಟ್ಟದ್ದು ಜಿಡಿಪಿಯ 0.7ಶೇ.ದಷ್ಟು ಮಾತ್ರ. ಇದರಿಂದ ಜನಧನ ಖಾತೆಗಳಿಗೆ ಕೇವಲ ಒಮ್ಮೆ 500ರೂ. ಕೊಡುವುದಾಗಿ ಸರಕಾರ ಹೇಳಿತು. ಅದೂ ಬಹಳಷ್ಟು ಮಂದಿಗೆ ತಲುಪಿಲ್ಲ ಎಂದು ವರದಿಯಾಗಿದೆ.

ನಂತರ ಯಾವುದೇ ಪರಿಹಾರ ಪ್ರಕಟವಾಗಲಿಲ್ಲ, ಲಾಕ್‌ಡೌನನ್ನು ವಿಸ್ತರಿಸಿದಾಗಲೂ ಯಾವುದೇ ಪರಿಹಾರದ ಮಾತೂ ಪ್ರಧಾನಿಗಳ ಮನದಿಂದಲೇ ಆಗಲಿ, ಬಾಯಿಂದಲೇ ಆಗಲಿ ಬರಲೇ ಇಲ್ಲ. ಲಾಕ್‌ಡೌನಿನ ಮೂರನೇ ಘಟ್ಟ ಮುಗಿರುವ ಒಮದು ವಾರದ ಮೊದಲು, ಮೇ 11ರಂದು ಮುಖ್ಯಮಂತ್ರಿಗಳೊಂದಿಗೆ ನಡೆದ ವಿಡಿಯೊ ಕಾನ್ಫರೆನ್ಸಿನಲ್ಲೂ ಹಲವು ಮುಖ್ಯಮಂತ್ರಿಗಳು ಕೇಳಿದರೂ ಅದಕ್ಕೆ ಉತ್ತರ ದೊರೆತಿಲ್ಲ. ಬದಲಿಗೆ, ಉದ್ಯೋಗದಾತರೆನಿಸಿಕೊಳ್ಳುವ ಮಾಲಕರಿಗೆ ಕಾರ್ಮಿಕ ಕಾನೂನುಗಳಲ್ಲಿ ಭಾರೀ ರಿಯಾಯ್ತಿ/ವಿನಾಯ್ತಿಗಳನ್ನು ನೀಡುವ ಮೂಲಕ ನೇರ ರಿಟ್ರೆಂಚ್‌ಮೆಂಟ್ ಇತ್ಯಾದಿಗಳ ಮೂಲಕ ಇನ್ನಷ್ಟು ಉದ್ಯೋಗ ನಷ್ಟಗಳಿಗೆ ಅವಕಾಶವನ್ನು ತೆರೆದು ಕೊಡಲಾಗುತ್ತಿದೆ.

ಈಗ 20 ಲಕ್ಷ ಕೋಟಿ ರೂ.ಗಳ ಪ್ಯಾಕೇಜ್ ಪ್ರಕಟಿಸುವುದಾಗಿ ಹೇಳಿದ ಪ್ರಧಾನ ಮಂತ್ರಿಗಳ ಮೇ 12 ರ ಭಾಷಣದಲ್ಲಿಯೂ ನಿರುದ್ಯೋಗ, ಉದ್ಯೋಗ ನಷ್ಟಗಳ ಮಾತಿರಲಿಲ್ಲ.

### 61 ಶೇ. ಕುಟುಂಬಗಳ ಬಳಿ ಒಂದು ವಾರದ ಅಗತ್ಯಗಳಿಗೂ ಹಣವಿಲ್ಲ

ಇದೇ ವೇಳೆಯಲ್ಲಿ ಅಜಿಂ ಪ್ರೇಮ್‌ಜಿ ವಿಶ್ವವಿದ್ಯಾಲಯ ನಡೆಸಿದ ಸರ್ವೆ ಲಾಕ್‌ಡೌನ್ ಸಂಕಟಗಳ ಇನ್ನೊಂದು ಮಗ್ಗುಲನ್ನು ತೆರೆದಿಟ್ಟಿದೆ. ಎಪ್ರಿಲ್ 13 ರಿಂದ ಮೇ 9ರ ನಡುವೆ 12 ರಾಜ್ಯಗಳ 4000 ಕಾರ್ಮಿಕರ ಸರ್ವೆಯಲ್ಲಿ ಕಂಡು ಬಂದ ಅಂಶಗಳು ಹೀಗಿವೆ:

- ನಗರ ಪ್ರದೇಶಗಳಲ್ಲಿ ಫೆಬ್ರುವರಿ ತಿಂಗಳಲ್ಲಿ ಉದ್ಯೋಗವಿದ್ದ 84ಶೇ. ಸ್ವ–ಉದ್ಯೋಗಿಗಳು, 81ಶೇ. ಕ್ಯಾಶುವಲ್ ಕಾರ್ಮಿಕರು ಮತ್ತು 76ಶೇ. ನಿಯಮಿತ ಕೆಲಸಗಾರರು ಲಾಕ್‌ಡೌನ್ ಅವಧಿಯಲ್ಲಿ ತಮ್ಮ ಉದ್ಯೋಗಗಳನ್ನು ಕಳಕೊಂಡರು.
- ಗ್ರಾಮೀಣ ಪ್ರದೇಶಗಳಲ್ಲಿ 47ಶೇ. ಸ್ವ–ಉದ್ಯೋಗಿಗಳು, 66ಶೇ. ಕ್ಯಾಶುವಲ್ ಕಾರ್ಮಿಕರು ಮತ್ತು 62ಶೇ. ನಿಯಮಿತ ಸಂಬಳ ಪಡೆಯುತ್ತಿದ್ದ ಉದ್ಯೋಗಳಲ್ಲಿ ಇದ್ದವರೂ ಉದ್ಯೋಗ ಕಳಕೊಂಡಿದ್ದಾರೆ.
- ಲಾಕ್‌ಡೌನ್ ಅವಧಿಯಲ್ಲಿ ನಗರ ಪ್ರದೇಶಗಳ 57ಶೇ. ಕಾರ್ಮಿಕರು ಸಂಬಳ ಕಡಿತ ಅನುಭವಿಸಿದರು, ಅಥವ ಸಂಬಳವನ್ನೇ ಪಡೆದಿಲ್ಲ.
- 61ಶೇ. ಕುಟುಂಬಗಳ ಬಳಿ ಒಂದು ವಾರದ ಆವಶ್ಯಕ ವಸ್ತುಗಳನ್ನೂ ಕೊಳ್ಳಲು ಹಣವಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಪರಿಸ್ಥಿತಿ ತುಸು ಉತ್ತಮವಾಗಿದೆ. ಇಂತಹ ಕುಟುಂಬಗಳ ಪ್ರಮಾಣ 34ಶೇ.
- ಗ್ರಾಮೀಣ ಪ್ರದೇಶಗಳಲ್ಲಿ 34ಶೇ. ಮಂದಿಯ ಸಾಲಹೊರೆ ಹೆಚ್ಚಿದ್ದರೆ, ನಗರ ಪ್ರದೇಶಗಳಲ್ಲಿ ಇದು 43ಶೇ.
- ಕೃಷಿಯೇತರ ಸ್ವ–ಉದ್ಯೋಗಿಗಳ ಆದಾಯುಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ 92ಶೇ. ಇಳಿಕೆಯಾಗಿದ್ದರೆ, ನಗರಪ್ರದೇಶಗಳಲ್ಲಿ 86ಶೇ. ದಷ್ಟು ಕಡಿಮೆಯಾಗಿದೆ.
- ಕ್ಯಾಶುವಲ್ ಕಾರ್ಮಿಕರ ಆದಾಯಗಳು ಫೆಬ್ರುವರಿಗೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿ ಅರ್ಧಕ್ಕಿಳಿದಿದೆ, ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು ಅದೇ ಪರಿಸ್ಥಿತಿ, 46ಶೆ.ದಷ್ಟು ಆದಾಯಗಳನ್ನು ಕಳಕೊಂಡಿದ್ದಾರೆ.
- 90ಶೇ.ದಷ್ಟು ರೈತರಿಗೆ ತಮ್ಮ ಬೆಳೆಗಳನ್ನು ಮಾರಲಾಗಲಿಲ್ಲ, ಇಲ್ಲವೇ ಕಡಿಮೆ ಬೆಲೆಗೆ ಮಾರಬೇಕಾಗಿ ಬಂತು.

# 'ಪಿಎಂ ಕೇರ್ಸ್' ಗೆ ಕೊಟ್ಟರೆ ಸಂಬಳ, ಉದ್ಯೋಗ ಕಡಿತ ಮಾಫ್!

'ಪಿಎಂ ಕೇರ್ಸ್' ಎಂಬ ಕೋವಿಡ್ ಕಾಲದ ಹೊಸ 'ಅರೆ–ಖಾಸಗಿ' ಟ್ರಸ್ಟ್ ಗೆ ಪ್ರತಿಷ್ಠಿತ ವ್ಯಕ್ತಿಗಳಿಂದ, ಭಾರೀ ಕುಳಗಳಿಂದ,ಕಾರ್ಪೊರೇಟ್‌ಗಳಿಂದ, ಮಧ್ಯಮರ್ಗಗಳ ವೃತ್ತಿಪರರಿಂದ ಭಾರೀ ದೇಣಿಗೆಗಳು ಬರುತ್ತಿವೆ ದು ವರದಿಯಾಗಿದೆ. ಇದರಲ್ಲಿನ ದು ವಿಶೇಷವೆಂದರೆ, ತಮ್ಮ ಉದ್ಯೋಗಿಗಳಿಗೆ ಅವರಿಗೆ ಸಲ್ಲತಕ್ಕ ಸಂಬಳಗಳನ್ನು ಕೊಡಲು ಹಣ ಇಲ್ಲೆನ್ನುವ ಮಾಲಕರು ಇದಕ್ಕೆ ಉದಾರವಾಗಿ ದೇಣಿಗೆ ನೀಡುತ್ತಿದ್ದಾರೆ. ಎಂದು ವರದಿಯಾಗಿದೆ.

ಉದಾಹರಣೆಗೆ, ಇತ್ತೀಚೆಗೆ ಫೇಸ್‌ಬುಕ್ ಮತ್ತು ಸಿಲ್ವರ್ ಲೇಕ್‌ನಂತಹ ಘಟಾನುಘಟಿ ಕಂಪನಿಗಳಿಂದ ಭಾರೀ ಹೂಡಿಕೆಗಳನ್ನು ಪಡೆದು ತನ್ನ ಖಜಾನೆ ತುಂಬಿಕೊಂಡಿರುವ ರಿಲಯನ್ಸ್ ಇಂಡಸ್ಟ್ರೀಸ್ ತನ್ನ ಹೈಡ್ರೊಕಾರ್ಬನೇಟ್ ಘಟಕದಲ್ಲಿ ಸಂಬಳ ಮತ್ತು ಇತರ ಸೌಲಭ್ಯಗಳ ಕಡಿತವನ್ನು ಘೋಷಿಸಿದೆ. ಇನ್ನೊಂದೆಡೆಯಲ್ಲಿ ಪಿಎಂಕೇರ್ಸ್ ಗೆ 500 ಕೋಟಿ ರೂ.ಗಳನ್ನು ಉದಾರ ದೇಣಿಗೆ ನೀಡಿದೆ.

'ಕ್ಯೂರ್ ಫಿಟ್' ಎಂಬ ದೇಶಾದ್ಯಂತ ಫಿಟ್‌ನೆಸ್ ಕೇಂದ್ರಗಳನ್ನು ಹೊಂದಿರುವ ಕಂಪನಿ, ಮಾರ್ಚ್ 24 ರಂದು ಲಾಕ್‌ಡೌನ್ ಘೋಷಿಸುವಾಗ ಪ್ರಧಾನಮಂತ್ರಿಗಳು ಮಾಡಿದ ಮನವಿಯನ್ನು ಕಡೆಗಣಿಸಿ ಸುಮಾರು 800 ನೌಕರರನ್ನು ತೆಗೆದು ಹಾಕಿ ತನ್ನ ಹಲವು ಫಿಟ್‌ನೆಸ್ ಕೇಂದ್ರಗಳನ್ನು ತನ್ನ ಬಳಿ ಹಣವಿಲ್ಲ ಎನ್ನುತ್ತ ಮುಚ್ಚಿ ಬಿಟ್ಟಿದೆ. ಇವರಿಗೆ 'ಪರಿಹಾರ'ಕ್ಕೆಂಥು 2 ಕೋಟಿ ರೂ.ಗಳನ್ನು ನಿಗದಿ ಮಾಢಲಾಗಿದೆಯಂತೆ. ಆದರೆ 5 ಕೋಟಿ ರೂ.ಗಳನ್ನು ಪಿಎಂ ಕೇರ್ಸ್ ಗೆ ನೀಡಿದೆ ಎಂದು ಒಬ್ಬ ಹಣಕಾಶು ಸಲಹೆಗಾರರ 'ಕ್ವಾರ್ಟ್ಝ್' ಪತ್ರಿಕೆಯಲ್ಲಿ ಬರೆದಿದ್ದಾರೆ.

ಹಾಗಿದ್ದರೆ, ಪಿಎಂ ಕೇರ್ಸ್ ನಂತಹ ಪರಿಹಾರ ನಿಧಿಗಳಿಗೆ ಹಣ ಕೊಟ್ಟರೆ, ನೌಕರರಿಗೆ ಕಾನೂನು ಪ್ರಕಾರ ಕೊಡಬೇಕಾದ್ದನ್ನು ಕೊಡದಿರಲು ವಿನಾಯ್ತಿ ಇದೆಯೇ ಎಂಬ ಪ್ರಶ್ನೆ ಸಹಜವಾಗಿ ಎದ್ದಿದೆ. ನಾವೀಗ ಕೊವಿಡ್ ಕಾಲಮಾನದಲ್ಲಿ ಒಂದೆಡೆಯಲ್ಲಿ ತಮ್ಮಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಲೇ, ತಮ್ಮ ಸಿಬ್ಬಂದಿಯ ಖರ್ಚಿನಲ್ಲಿ ಉದಾರತೆಯ ಪ್ರಚಾರ ಪಡೆಯುತ್ತಿರುವ ದೃಶ್ಯಗಳನ್ನು ಕಾಣುತ್ತಿದ್ದೇವೆ ಎನ್ನುತ್ತಾರೆ ಅವರು .

ಇನ್ನೊಂದು ಪ್ರಶ್ನೆ ಎಂಥರೆ ಅವರದ್ದೇ ಸರಕಾರದ, ಕಾರ್ಮಿಕ ಮತ್ತು ಗೃಹ ಇಲಾಖೆಗಳ ಸಂಬಳ ಕಡಿತ ಮಾಡಬಾರದು, ಕೆಲಸದಿಂದ ತೆಗೆದು ಹಾಕಬಾರದು ಇತ್ಯಾದಿ 'ಸಲಹಾ ಆದೇಶ' ಗಳಿಗೆ ಕಾಸಿನ ಕಿಮ್ಮತ್ತೂ ಇಲ್ಲವೇ?

ಸುದ್ದಿ 1– ಲಾಕ್‌ಡೌನ್‌ನ ಒಂದು ಪ್ರಯೋಜನ ಎಂದರೆ ವಾತಾವರಣ ತಿಳಿಯಾಗಿದೆ. ಬಹಳ ದೂರದ ದೃಶ್ಯಗಳೂ ಕಾಣುತ್ತಿವೆ. ಗುಜರಾತಿನ ಅತ್ಯಂತ ಎತ್ತರ 'ಐಕ್ಯತೆಯ ಪ್ರತಿಮೆ'ಗಿಂತಲೂ ಎತ್ತರದಲ್ಲಿ ಕೇರಳದ ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಇದೆ ಎಂಬುದು ಕೂಡ.

– ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್




ಸುದ್ದಿ 2–ಕಳೆದ ಆರು ವರ್ಷಗಳಿಂದ ಸ್ವಾವಲಂಬನೆಯ ಪ್ರತೀಕಗಳಾದ ಸಾರ್ವಜನಿಕ ವಲಯದ್ದ ಉದ್ದಿಮೆಗಳನ್ನು ಮುಗಿಸಿಬಿಡಲು ಶತಪ್ರಯತ್ನ ನಡೆಸಿದ ಸರಕಾರದ ಪ್ರಧಾನಮಂತ್ರಿಗಳು ಮೇ 12ರ ಪ್ರಸಾರ ಭಾಷಣದಲ್ಲಿ ಸ್ವಾವಲಂಬನೆಯ ಬಗ್ಗೆ ಉಪದೇಶ ಕೊಡುತ್ತ 'ಲೋಕಲ್ ಬಗ್ಗೆ ವೋಕಲ್' ಆಗಿ ಎಂದರು. ಅಂದರೆ ನಿಮ್ಮ ಬಳಿಯೇ ಇರುವ ಒಳ್ಳೆಯ ಮಾದರಿಗಳ ಬಗ್ಗೆ ಮನದುಂಬಿ ಮಾತಾಡಿ ಎಂದು– ಸುದ್ದಿ 1 ಹಾಗಿದ್ದರೆ 'ಕೇರಳ ಮಾದರಿ ಜಿಂದಾಬಾದ್– ಇಂಕ್‌ಲಾಬ್ ಜಿಂದಾಬಾದ್' ಹೇಳಬಹುದಲ್ಲ ಎನ್ನುತ್ತಾರೆ ವ್ಯಂಗ್ಯಚಿತ್ರಕಾರ ಆರ್. ಪ್ರಸಾದ್



# ಒಕ್ಕೂಟ ವ್ಯವಸ್ಥೆಯನ್ನು ಸೊರಗಿಸುವ ಅಪಾಯದ ಹಾದಿ




**ಸರ್ವವ್ಯಾಪಿ ಕೊರೋನಾದಿಂದ ಬಾಧಿತರಾಗಿರುವ ಜನರಿಗೆ ಒದಗಿಸುತ್ತಿರುವ ಪರಿಹಾರದ ವೆಚ್ಚಗಳನ್ನು ರಾಜ್ಯ ಸರ್ಕಾರಗಳು ಭರಿಸುತ್ತಿವೆ. ಹಾಗಾಗಿ, ಅವುಗಳ ಆರ್ಥಿಕ ಹೊರೆ ಹೆಚ್ಚುತ್ತಿದೆ. ಈ ಸನ್ನಿವೇಶದಲ್ಲಿ ಕೇಂದ್ರವು ಅವರಿಗೆ ಹಣದ ನೆರವು ನಿರಾಕರಿಸಿದರೆ, ಸಂಕಟಗ್ರಸ್ತ ಜನಗಳಿಗೆ ನೆರವು ನಿರಾಕರಿಸಿದಂತೆಯೇ. ಇಂತಹ ಕ್ರಮಗಳ ಮೂಲಕ ಒಕ್ಕೂಟ ವ್ಯವಸ್ಥೆಯನ್ನು ಸೊರಗಿಸುವ ವಿಚಾರವು ಒಂದು ಮುಖ್ಯವಾದ ವರ್ಗ ದೃಷ್ಟಿ ಕೋನ ಹೊಂದಿದೆ. ಮತ್ತೊಂದು ಕಾರಣದಿಂದಾಗಿ ಇದು ಅಪಾಯಕಾರಿಯೂ ಆಗುತ್ತದೆ. ಭಾರತ ಒಕ್ಕೂಟ ವ್ಯವಸ್ಥೆಯು ಕೇವಲ ಒಂದು ಆಡಳಿತಾತ್ಮಕ ಏರ್ಪಾಟು ಮಾತ್ರವಲ್ಲ. ಅದೊಂದು ಚಿಂತನೆ. ಅದೊಂದು ಚೇತನ. ಬಿಜೆಪಿಯು ಈ ಚಿಂತನೆಗೆ ವಿರುದ್ಧವಾಗಿದೆ ಮತ್ತು ಈ ಅಂಶವನ್ನು ಗ್ರಹಿಸಲು ಅದು ಅಸಮರ್ಥವಾಗಿದೆ.**

**ಪ್ರೊ. ಪ್ರಭಾತ್ ಪಟ್ನಾಯಕ್**
**ಅನು: ಕೆ.ಎಂ. ನಾಗರಾಜ್**

2017 ರಲ್ಲಿ ಜಿಎಸ್‌ಟಿಯನ್ನು ಜಾರಿಗೆ ತರುವಾಗ, ರಾಜ್ಯಗಳ ವ್ಯಾಟ್ (ಮೌಲ್ಯ ವರ್ಧಿತ ತೆರಿಗೆ) ಪದ್ಧತಿಗೆ ಬದಲಾಗಿ ಜಿಎಸ್‌ಟಿಯಿಂದ ರಾಜ್ಯಗಳ ತೆರಿಗೆ ಆದಾಯ ಇಳಿಕೆಯಾದರೆ, ಅದನ್ನು ತುಂಬಿಕೊಡುವ ಕಾಯ್ದೆಬದ್ಧ ಏರ್ಪಾಟನ್ನು ಮಾಡಲಾಗಿತ್ತು. ಅದರೂ, ಕೇಂದ್ರವು ರಾಜ್ಯಗಳಿಗೆ ಕೊಡಬೇಕಿರುವ ಹಣವನ್ನು ಕಳೆದ ವರ್ಷದ ಆಗಸ್ಟ್ ನಿಂದ ಬಾಕಿ ಉಳಿಸಿಕೊಂಡಿದೆ. ರಾಜ್ಯಗಳು ಪದೇ ಪದೇ ಕೇಳಿಕೊಂಡರೂ ಸಹ ಕೇಂದ್ರವು ಬಾಕಿ ಹಣವನ್ನು ಬಿಡುಗಡೆ ಮಾಡಿಲ್ಲ. ಈ ಮಧ್ಯೆ, ಕೊರೋನಾ ಸೋಂಕಿನಿಂದಾಗಿ ರಾಜ್ಯ ಸರ್ಕಾರಗಳ ಖರ್ಚು ವೆಚ್ಚಗಳು ವಿಪರೀತವಾಗಿ ಹೆಚ್ಚಿವೆ ಮತ್ತು ಸೋಂಕಿಗೆ ಒಳಗಾದ ಜನರ ಜೀವ ಉಳಿಸಲು ರಾಜ್ಯಗಳು ಹೆಣಗಾಡುತ್ತಿವೆ. ಅದೇ ಸಮಯದಲ್ಲಿ, ಲಾಕ್ ಡೌನ್ ಕಾರಣದಿಂದಾಗಿ ರಾಜ್ಯ ಸರ್ಕಾರಗಳ ಆದಾಯ ಸಂಪೂರ್ಣವಾಗಿ ಬತ್ತಿ ಹೋಗಿದೆ. ಜಿಎಸ್‌ಟಿಯನ್ನು ಬಿಟ್ಟರೆ, ಈಗ ಅವರ ಆದಾಯದ ಉಳಿದ ಮೂಲಗಳೆಂದರೆ, ಪೆಟ್ರೋಲ್, ಮಾದಕ ಪಾನೀಯಗಳು (ಆಲ್ಕೋಹಾಲ್) ಮತ್ತು ಸ್ಟ್ಯಾಂಪ್ ಡ್ಯೂಟಿ ಮಾತ್ರ. ಲಾಕ್ ಡೌನ್ ಕಾರಣದಿಂದಾಗಿ ಪೆಟ್ರೋಲ್–ಡೀಸಲ್ ವ್ಯಾಪಾರವು ಲೆಕ್ಕಕ್ಕಿಲ್ಲ ಎನ್ನುವಷ್ಟು ಕಡಿಮೆ ಇತ್ತು. ಅದೇ ರೀತಿಯಲ್ಲಿ, ಮದ್ಯಪಾನದ ಅಂಗಡಿಗಳನ್ನು ಮುಚ್ಚಿದ್ದರಿಂದ ಈ ಮೂಲದಿಂದ ಬರುತ್ತಿದ್ದ ಆದಾಯವೂ ಸಂಪೂರ್ಣವಾಗಿ ಒಣಗಿತ್ತು. ಮನೆಯಿಂದ ಹೊರ ಬರದಂತೆ ಜನರನ್ನು ನಿರ್ಬಂಧಿಸಿದ್ದ ಪರಿಸ್ಥಿತಿಯಲ್ಲಿ, ಆಸ್ತಿ ಮಾರಾಟದ ಅವಕಾಶವೇ ಇಲ್ಲದ ಕಾರಣದಿಂದ ಸ್ಟ್ಯಾಂಪ್ ಡ್ಯೂಟಿಯಿಂದ ಬರುತ್ತಿದ್ದ ಆದಾಯವೂ ಮಾಯವಾಗಿತ್ತು.



ಅದೇ ಸಮಯದಲ್ಲಿ, ಸಾಧಾರಣವಾಗಿ, ತಮ್ಮ ಎಂದಿನ ಖರ್ಚು–ವೆಚ್ಚಗಳಿಗೇ ಹಣ ಹೊಂದಿಸಿಕೊಳ್ಳಲು ಪರದಾಡುತ್ತಿದ್ದ ರಾಜ್ಯ ಸರ್ಕಾರಗಳು, ಕೊರೋನಾ ವೈರಸ್ ಸೃಷ್ಟಿಸಿದ ಬಿಕ್ಕಟ್ಟನ್ನು ಎದುರಿಸಲು ಅಗತ್ಯವಾದ ಖರ್ಚುಗಳನ್ನು ಹೆಚ್ಚುವರಿಯಾಗಿ ಮಾಡುತ್ತಿವೆ. ಸೋಂಕಿತರ ಪರೀಕ್ಷೆ, ಚಿಕಿತ್ಸೆ, ಔಷದೋಪಚಾರ ಮತ್ತು ಅವರ ಸಂಪರ್ಕಕ್ಕೆ ಬಂದವರ ಏಕಾಂತವಾಸ ಮುಂತಾದವುಗಳಿಗೆ ಅಪಾರ ಹಣ ಖರ್ಚುಮಾಡುತ್ತಿವೆ. ಇಂತಹ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಬೇಕಾಗುವ ಹಣ ಹೊಂದಿಸಿಕೊಳ್ಳುವ ಒಂದು ಸ್ಪಷ್ಟವಾದ ಮತ್ತು ತಕ್ಷಣದ ಮಾರ್ಗವೆಂದರೆ, ರಾಜ್ಯ ಸರ್ಕಾರಗಳು ಸಾಲ ಎತ್ತುವುದು. ಆದರೆ, ಅವು ಎತ್ತುವ ಸಾಲಗಳ ಮೇಲೆ ಒಂದು ಮಿತಿಯನ್ನು ನಿಗದಿಪಡಿಸಲಾಗಿದೆ. ಸಾಲದ ಮಿತಿಯನ್ನು ಹೆಚ್ಚಿಸಿಕೊಳ್ಳಲು ಕೇಂದ್ರ ಸರ್ಕಾರದ ಅನುಮತಿ ಪಡೆಯಬೇಕಾಗುತ್ತದೆ. ಈ ಅನುಮತಿಯನ್ನು ಕೇಂದ್ರವು ನಿರಾಕರಿಸುತ್ತಿದೆ. ರಾಜ್ಯಗಳು ದುರವಸ್ಥೆಯಲ್ಲಿವೆ. ಹಣದ ವಿಷಯದಲ್ಲಂತೂ ಹತಾಶರಾಗಿವೆ.

ರಾಜ್ಯಗಳ ಸಾಲದ ಮೇಲಿನ ಮಿತಿಯನ್ನು ಹೆಚ್ಚಿಸುವುದಷ್ಟೇ ಸಾಲದು. ಅವು ಸಾಲ ಎತ್ತಲು ಮಾರುಕಟ್ಟೆಗೆ ಹೋದಾಗ, ಅಲ್ಲಿ ಅತಿ ದುಬಾರಿ ಬಡ್ಡಿ ಕೊಡಬೇಕಾಗುತ್ತದೆ. ಅದು ಅವುಗಳನ್ನು ಸಾಲದ ಸುಳಿಗೆ ತಳ್ಳುತ್ತದೆ. ದೇಶದಲ್ಲಿ ಕೊರೊನಾ ಸೋಂಕು ಶಮನಗೊಂಡ ನಂತರವೂ, ಆರ್ಥಿಕತೆಯ ಬೆಳವಣಿಗೆ ಬಹಳ ಕಾಲ ಮಂದಗತಿಯಲ್ಲೇ ಇರುತ್ತದೆ. ಸಾಲದ ಮೇಲಿನ ಬಡ್ಡಿ ದರಗಳು ಸರ್ಕಾರದ ಆದಾಯ ಬೆಳವಣಿಗೆ ದರಕ್ಕಿಂತ ಹೆಚ್ಚಿಗೆ ಇದ್ದಾಗ, ಸರ್ಕಾರವು ಸಾಲದ ಬಲೆಗೆ ಬೀಳುತ್ತದೆ. ಹಾಗಾಗಿ, ರಾಜ್ಯಗಳ ಸಾಲದ ಮಿತಿ ಏರಿಸುವುದಷ್ಟೇ ಮುಖ್ಯವಲ್ಲ, ಅವುಗಳಿಗೆ ಕಡಿಮೆ ಬಡ್ಡಿಯ ಸಾಲ ದೊರೆಯುವಂತೆ ನೋಡಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. (ಯೂರೋ ಬಾಂಡ್ ಮೂಲದ ಸಾಲ ಎತ್ತುವ ಸಂದರ್ಭದಲ್ಲಿ, ನಿಖರವಾಗಿ ಇಂತಹದ್ದೇ ಬೇಡಿಕೆಯನ್ನು ಇಟಾಲಿಯನ್ ಸರ್ಕಾರವು ಯುರೋಪಿಯನ್ ಒಕ್ಕೂಟಕ್ಕೆ ಸಲ್ಲಿಸಿತ್ತು). ಆದ್ದರಿಂದ, ರೆಪೊ ದರದಲ್ಲಿ (ಅಂದರೆ, ಬ್ಯಾಂಕ್‌ಗಳು ಆರ್‌ಬಿಐನಿಂದ ಪಡೆಯುವ ಸಾಲಗಳ ಮೇಲಿನ ಬಡ್ಡಿ ದರದಲ್ಲಿ) ಸಾಲ ದೊರೆತರೆ, ರಾಜ್ಯ ಸರ್ಕಾರಗಳಿಗೆ ನಿಜಕ್ಕೂ ಪರಿಹಾರ ಸಿಗುತ್ತದೆ.

ಇದಕ್ಕೂ ಕೇಂದ್ರದ ಅನುಮತಿ ಬೇಕಾಗುತ್ತದೆ. ಹಣ ಲಭ್ಯತೆ (ಲಿಕ್ವಿಡಿಟಿ) ಯಂತಹ ಆಪತ್ಕಾಲೀನ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರಗಳಿಗೆ ರಿಸರ್ವ್ ಬ್ಯಾಂಕ್ ತಾತ್ಕಾಲಿಕ ಮುಂಗಡ ಕೊಡುತ್ತದೆ, ನಿಜ. ಆದರೆ, ಅದು ಸಾಲವಲ್ಲ. ಅದೊಂದು ಕೇವಲ ತಾತ್ಕಾಲಿಕ ಏರ್ಪಾಟು. ಅದರ ಅವಧಿ ಬಹಳ ಕಡಿಮೆ. ಅವಧಿಯನ್ನು ವಿಸ್ತರಿಸಿ ಎಂದೊ ಅಥವಾ ಅದೇ ಸೌಲಭ್ಯವನ್ನು ಮತ್ತೊಮ್ಮೆ ಕೊಡಿ ಎಂದೊ ಕೇಳಲಾಗದು. ಅದು ಸಾಧ್ಯವಿದ್ದರೆ ಅವು ಸಾಲಗಳೇ ಆಗುತ್ತವೆ. ಹಾಗಾಗಿ, ರಾಜ್ಯಗಳು ತಮಗೆ ಬೇಕಾದಾಗ ರಿಸರ್ವ್ ಬ್ಯಾಂಕ್‌ನಿಂದ ಸಾಲ ಪಡೆಯುವುದು ಸಾಧ್ಯವೇ ಇಲ್ಲ. ರಾಜ್ಯಗಳು ಎದುರಿಸುತ್ತಿರುವ ಪ್ರಸ್ತುತ ಪರಿಸ್ಥಿತಿಯು ಅಭೂತಪೂರ್ವವಾದದ್ದು. ಹಾಗಾಗಿ, ಈ ನಿಯಮವನ್ನು ರದ್ದು ಮಾಡುವುದು ಅಗತ್ಯವಾಗಿದೆ. ಕೇಂದ್ರವು ಅದನ್ನು ಮಾಡಬಹುದು. ಆದರೆ, ಕೊಡಬೇಕಿರುವ ಬಾಕಿ ಹಣವನ್ನೇ ರಾಜ್ಯಗಳು ಪದೇ ಪದೇ ಕೇಳಿಕೊಂಡರೂ ಸಹ ಬಿಡುಗಡೆ ಮಾಡದ ಕೇಂದ್ರವು ರಿಸರ್ವ್ ಬ್ಯಾಂಕ್‌ನಿಂದ ಸಾಲ ಎತ್ತಲು ಅನುಮತಿ ಕೊಡುತ್ತದೆಯೇ?

ಆರ್ಥಿಕವಾಗಿ ರಾಜ್ಯಗಳು ಬಹಳ ಒತ್ತಡಕ್ಕೆ ಒಳಗಾಗಿವೆ ಎಂದು ಹೇಳುವುದಾದರೆ, ಕೇಂದ್ರವೂ ಅದೇ ಒತ್ತಡಕ್ಕೆ ಒಳಗಾಗಿಲ್ಲವೇ? ಎಂದೂ ಕೇಳಬಹುದು. ಇಂತಹ ಪರಿಸ್ಥಿತಿಯಲ್ಲಿ, ಕೇಂದ್ರವು ರಾಜ್ಯಗಳ ನೆರವಿಗೆ ಬರಬೇಕೆಂದು ನಿರೀಕ್ಷಿಸುವುದು ಹೇಗೆ? ಇಂತಹ ಪ್ರಶ್ನೆಗೆ ಹೀಗೆ ಉತ್ತರ ಹೇಳಬಹುದು: ಜಾಗತೀಕರಣಗೊಂಡ ಹಣಕಾಸು ಬಂಡವಾಳವನ್ನು ಓಲೈಸುವ ಪ್ರಯತ್ನದಲ್ಲಿ ಸಂಪ್ರದಾಯಕತೆಗೆ ಅತಿಯಾಗಿ ಶರಣಾಗಿರುವ ನಮ್ಮ ಒಟ್ಟಾರೆ ಹಣಕಾಸಿನ ಏರ್ಪಾಟಿನಲ್ಲಿ, ರಾಜ್ಯಗಳು ಮತ್ತು ಕೇಂದ್ರದ ನಡುವೆ ಒಂದು ಅಸಮ್ಮಿತಿಯೂ ಇದೆ. ಅದೇನೆಂದರೆ, ಕೇಂದ್ರವು ರಾಜ್ಯ ಸರ್ಕಾರಗಳಿಗಿಂತ ಹೆಚ್ಚಿನ ಸ್ವಾತಂತ್ರ್ಯವನ್ನು ಹೊಂದಿದೆ. ಕೇಂದ್ರವು ತನಗೆ ಬೇಕು ಎನಿಸಿದಾಗ ತನ್ನ ಮೇಲಿರುವ ವಿತ್ತೀಯ ಶಿಸ್ತಿನ (ಕೊರತೆಯ) ಮಿತಿಯನ್ನು ಉಲ್ಲಂಘಿಸಬಹುದು: ಕೇಂದ್ರಕ್ಕಿರುವ ಏಕೈಕ ನಿರ್ಬಂಧವೆಂದರೆ ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಅನ್ನಿಸಿಕೆಗಳು ಮಾತ್ರ. (ಅದರ ಈ ಅನ್ನಿಸಿಕೆಯು ಅಂತಾರಾಷ್ಟ್ರೀಯ ಕ್ರೆಡಿಟ್–ರೇಟಿಂಗ್ ಏಜೆನ್ಸಿಗಳು ಏನು ಹೇಳುತ್ತವೆ ಎಂಬುದನ್ನು ಹೊಂದಿಕೊಂಡಿದೆ). ಕೇಂದ್ರವು, ರಿಸರ್ವ್ ಬ್ಯಾಂಕ್‌ನ ಅಧಿಕಾರ ವ್ಯಾಪ್ತಿಗೊಳಪಟ್ಟು, ತನ್ನ ಕೊರತೆಯನ್ನು ನೀಗಿಸಿಕೊಳ್ಳಲು ನೆರವಾಗುವಂತೆ ರಿಸರ್ವ್ ಬ್ಯಾಂಕನ್ನು ಬಳಸಿಕೊಳ್ಳಬಹುದು. ಕೇಂದ್ರವು ಯಾರ ಅನುಮತಿಯನ್ನೂ ತೆಗೆದುಕೊಳ್ಳದೆ ಸಾರ್ವಜನಿಕ ವಲಯದ ಘಟಕಗಳಿಂದ, ರೈಲ್ವೆಯಿಂದ, ವಿಶ್ವವಿದ್ಯಾಲಯಗಳಿಂದ, ಮತ್ತು ಖಾಸಗಿ ಕಾರ್ಪೊರೇಟ್ ವಲಯದಿಂದ, ನಿರ್ದಿಷ್ಟಪಡಿಸದ ಮತ್ತು ಅಸ್ಪಷ್ಟ ಉದ್ದೇಶಗಳ "ಪಿಎಂ ಕೇರ್ಸ್" ಯೋಜನೆಗೆ ಹಣ ಸಂಗ್ರಹಿಸಿಕೊಳ್ಳಬಹುದು. ಆದರೆ, ರಾಜ್ಯಗಳು ಪಡೆಯುವ ಸಾಲಗಳ ಮೇಲಿರುವ ಮಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸಲೇಬೇಕು. ಸಾಲಕ್ಕಾಗಿ ರಾಜ್ಯಗಳು ರಿಸರ್ವ್ ಬ್ಯಾಂಕನ್ನು ಕೇಳುವಂತಿಲ್ಲ. "ಪಿಎಂ ಕೇರ್ಸ್" ಯೋಜನೆಗೆ ಸಮಾನವಾದ ಏನನ್ನಾದರೂ ಪ್ರಯತ್ನಿಸಿದರೂ ಕೇಂದ್ರದ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ರಾಜ್ಯಗಳು ಮತ್ತು ಕೇಂದ್ರದ ನಡುವೆ ಇರುವ ಇಂತಹ ಅಸಮ್ಮಿತಿಯ ಸನ್ನಿವೇಶದಲ್ಲಿ, ಒಂದು ಭೀಕರ ತುರ್ತು ಪರಿಸ್ಥಿತಿ ಇರುವಾಗ, ಕೇಂದ್ರವು ರಾಜ್ಯಗಳ ನೆರವಿಗೆ ಧಾವಿಸಬೇಕಾಗುತ್ತದೆ. ಆದರೆ, ಅದನ್ನು ಬಿಜೆಪಿ ಸರಕಾರ ಮಾಡುತ್ತಿಲ್ಲ.

ಸ್ವಾತಂತ್ರ್ಯಾನಂತರದಲ್ಲೇ, ಹೆಚ್ಚು ಹೆಚ್ಚು ಅಧಿಕಾರವನ್ನು ಕೇಂದ್ರೀಕರಿಸಿಕೊಂಡಿರುವ ಸರ್ಕಾರ, ಇದು. "ತುರ್ತು ಪರಿಸ್ಥಿತಿ"ಯ ಸಮಯದಲ್ಲಿ ಎಲ್ಲ ಅಧಿಕಾರವನ್ನು ಕೈಯಲ್ಲಿ ಇಟ್ಟುಕೊಂಡಿದ್ದ ಇಂದಿರಾಗಾಂಧಿಯವರು ರಾಜ್ಯಗಳ ಮೇಲೆ ಸವಾರಿ ಮಾಡಿದ್ದು ನಿಜ. ಆದರೆ, ಅದು ಸಾಮಾನ್ಯ ಪರಿಸ್ಥಿತಿಯಾಗಿರಲಿಲ್ಲ. ಅದು, "ತುರ್ತುಪರಿಸ್ಥಿತಿ" ಎಂಬ ಅಪಖ್ಯಾತಿ ಹೊಂದಿತ್ತು. ಜೊತೆಗೆ, ರಾಜ್ಯಗಳ ತೆರಿಗೆ ವಿಧಿಸುವ ಅಧಿಕಾರ ಆಗ ಇನ್ನೂ ಅಬಾಧಿತವಾಗಿತ್ತು. ಜಿಎಸ್‌ಟಿ ಕಾರಣದಿಂದ ಈಗ ರಾಜ್ಯಗಳು ತೆರಿಗೆ ಅಧಿಕಾರ ಕಳೆದುಕೊಂಡು ಕೇಂದ್ರಕ್ಕೆ ಶರಣಾಗತವಾಗಿವೆ. ಜಿಎಸ್‌ಟಿ ಕಾಯ್ದೆಯ ಪ್ರಕಾರ, ಯಾವುದೇ ಒಂದು ಸರಕಿನ ಮೇಲೆ ಎಷ್ಟು ತೆರಿಗೆ ಹಾಕಬೇಕು ಎಂಬುದನ್ನು ಕೇಂದ್ರ ಹಣಕಾಸು ಸಚಿವರ ಅಧ್ಯಕ್ಷತೆಯ ಜಿಎಸ್ಟಿ ಕೌನ್ಸಿಲ್ ನಿರ್ಧರಿಸುತ್ತದೆ. ಮುಂಚಿನ ಹಾಗೆ ರಾಜ್ಯ ಸರ್ಕಾರವಲ್ಲ. ರಾಜ್ಯಗಳು ಜಿಎಸ್‌ಟಿಗೆ ಹೊರಳಿದಾಗ, ಅವುಗಳ ತೆರಿಗೆ ಆದಾಯದ ಇಳಿಕೆಯನ್ನು ತುಂಬಿಕೊಡುವ ಭರವಸೆಯ ಮೇಲೆ ತನ್ನ ತೆಕ್ಕೆಗೆ ಪಡೆದ ಬಿಜೆಪಿ ಸರ್ಕಾರವು ಈಗ ರಾಜ್ಯಗಳನ್ನು ನಡು ನೀರಿನಲ್ಲಿ ಕೈಬಿಟ್ಟಿದೆ.

ಜೊತೆಗೆ, ಇಂದಿರಾಗಾಂಧಿಯವರ ಕಾಲದಲ್ಲಿ, ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ನೇತೃತ್ವದಲ್ಲಿ, ಅಧಿಕಾರ ಕೇಂದ್ರೀಕರಣದ ವಿರುದ್ಧ ಮತ್ತು ರಾಜ್ಯಗಳ ಹಕ್ಕುಗಳ ಪರವಾಗಿ ಒಂದು ಪ್ರಬಲ ಚಳುವಳಿ ನಡೆದಿತ್ತು. ಅನೇಕ ಮುಖ್ಯಮಂತ್ರಿಗಳು ಸೇರಿ ನಡೆಸಿದ, ಮತ್ತು ಶ್ರೀನಗರದಲ್ಲಿ ಸಮಾಪ್ತಗೊಂಡ, ಅನೇಕ ಸಮಾವೇಶಗಳು ಈ ಚಳುವಳಿಯ ಮೈಲಿಗಲ್ಲುಗಳು. ಅಧಿಕಾರ ಕೇಂದ್ರೀಕರಿಸುವ ಪ್ರವೃತ್ತಿಯ ಬಿಜೆಪಿ ಸರ್ಕಾರವು ಬೇರೆ ಬೇರೆ ಪಕ್ಷಗಳಿಗೆ ಸೇರಿದ ಮುಖ್ಯಮಂತ್ರಿಗಳನ್ನು ಈ ರೀತಿಯಲ್ಲಿ ಸಮಾವೇಶಗೊಳ್ಳದಂತೆ ತಡೆಯುವ ಸಲುವಾಗಿ ಒಂದು ಕೈಯಲ್ಲಿ ಬೆಣ್ಣೆ ಇನ್ನೊಂದು ಕೈಯಲ್ಲಿ ದೊಣ್ಣೆ ಹಿಡಿದು ಅವರನ್ನು ಪಳಗಿಸುತ್ತಿದೆ. ಪರೋಕ್ಷ ಒತ್ತಾಯಗಳಿಂದಾಗಿ, ಈ ಮುಖ್ಯಮಂತ್ರಿಗಳು, ಅನುಚ್ಛೇದ 370ರ ರದ್ದತಿ, ಕಾಶ್ಮೀರದ ಚುನಾಯಿತ ವಿಧಾನ ಸಭೆಯ ಅಧಿಕಾರವನ್ನು ಕೇಂದ್ರದಿಂದ ನೇಮಕಗೊಂಡ ಆ ರಾಜ್ಯದ ರಾಜ್ಯಪಾಲರು ಅತಿಕ್ರಮಿಸಿ ಆ ರಾಜ್ಯವನ್ನು ಇಬ್ಭಾಗಿಸಿ ಕೇಂದ್ರಾಡಳಿತ ಪ್ರದೇಶಗಳ ದರ್ಜೆಗೆ ಇಳಿಸಿದ ಅಕ್ರಮಗಳನ್ನು ಅನುಮೋದಿಸುವಂತೆ ನೋಡಿಕೊಳ್ಳಲಾಯಿತು.

ಸರ್ವವ್ಯಾಪಿ ಕೊರೋನಾದಿಂದ ಬಾಧಿತರಾಗಿರುವ ಜನರಿಗೆ ಒದಗಿಸುತ್ತಿರುವ ಪರಿಹಾರದ ವೆಚ್ಚಗಳನ್ನು ರಾಜ್ಯ ಸರ್ಕಾರಗಳು ಭರಿಸುತ್ತಿವೆ. ಹಾಗಾಗಿ, ಅವುಗಳ ಆರ್ಥಿಕ ಹೊರೆ ಹೆಚ್ಚುತ್ತಿದೆ. ಈ ಸನ್ನಿವೇಶದಲ್ಲಿ ಕೇಂದ್ರವು ಅವರಿಗೆ ಹಣದ ನೆರವು ನಿರಾಕರಿಸಿದರೆ, ಸಂಕಟಗ್ರಸ್ತ ಜನಗಳಿಗೆ ನೆರವು ನಿರಾಕರಿಸಿದಂತೆಯೇ. ಇಂತಹ ಕ್ರಮಗಳ ಮೂಲಕ ಒಕ್ಕೂಟ ವ್ಯವಸ್ಥೆಯನ್ನು ಸೊರಗಿಸುವ ವಿಚಾರವು ಒಂದು ಮುಖ್ಯವಾದ ವರ್ಗ ದೃಷ್ಟಿ ಕೋನ ಹೊಂದಿದೆ. ಮತ್ತೊಂದು ಕಾರಣದಿಂದಾಗಿ ಇದು ಅಪಾಯಕಾರಿಯೂ ಆಗುತ್ತದೆ.

ಭಾರತ ಒಕ್ಕೂಟ ವ್ಯವಸ್ಥೆಯು ಕೇವಲ ಒಂದು ಆಡಳಿತಾತ್ಮಕ ಏರ್ಪಾಟು ಮಾತ್ರವಲ್ಲ. ಅದೊಂದು ಚಿಂತನೆ. ಅದೊಂದು ಚೇತನ. ಅದು, ಪ್ರತಿಯೊಬ್ಬ ಭಾರತೀಯನ ಮನಸ್ಸನ್ನು ಆವರಿಸಿರುವ ಎರಡು ರೀತಿಯ ರಾಷ್ಟ್ರೀಯ ಪ್ರಜ್ಞೆಗಳ ಅಭಿವ್ಯಕ್ತಿ. ಒಂದು, ಅಖಿಲ ಭಾರತ ಪ್ರಜ್ಞೆ. ಮತ್ತೊಂದು, ತಾನು ಒಬ್ಬ ಬಂಗಾಳಿ ಅಥವಾ ಗುಜರಾತಿ ಅಥವಾ ತಮಿಳು ಅಥವಾ ಕನ್ನಡಿಗ ಅಥವಾ ಮಹಾರಾಷ್ಟ್ರೀಯ ಅಥವಾ ಪಂಜಾಬಿ ಮುಂತಾದ ಒಂದು ಪ್ರಾದೇಶಿಕ–ಭಾಷಿಕ ಗುಂಪಿಗೆ ಸೇರಿದ ಪ್ರಜ್ಞೆ. ಈ ಎರಡೂ ಬಗೆಯ ಪ್ರಜ್ಞೆಗಳ ನಡುವೆ ಸರಿಯಾದ ಸಮತೋಲನವನ್ನು ಕಾಯ್ದುಕೊಳ್ಳುವ ಪ್ರಯತ್ನವನ್ನು ಸದಾ ಕಾಲ ಮಾಡುತ್ತಿರಬೇಕು. ಭಾರತ ಒಕ್ಕೂಟ ವ್ಯವಸ್ಥೆಯು ಈ ಸಮತೋಲನವನ್ನು ಆಧರಿಸಿರಬೇಕು. ಇಂದಿರಾ ಗಾಂಧಿಯವರ ಕಾಲದಲ್ಲಿ ಪ್ರಯತ್ನಿಸಿದ ರೀತಿಯ ಅಧಿಕಾರ ಕೇಂದ್ರೀಕರಣವಾಗಲಿ ಅಥವಾ ಒಂದು ಮಟ್ಟಿನ ಯಶಸ್ಸಿನೊಂದಿಗೆ ಮಾಡುತ್ತಿರುವ ಹೆಚ್ಚು ಹೆಚ್ಚಿನ ಅಧಿಕಾರ ಕೇಂದ್ರೀಕರಣದ ಇಂದಿನ ಪ್ರಯತ್ನಗಳಾಗಲಿ, ರಾಜ್ಯಗಳನ್ನು ದುರ್ಬಲಗೊಳಿಸುವುದು ಮಾತ್ರವಲ್ಲ, ಭಾರತ ಒಕ್ಕೂಟ ವ್ಯವಸ್ಥೆಯನ್ನೇ ಹಾಳುಗೆಡವುತ್ತವೆ.

ಎಲ್ಲಾ ಸಂಪನ್ಮೂಲಗಳನ್ನೂ ಮತ್ತು ಎಲ್ಲಾ ಅಧಿಕಾರಗಳನ್ನೂ ಕೇಂದ್ರೀಕರಿಸುವ ಕ್ರಮವು ರಾಜ್ಯಗಳನ್ನು ದುರ್ಬಲಗೊಳಿಸಿ ಕೇಂದ್ರವನ್ನು ಬಲಗೊಳಿಸುತ್ತದೆ, ನಿಜ. ಆದರೆ, ಇದೊಂದು ಒಬ್ಬರು ಕಳೆದುಕೊಂಡದ್ದನ್ನು ಇನ್ನೊಬ್ಬರು ಬಾಚಿಕೊಳ್ಳುವ ಆಟವಲ್ಲ. ವಾಸ್ತವವಾಗಿ, ಅಧಿಕಾರದ ಕೇಂದ್ರೀಕರಣವು ಇಡೀ ವ್ಯವಸ್ಥೆಯನ್ನು ದುರ್ಬಲಗೊಳಿಸಿ ಅದನ್ನು ಆಪತ್ತಿಗೆ ಒಡ್ಡುತ್ತದೆ. ಈ ಅಂಶವನ್ನು, ಇಂದಿರಾಗಾಂಧಿಯವರ ಅಧಿಕಾರ ಕೇಂದ್ರೀಕರಣ ಪ್ರಯತ್ನಗಳ ವಿರುದ್ಧ 1980ರ ದಶಕದಲ್ಲಿ ಹೋರಾಟದ ನೇತೃತ್ವ ವಹಿಸಿದ್ದ ಕಾಮ್ರೇಡ್ ಜ್ಯೋತಿ ಬಸು ಅವರು ಪದೇ ಪದೇ ಒತ್ತಿ ಹೇಳಿದರು, ಎಂದೂ ದಣಿಯಲೇ ಇಲ್ಲ.

ಬಿಜೆಪಿಯು ಈ ಚಿಂತನೆಗೆ ವಿರುದ್ಧವಾಗಿದೆ ಮತ್ತು ಈ ಅಂಶವನ್ನು ಗ್ರಹಿಸಲು ಅದು ಅಸಮರ್ಥವಾಗಿದೆ. ಬಲಶಾಲಿಯಾದ ಕೇಂದ್ರದಿಂದ ಮಾತ್ರ ದೇಶವನ್ನು ಒಟ್ಟಾಗಿ ಹಿಡಿದಿಟ್ಟುಕೊಳ್ಳುವುದು ಮತ್ತು ಅದನ್ನು ಬಲಪಡಿಸುವುದು ಸಾಧ್ಯ ಎಂಬುದು ಬಿಜೆಪಿಯ ಚಿಂತನೆ. ಅದು ಸರ್ವಾಧಿಕಾರೀ ಚಿಂತನೆ. ಆಧುನಿಕ ಭಾರತದ ರಚನೆಯನ್ನು ಮತ್ತು ಅದರ ಪ್ರಜಾಸತ್ತಾತ್ಮಕ, ಜಾತ್ಯಾತೀತ, ಎಲ್ಲರನ್ನೂ ಒಳಗೊಳ್ಳುವ ಮತ್ತು ಸಮತೆಯ ಸಮಾಜವನ್ನು ಕಟ್ಟುವ ಯೋಜನೆಯ ಅಂಶಗಳನ್ನು ಬಿಜೆಪಿ ಒಪ್ಪಿಲ್ಲ. ಮೃಗೀಯ ಬಲವನ್ನು ದೈವತ್ವಕ್ಕೇರಿಸುವ ಮತ್ತು ಪ್ರತ್ಯೇಕತಾ ಪ್ರವೃತ್ತಿಗಳನ್ನು ಪ್ರೋತ್ಸಾಹಿಸುವ ರೀತಿಯ ಬಿಜೆಪಿಯ ಚಿಂತನೆಯು ಆಧುನಿಕ ಭಾರತದ ಬುನಾದಿಯನ್ನೇ ದುರ್ಬಲಗೊಳಿಸುತ್ತದೆ.

ಸರ್ವವ್ಯಾಪಿಯಾಗಿರುವ ಮತ್ತು ಅಪಾಯಕಾರೀ ಕೊರೋನಾ ಜಾಡ್ಯವು ಇಡೀ ದೇಶವನ್ನು ಕಾಡುತ್ತಿರುವ ಈ ಸಮಯದಲ್ಲಿ, ರಾಜ್ಯಗಳ ಹಣಕಾಸಿನ ಅಗತ್ಯಗಳ ಬಗ್ಗೆ ಕೇಂದ್ರದ ನಡೆ ಅದರ ಧೋರಣೆ ಏನೆಂಬುದರ ಪ್ರತೀಕವಾಗಿದೆ. ಅದೊಂದು ಅಪಾಯದ ಹಾದಿ.

## ‘ಕೊವಿಡ್ ಜುಮ್ಲಾ’

# ಎರಡನೇ ಕಂತು: ಒಂದು ಕ್ರೂರ ವಂಚನೆ

ಪುಟ 9 ರಿಂದ

ಭ್ರಷ್ಟಾಚಾರ ನಡೆದಿದೆ ಎನ್ನುತ್ತ ಕೋಟ್ಯಂತರ ರೇಷನ್ ಕಾರ್ಡ್‌ಗಳನ್ನು ರದ್ದು ಮಾಡಿ ಬಡವರು ಕಷ್ಟ ಪಡುವಂತೆ ಮಾಡಿದ್ದ ಸರಕಾರ ಇದು. ಈಗ ರೇಷನ್ ಕಾರ್ಡ್ ಇಲ್ಲದವರೂ 5 ಕೆಜಿ ಆಹಾರಧಾನ್ಯಗಳು ಮತ್ತು ಒಂದು ಕೆ.ಜಿ. ಬೇಳೆಯನ್ನು ಪಡೆಯಬಹುದೆಂದು ಉದಾರತೆಯ ಪ್ರದರ್ಶನ ಮಾಡುತ್ತಿದೆ. ಈಗಿರುವ ಸ್ಕೀಮುಗಳನ್ನೇ ಹೊಸ ಪೊಟ್ಟಣದಲ್ಲಿ ಕಟ್ಟಿ ಕೊಡಲಾಗುತ್ತಿದೆಯಷ್ಟೇ. ಉದಾಹರಣೆಗೆ ‘ಒಂದು ರಾಷ್ಟ್ರ ಒಂದು ಪಡಿತರ’(ಒಎನ್‌ಒಆರ್) ಈಗ 2021ರ ಮಧ್ಯಭಾಗದಲ್ಲಿಬೆಳಕು ಕಾಣಲಿದೆ. ಆದರೆ ಈ ಹೊಸ ಪೊಟ್ಟಣದಲ್ಲಿರುವ ಹಳೆಯ ಕ್ರಮಗಳು ಇಂದು ಘೋರ ಸಂಕಟಗಳನ್ನು ಎದುರಿಸುತ್ತಿರುವ ಜನಗಳಿಗೆ ಯಾವ ಪ್ರಯೋಜನಕ್ಕೂ ಇಲ್ಲ.

ಪ್ರಧಾನ ಮಂತ್ರಿಗಳು ವಲಸೆ ಕಾರ್ಮಿಕರ ಸಂಖ್ಯೆಯನ್ನು 8 ಕೋಟಿಗೆ ಇಳಿಸಿದ್ದಾರೆ. ಸದ್ಯದ ಅಂದಾಜು 10 ಕೋಟಿ ಎಂದು ಮಾರ್ಚ್ 2020ರಲ್ಲಿ ಸಂಸತ್ತಿಗೆ ಹೇಳಲಾಗಿತ್ತು. ಇದರರ್ಥ ಉಚಿತ ಆಹಾರಕ್ಕೆ ನೀಡಿರುವ ಮೊತ್ತವೂ ಎಲ್ಲರನ್ನೂ ತಲುಪುವಂತಿಲ್ಲ.

ಮನರೇಗದಲ್ಲಿ ಉದ್ಯೋಗ ನಿರ್ಮಾಣದಲ್ಲಿ 40ರಿಂದ 50ಶೇ. ಹೆಚ್ಚಳವಾಗಿದೆ ಎಂದು ಹಣಕಾಸು ಮಂತ್ರಿಗಳು ದೇಶವನ್ನು ತಪ್ಪುದಾರಿಗೆಳೆದಿದ್ದಾರೆ. ಕಳೆದ ವರ್ಷ ಎಪ್ರಿಲ್‌ನಲ್ಲಿ 27.3 ಕೋಟಿ ವ್ಯಕ್ತಿದಿನಗಳ ಉದ್ಯೋಗ ನಿರ್ಮಾಣವಾಗಿತ್ತು. ಈ ವರ್ಷ ಅದು 11.1 ಕೋಟಿಗೆ ಇಳಿದಿದೆ. ಆದ್ದರಿಂದ ತಮ್ಮ ಊರುಗಳಿಗೆ ಮರಳಿರುವ ವಲಸೆ ಕಾರ್ಮಿಕರಿಗೆ ನಿರುದ್ಯೋಗ ಕಾಡಲಿದೆ. ರಿಟ್ರೆಂಚ್ ಆಗಿರುವ ಕಾರ್ಮಿಕರ ಬಗ್ಗೆಯೂ ಹಣಕಾಸು ಮಂತ್ರಿಗಳು ನಿರ್ಲಕ್ಷ್ಯದಿಂದ ವರ್ತಿಸಿದ್ದಾರೆ. ಉದ್ದಿಮೆಗಳಿಗೆ ಮತ್ತು ವ್ಯವಹಾರಗಳಿಗೆ ಸಾಲ ನೀಡಿಕೆಗಳನ್ನು ಅವರು ತಮ್ಮ ಶ್ರಮಿಕ ಪಡೆಯನ್ನು ರಕ್ಷಿಸಬೇಕು ಎಂಬ ಷರತ್ತಿಗೆ ಒಳಪಡಿಸುವ ಬದಲು ಮತ್ತು ಆ ಶ್ರಮಿಕರ ಸಂಬಳಗಳ ಒಂದಂಶವನ್ನು ಹಣಕಾಸು ನೆರವಾಗಿ ಕೊಡುವುದಾಗಿ ಹೇಳುವ ಬದಲು, ಹಣಕಾಸು ಮಂತ್ರಿಗಳು ರಿಟ್ರೆಂಚ್ ಆದವರಿಗೆ ಹೊಸ ನಿಪುಣತೆಯನ್ನು ಕಲಿಸಲಾಗುವುದು ಎಂದಷ್ಟೇ ಹೇಳಿದ್ದಾರೆ. ಹೀಗಿದೆ ಈ ಸರಕಾರದ ಕಾರ್ಮಿಕ-ವಿರೋಧಿ ಮನೋಭಾವ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಖೇದ ವ್ಯಕ್ತಪಡಿಸಿದೆ.

ಹಣಕಾಸು ಮಂತ್ರಿಗಳು ‘ಪರಿಹಾರಾತ್ಮಕ ಅರಣ್ಯೀಕರಣ ನಿಧಿ ಕಾಂಪೆ'ದ್'(ಸಿಎಎಂಪಿಎ) ಯ ಅಡಿಯಲ್ಲಿರುವ ಹಣವನ್ನು ಬಳಸುವ ಬಗ್ಗೆ ಹೇಳಿದ್ದಾರೆ. ಆದರೆ ಇಂತಹ ನಿರ್ದೇಶನಗಳನ್ನು ಕೊಡುವ ಯಾವುದೇ ಹಕ್ಕು ಕೇಂದ್ರ ಸರಕಾರಕ್ಕೆ ಇಲ್ಲ. ಈ ನಿಧಿಯಲ್ಲಿರುವ ಹಣವನ್ನು ಹೇಗೆ ಖರ್ಚು ಮಾಡಬೇಕು ಎಂಬುದನ್ನು ರಾಜ್ಯ ಸರಕಾರಗಳು ಸ್ಥಳೀಯ ಸಮುದಾಯಗಳು, ಮುಖ್ಯವಾಗಿ ಪ್ರಾಜೆಕ್ಟುಗಳಿಂದ ಬಾಧಿತರಾಗುವ ಬುಡಕಟ್ಟು ಜನಗಳೊಂದಿಗೆ ನಿರ್ಧರಿಸಬೇಕು, ಕೇಂದ್ರ ಸರಕಾರದ ನಿರ್ದೇಶನಗಳಂತೆ ಅಲ್ಲ ಎಂದು ಸಿಪಿಐ(ಎಂ)ಪೊಲಿಟ್‌ಬ್ಯುರೊ ನೆನಪಿಸಿದೆ.

ಹಣಕಾಸು ಮಂತ್ರಿಗಳು ವಲಸೆ ಕಾರ್ಮಿಕರ ಆಹಾರದ ಅಗತ್ಯಗಳನ್ನು ಕೇಂದ್ರ ಸರಕಾರ ನೋಡಿಕೊಂಡಿದೆ ಎಂದು ಹೇಳಿಕೊಂಡಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಎಸ್‌ಡಿಆರ್‌ಎಫ್(ರಾಜ್ಯ ವಿಪತ್ತು ಪರಿಹಾರ ನಿಧಿ) ಗೆ ವಿಪತ್ತು ಇರಲಿ, ಇಲ್ಲದಿರಲಿ, ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು 75:25 ಶೇಕಡಾ ಪ್ರಮಾಣದಲ್ಲಿ ದೇಣಿಗೆ ನೀಡಬೇಕು. ಆದ್ದರಿಂದ ಕೇಂದ್ರ ಸರಕಾರ ಕಾನೂನು ಪ್ರಕಾರ ಕೊಡಲೇಬೇಕಾದ ಹಣವನ್ನು ಕೊಟ್ಟಿದೆಯಷ್ಟೇ, ಎಂದೂ ಸಿಪಿಐ(ಎಂ) ಪೊಲಿಟ್‌ಬುರೊ ಸರಕಾರಕ್ಕೆ ನೆನಪಿಸಬೇಕಾಗಿ ಬಂದಿದೆ. ನಿಜ ಹೇಳಬೇಕೆಂದರೆ, ಒಂದೇ ಒಂದು ಪೈಸೆ ಹೆಚ್ಚುವರಿ ಹಣವನ್ನು ಯಾವುದೇ ರಾಜ್ಯ ಸರಕಾರಕ್ಕೆ ಕೊಟ್ಟಿಲ್ಲ. ಆದರೆ ಈಗ ತಾನು ಕಾನೂನು ಪ್ರಕಾರ ಮಾಡಲೇಬೇಕಾದ್ದನ್ನು ತನ್ನ ಉದಾರತೆ ಎಂಬಂತೆ ಪ್ರದರ್ಶಿಸುತ್ತಿದೆ !

ಮಹಾಮಾರಿಯನ್ನು ಎದುರಿಸಲು ದೇಶ ಮತ್ತು ಜನತೆ ಏಕಾಗ್ರತೆಯಿಂದ ಕೆಲಸ ಮಾಡಬೇಕಾಗಿರುವ ಮತ್ತು ಜನಗಳಿಗೆ ಒಂದು ಆರೋಗ್ಯವಂತ ಬದುಕು ಹಾಗೂ ಜೀವನೋಪಾಯವನ್ನು ಖಾತ್ರಿಪಡಿಸಬೇಕಾದ ಸಮಯದಲ್ಲಿ ಈ ಸರಕಾರ ಅತ್ಯಂತ ನಿರ್ಲಕ್ಷ್ಯದಿಂದ, ಈ ಮಹಾಮಾರಿಯನ್ನು, ಶ್ರೀಮಂತರನ್ನು ಶ್ರೀಮಂತರಾಗಿಸುವ ಮತ್ತು ಬಡವರನ್ನು ಮತ್ತಷ್ಟು ದಾರಿದ್ರ್ಯಕ್ಕೆ ಇಳಿಸುವ ತನ್ನ ಆರ್ಥಿಕ ಸುಧಾರಣೆಗಳ ಅಜೆಂಡಾವನ್ನು ಮುಂದೊಯ್ಯುವ ಒಂದು ಅವಕಾಶವಾಗಿ ಕಾಣುತ್ತಿದೆ ಎಂದು ಖೇದ ವ್ಯಕ್ತಪಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ಈ ಕೆಳಗಿನ ಆಗ್ರಹಗಳನ್ನು ಪುನರುಚ್ಚರಿಸಿದೆ:

- ಲಾಕ್‌ಡೌನ್ ಹೇರಿದ ನಂತರ 14 ಕೋಟಿಯಷ್ಟು ನಿರುದ್ಯೋಗ ಬೆಳೆದಿರುವಾಗ, ನಗರ ಪ್ರದೇಶಗಳ 80ಶೇ. ಬಡವರು ತಮ್ಮ ಉದ್ಯೋಗವನ್ನು ಕಳಕೊಂಡಿರುವಾಗ, ಸರಕಾರ ಮುಂದಿನ ಮೂರು ತಿಂಗಳು ಆದಾಯ ತೆರಿಗೆಯ ವ್ಯಾಪ್ತಿಗೆ ಬರದ ಎಲ್ಲ ಕುಟುಂಬಗಳಿಗೂ ಕನಿಷ್ಟ 7500ರೂ. ನಗದು ವರ್ಗಾವಣೆ ಮಾಡುವುದು ಅತ್ಯಗತ್ಯವಾಗಿದೆ.
- ಮೂರನೇ ಒಂದರಷ್ಟು ಕುಟುಂಬಗಳ ಬಳಿ ಒಂದು ವಾರಕ್ಕಿಂತ ಹೆಚ್ಚು ಕಾಲ ತಾಳಿಕೊಳ್ಳುವ ಸಂಪನ್ಮೂಲಗಳು ಇಲ್ಲದಿರುವಾಗ, ಪ್ರತಿವ್ಯಕ್ತಿಗೆ ತಿಂಗಳಿಗೆ 10 ಕೆ.ಜಿ.ಆಹಾರಧಾನ್ಯಗಳನ್ನು ಆರು ತಿಂಗಳ ವರೆಗೆ ಉಚಿತವಾಗಿ ನಮ್ಮ ಗೋದಾಮುಗಳಲ್ಲಿರುವ 7.7 ಕೋಟಿ ಟನ್ ದಾಸ್ತಾನಿನಿಂದ ಕೊಡುವುದು ಅಗತ್ಯವಾಗಿದೆ.
- ಲಾಕ್‌ಡೌನಿನಿಂದ ಕೃಷಿ ಸಂಕಟ ಇನ್ನಷ್ಟು ಆಳಗೊಂಡಿರುವುದರಿಂದಾಗಿ, ನಮ್ಮ ರೈತರು ಬದುಕುಳಿಯಬೇಕಾದರೆ ಒಂದು ಬಾರಿಯ ಸಾಲ ಮನ್ನಾ ಅಗತ್ಯವಾಗಿದೆ.
- ರಾಜ್ಯಗಳಿಗೆ ದೊಡ್ಡ ಪ್ರಮಾಣದಲ್ಲಿ ಹಣಕಾಸು ನೆರವನ್ನು ತುರ್ತಾಗಿ ಕೊಡುವುದು ಅಗತ್ಯವಾಗಿದೆ.
- ಎಲ್ಲಕ್ಕಿಂತ ತುರ್ತಾಗಿ, ಕಳೆದ ಐವತ್ತು ದಿನಗಳಿಂದ ಬೀದಿಗಳ ಮೇಲಿರುವ, ಪ್ರಾಣ ಕಳಕೊಳ್ಳುತ್ತಿರುವ, ಹಸಿವು, ಸಂಕಟಗಳಿಂದ ನರಳುತ್ತಿರುವ ನಮ್ಮ ವಲಸೆ ಕಾರ್ಮಿಕರಿಗೆ ಉಚಿತ ಸಾರಿಗೆ ವ್ಯವಸ್ಥೆಯನ್ನು ಮಾಡಬೇಕಾಗಿದೆ.

ಮೋದಿ ಸರಕಾರ ಇವುಗಳಲ್ಲಿ ಯಾವುದೊಂದೂ ಉದ್ದೇಶವನ್ನು ಈಡೇರಿಸುವಲ್ಲಿ ವಿಫಲವಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಕ್ರಮಗಳನ್ನು ತುರ್ತಾಗಿ ಜಾರಿಗೊಳಿಸಬೇಕು ಎಂದು ಮತ್ತೊಮ್ಮೆ ಆಗ್ರಹಿಸಿದೆ.






‘ಸ್ವಾವಲಂಬಿ ಭಾರತ’! ವ್ಯಂಗ್ಯಚಿತ್ರ: ಮಂಜುಲ್

## ಲಕ್ಷ-ಕೋಟಿಗಳ, ಶೇಕಡಾಗಳ ಮಾಯಾಜಾಲ

**‘ಆತ್ಮನಿರ್ಭರ್ ಭಾರತ್’ ಪ್ಯಾಕೇಜಿನ ಕಂತುಗಳು (ಲಕ್ಷ ಕೋಟಿ ರೂ.ಗಳಲ್ಲಿ)**

| ಯೋಜನೆ/ಕ್ರಮಗಳು | ಮೊತ್ತ | ಜಿಡಿಪಿಯ% | ನಿಜ ವೆಚ್ಚ | ಜಿಡಿಪಿಯ% |
|---|---|---|---|---|
| **ಮೇ 12 ರ ಮೊದಲು** | | | | |
| ಮಾರ್ಚ್ 27 | | | | |
| ‘ಗರೀಬ್ ಕಲ್ಯಾಣ್ ಯೋಜನಾ’ | 1.70 | 0.85 | 0.90 | 0.45% |
| **ಫೆಬ್ರುವರಿ 6*** | | | | |
| ಆರ್‌ಬಿಐ ನ ಲಿಕ್ವಿಡಿಟಿ ಕ್ರಮಗಳು | 2.80 | 1.40 | – | – |
| ಮಾರ್ಚ್ 27 | | | | |
| ಆರ್‌ಬಿಐ ನ ಲಿಕ್ವಿಡಿಟಿ ಕ್ರಮಗಳು | 3.74 | 1.80 | – | – |
| ಎಪ್ರಿಲ್17 | | | | |
| ಆರ್‌ಬಿಐ ನ ಟಿಎಲ್‌ಟಿಆರ್‌ಒ | 0.5 | 0.25 | – | – |
| ನಬಾರ್ಡ್ ಮುಂ.ಗಳಿಗೆ ಪುನರ್ಧನ | 0.5 | 0.25 | – | – |
| ಎಪ್ರಿಲ್27 | | | | |
| ಮ್ಯುಚುವಲ್ ಫಂಡ್‌ಗಳಿಗೆ ಸ್ಪೆಷಲ್ ಲಿಕ್ವಿಡಿಟಿ | 0.5 | 0.25 | – | – |
| ಮೆ 12ರ ಮೊದಲು ಒಟ್ಟು | **9.8*** | **4.8** | **0.90** | **0.45** |
| **ಮೇ 12 ರ ನಂತರ** | | | | |
| ಮೇ 13 | | | | |
| ಎಂಎಸ್‌ಎಂಇ ಗಳಿಗೆ | 5.94 | 2.97 | 0.17-0.26** | 0.09-0.13 |
| ಮೇ 14 | | | | |
| ವಲಸೆ ಕಾರ್ಮಿಕರು ಮತ್ತಿತರರಿಗೆ | 3.14 | 1.57 | 0.05-0.15*** | 0.03-0.08 |
| ಮೇ 15 | | | | |
| ರೈತರು-ಕೃಷಿ | 1.5 | 0.75 | – | – |

*** ಕೆಲವು ಪರಿಣಿತರು ಫೆಬ್ರುವರಿ 6 ರ ವೇಳೆಗೆ ಇನ್ನೂ ಕೊವಿಡ್ ಕ್ರಮಗಳು ಮಾತು ಕೇವಲ ಕೇರಳಕ್ಕೆ ಸೀಮಿತವಾಗಿದ್ದರಿಂದ ಅದನ್ನು ಕೊವಿಡ್ ಪ್ಯಾಕೇಜಿನಲ್ಲಿ ಪರಿಗಣಿಸಿಲ್ಲ. ಅವರ ಪ್ರಕಾರ ಮೇ12 ರ ವೇಳೆಗೆ ಪ್ರಕಟವಾದ ಪ್ಯಾಕೇಜ್‌ಗಳ ಮೊತ್ತ 8.4ಲಕ್ಷ ಕೋಟಿ ರೂ. ಅಂದರೆ ಜಿಡಿಪಿಯ 4.2%.**
**ಅಂದರೆ ಮೇ 15 ರ ವೇಳೆಗೆ ಒಟ್ಟು 18.98 ಲಕ್ಷ ಕೊಟಿ ರೂ.ಗಳ ಪ್ಯಾಕೇಜ್ ಪ್ರಕಟಗೊಂಡಿದೆ.**
**ಇದರಲ್ಲಿ ಸರಕಾರಕ್ಕೆ ತಗಲಿರುವ ನಿಜವಾದ ವೆಚ್ಚ ವಮೇ 15 ರ ಕಂತಿನ ವರೆಗೆ ಹೆಚ್ಚೆಂದರೆ ಜಿಡಿಪಿ ಯ 0.66%**
**** ಸರಕಾರ ಮಾಡುವ ಖರ್ಚು 16500 ದಿಂದ 25500 ಕೋಟಿ ರೂ. ಆಗಬಹುದು ಎಂದು ಅಂದಾಜು ಮಾಡಲಾಗಿದೆ.**
***** ಸರಕಾರ ಮಾಡುವ ಖರ್ಚು 5000 ದಿಂದ 14500 ಕೋಟಿ ರೂ. ಆಗಬಹುದು ಎಂದು ಅಂದಾಜು ಮಾಡಲಾಗಿದೆ.**

100

# ಧೀರೋದಾತ್ತ ತೆಭಾಗಾ ಹೋರಾಟ


ಪುಟ 11 ರಿಂದ

ಇದ್ದರು. ಈ ಚಳುವಳಿಯ ಅತ್ಯಂತ ಗಮನಾರ್ಹ ಅಂಶವೇನೆಂದರೆ ಅದು ವರ್ಗಹೋರಾಟ ಆಧಾರಿತ ಹಿಂದೂ-ಮುಸ್ಲಿಂ ಐಕ್ಯತೆಯ ದೀಪವನ್ನು ಬೆಳಗಿದ್ದು, ಮತ್ತು ಅದು ನೌಖಾಲಿಯನ್ನೂ ಒಳಗೊಂಡಂತೆ ಬಂಗಾಳದ ಎಲ್ಲಾ ಕಡೆಗಳಿಂದಲೂ ಎಲ್ಲಾ ಸಮುದಾಯಗಳ ಲಕ್ಷಾಂತರ ರೈತರನ್ನು ಹುರಿದುಂಬಿಸಿ ತನ್ನ ತೆಕ್ಕೆಗೆ ತೆಗೆದುಕೊಂಡದ್ದು.

ಬಂಗಾಳ ಮತ್ತು ಬಿಹಾರದ ಕೋಮು ಗಲಭೆಗಳನ್ನು ವಿರೋಧಿಸುವಲ್ಲಿ ತೆಭಾಗಾ ಚಳುವಳಿ ಮತ್ತು ಕಿಸಾನ್ ಸಭಾ ಅಸಾಧಾರಣವಾದ ಪಾತ್ರ ವಹಿಸಿದೆ. ಬಂಗಾಳದ ನೌಖಾಲಿ-ತಿಪ್ಪೇರಾ ಜಿಲ್ಲೆಯ ಪ್ರದೇಶಗಳಲ್ಲಿ ಕೋಮು ಗಲಭೆಗಳಾಗಲಿಲ್ಲ ಎನ್ನುವ ಅಂಶವನ್ನು ನಿರ್ದಿಷ್ಟವಾಗಿ ಗಮನಿಸಬೇಕು: ಅಲ್ಲಿ ಕಿಸಾನ್ ಸಭಾ ಸಾಕಷ್ಟು ಪ್ರಭಾವ ಹೊಂದಿತ್ತು. ಅಂತಹ ಪ್ರದೇಶಗಳಲ್ಲಿ, ಕಿಸಾನ್ ಸಭಾ ಮತ್ತು ತೆಭಾಗಾ ಚಳುವಳಿಯ ಕಾರ್ಯಕರ್ತರು ಪಕ್ಕದ ಗಲಭೆ ಪೀಡಿತ ಪ್ರದೇಶಗಳ ನಿರಾಶ್ರಿತರಿಗೆ ಪರಿಹಾರ ಕೇಂದ್ರಗಳನ್ನು ಸಂಘಟಿಸಿದರು. ಅದೇ ರೀತಿಯಲ್ಲಿ, ಬಿಹಾರದ ಮೊಂಘೈರ್ ಜಿಲ್ಲೆಯ ಮೋಘ್‌ಪುರದಲ್ಲಿ ಕಮ್ಯುನಿಸ್ಟ್ ಪಕ್ಷ, ಕಿಸಾನ್ ಸಭಾ ಮತ್ತು ಇತರ ಸಾಮೂಹಿಕ ಸಂಘಟನೆಗಳು ಗಲಭೆ ಪೀಡಿತ ಪ್ರದೇಶಗಳ ಜನರನ್ನು ರಕ್ಷಿಸಲು ಮತ್ತು ಕೋಮು ಗಲಭೆಗಳಿಂದ ಸಂತ್ರಸ್ತರಾದವರಿಗೆ ನೆರವು ನೀಡಲು ಪರಿಹಾರ ಕೇಂದ್ರಗಳನ್ನು ಸಂಘಟಿಸಿದ್ದರು. ಪಟ್ಟಣ ಮತ್ತು ಗ್ರಾಮೀಣ ಪ್ರದೇಶ ಎರಡೂ ಕಡೆಗಳಲ್ಲಿ, ಕಮ್ಯುನಿಸ್ಟ್ ಪಕ್ಷವು ಮುಂದೆ ನಿಂತು ಆ ಚಟುವಟಿಕೆಗಳಿಗೆ ನಾಯಕತ್ವ ನೀಡಿತು.

ಗಲಭೆಗಳನ್ನು ನಿಲ್ಲಿಸಿ ವಿವಿಧ ಸಮುದಾಯಗಳ ಜನರನ್ನು ಒಂದುಗೂಡಿಸಲು ಇರುವ ಒಂದೇ ಮಾರ್ಗವೆಂದರೆ ಬ್ರಿಟಿಷ್ ಆಳರಸರ ವಿರುದ್ಧ ಪಟ್ಟುಬಿಡದ ಹೋರಾಟ ನಡೆಸುವುದು ಮತ್ತು ಬಂಡವಾಳಶಾಹಿಗಳು ಹಾಗೂ ಭೂಮಾಲಕರ ವಿರುದ್ಧ ಕಾರ್ಮಿಕರು ಮತ್ತು ರೈತರನ್ನು ಅವರವರ ಬೇಡಿಕೆಗಳ ಆಧಾರದಲ್ಲಿ ಹೋರಾಟಕ್ಕೆ ಇಳಿಸುವುದು ಎಂದು ಕಮ್ಯುನಿಸ್ಟ್ ಪಕ್ಷ ಪರಿಗಣಿಸಿತು. ಆದರೆ ತನಗೆ ಸರಿ ಮತ್ತು ಸ್ಪಷ್ಟ ಎಂದೆನಿಸಿದ್ದನ್ನು ಕಾರ್ಯಾಚರಣೆಗೆ ಇಳಿಸಲು ಸಾಕಷ್ಟು ಶಕ್ತಿಯಿಲ್ಲದ ಕಾರಣ, ಭಾರತದ ರಾಜಕಾರಣವು, ಬ್ರಿಟಿಷ್ ಆಳರಸರು ಮತ್ತು ಕಾಂಗ್ರೆಸ್ ಹಾಗೂ ಲೀಗ್ ನಾಯಕರ ನಡುವಿನ ಆಖಾಡಾವಾಗಿದ್ದರಿಂದ ಒಂದು ಬಿಕ್ಕಟ್ಟಿನಿಂದ ಮತ್ತೊಂದಕ್ಕೆ ಚಲಿಸಿತು.

# ಆನ್-ಲೈನ್ ಶಿಕ್ಷಣ ಎಂದರೆ ಗಾಳಿಯಲ್ಲಿ ಗೋಪುರಗಳನ್ನು ಕಟ್ಟುವುದೇ?



**ಇಂಟರ್ನೆಟ್ ಸ್ಥಗಿತಗೊಳಿಸುವಿಕೆ ಸಾಮಾನ್ಯವಾಗಿರುವ, ಉತ್ತಮ ಗುಣಮಟ್ಟದ ಟೆಲಿಕಾಂ ನೆಟ್ ವರ್ಕ್ ಇನ್ನೂ ವಿರಳ ಮತ್ತು ಅಪರೂಪವಾಗಿರುವ ಹಾಗೂ ಮೊಬೈಲ್ ಫೋನ್ ಗಳನ್ನು ಹೊರತುಪಡಿಸಿ ಬೇರೆ ಯಾವ ಕಂಪ್ಯೂಟರ್ ಸಾಧನಗಳ ಬಳಕೆ ಅಸಾಧ್ಯವಾಗಿರುವ ನಮ್ಮ ದೇಶದಲ್ಲಿ ಆನ್-ಲೈನ್ ಕಲಿಕೆಯ ಅರ್ಥವೇ ಬಹುಶಃ ಬಹುಪಾಲು ವಿದ್ಯಾರ್ಥಿಗಳನ್ನು ಅದರಿಂದ ಹೊರಗಿಡುವುದು ಎಂದಾಗುತ್ತದೆ. ಕೊವಿದ್-19 ಬಿಕ್ಕಟ್ಟು ಅಂತಿಮವಾಗಿ ಕೊನೆಗೊಳ್ಳುತ್ತದೆ, ಆದರೆ ಶಿಕ್ಷಣ ಇಲಾಖೆ (MHRD) ಯ #BharathPhadeOnline (ಭಾರತ್ ಪಡೇ ಆನ್-ಲೈನ್) ಅಭಿಯಾನವು, ಆನ್ಲೈನ್ ಕಲಿಕೆಯ ಬಗ್ಗೆ ನೀತಿ ನಿರೂಪಕರ ಉತ್ಸಾಹವು ಕೊವಿದ್-19 ನಂತರದ ಅವಧಿಗೆ ವಿಸ್ತರಿಸುತ್ತದೆ ಎಂದು ಸೂಚಿಸುತ್ತದೆ. ಆದ್ದರಿಂದ, ತಂತ್ರಜ್ಞಾನಕ್ಕೆ ಪ್ರವೇಶವು, ಕೆಲವರ ಕೈಯಲ್ಲಿ ಜ್ಞಾನ ಮತ್ತು ಮಾಹಿತಿಯ ಹಕ್ಕನ್ನು ಮತ್ತಷ್ಟು ಕ್ರೋಡಿಕರಿಸುವತ್ತ ನಾವು ಸಾಗುತ್ತಿದ್ದೇವೆ ಎಂಬುದು ಸ್ಪಷ್ಟವಾಗುತ್ತಿದೆ.**

**ಸ್ವಾತಿ ಮೊಯಿತ್ರಾ** (ಮೂಲ : www. studentstruggle.in; ಅನು: **ಶೃತಿ ದಮ್ಮೂರು**)

"ಈ ದಿನಗಳಲ್ಲಿ, ಪ್ರತಿಯೊಬ್ಬರೂ ಸ್ಮಾರ್ಟ್ ಫೋನ್ ಮತ್ತು ಜಿಯೋ ಸಿಮ್ ಅನ್ನು ಹೊಂದಿದ್ದಾರೆ."

ನೀವು ಈ ಸಾಲನ್ನು ಅಥವಾ ಇದರ ಯಾವುದಾದರೂ ಆವೃತ್ತಿಯನ್ನು ಕೇಳಿರಬೇಕು. ನೀವೇ ಇದನ್ನು ಹೇಳಿರಬಹುದು ಸಹ. ಅಲ್ಲವೇ?

ಭಾರತದ 'ಸ್ಮಾರ್ಟ್ ಫೋನ್ ಕ್ರಾಂತಿ' ಮತ್ತು ಮೊಬೈಲ್ ಇಂಟರ್ನೆಟ್ ಅಗ್ಗದಲ್ಲಿ ಬಹುಜನರಿಗೆ ನಿಲುಕುವ ಬಗ್ಗೆ ಭಾರೀ ಉತ್ಸಾಹವು (ಭಾರತದಲ್ಲಿ ಡೇಟಾ ಬೆಲೆಯು ವಿಶ್ವದಲ್ಲೇ ಅತ್ಯಂತ ಕಡಿಮೆಯಿದೆ ಮತ್ತು ಇದು ಮುಂದುವರೆದಿದೆ), ಈ ವಿಷಯದ ಬಗ್ಗೆ ಸಾಕಷ್ಟು ಜನಪ್ರಿಯ ಬರವಣಿಗೆಯ ಸಾಮಾನ್ಯ ಅಂಶವಾಗಿದೆ. ಇದರಿಂದಾಗಿ ಈಗ ಜನಸಂಖ್ಯೆಯ ಹೆಚ್ಚಿನ ಭಾಗದ ಜನ 'ಡಿಜಿಟಲ್ ವಿಭಜನೆ'ಯ ಕಂದಕವನ್ನುದಾಟಿ ಜಿಗಿದಿದ್ದಾರೆ ಎಂದು ತಿಳಿಯುವುದು 'ಸಾಮಾನ್ಯ ಜ್ಞಾನ' ವಾಗಿ ಹೊರಹೊಮ್ಮಿದೆ. ವರದಿಗಳ ಪ್ರಕಾರ, ಭಾರತವು ಸುಮಾರು 50 ಕೋಟಿ ಸ್ಮಾರ್ಟ್ಫೋನ್ ಬಳಕೆದಾರರನ್ನು ಹೊಂದಿದೆ. ಬಳಕೆದಾರರ ದೊಡ್ಡ ವಿಭಾಗವು ಪ್ರಾಥಮಿಕ ಹಂತ (2ಜಿ/3ಜಿ)ದಲ್ಲಿದ್ದರೂ, 4ಜಿ/ಎಲ್.ಟಿ.ಇ ನೆಟ್ವರ್ಕ್ಗಳಲ್ಲಿ ಸಾಕಷ್ಟು ವಿಸ್ತರಣೆಯನ್ನು ಕಂಡಿದೆ. ಈ ಉತ್ಸಾಹವು ಸಂಪೂರ್ಣವಾಗಿ ನಿರಾಧಾರವಲ್ಲದ್ದಿದ್ದರೂ, ಸ್ಮಾರ್ಟ್ ಫೋನ್ ಕ್ರಾಂತಿ ಎಂಬುದು ಭಾರತದ ಉನ್ನತ ಶಿಕ್ಷಣದ ಭವಿಷ್ಯಕ್ಕಾಗಿ ಹೊಂದಿರುವ ಸಾಧ್ಯತೆಗಳ ಕುರಿತು ತಪ್ಪಾದ ತೀರ್ಮಾನಗಳಿಗೆ ಅನುವು ಮಾಡಿಕೊಟ್ಟಿದೆ. ಕೋವಿದ್-19 ಸಾಂಕ್ರಾಮಿಕವು ಈಗ ಕಟು ವಾಸ್ತವವನ್ನು ಎದುರಿಸಲು ಒತ್ತಾಯಿಸುತ್ತಿದೆ.

ಈ ದತ್ತಾಂಶವನ್ನು ಪರಿಗಣಿಸಿ: ಭಾರತದಲ್ಲಿ ಶಿಕ್ಷಣದ ಕುರಿತಾದ ಸಾಮಾಜಿಕ ಬಳಕೆಯ 75 ನೇ (ಜುಲೈ 2017-ಜೂನ್ 2018) ಎನ್.ಎಸ್.ಎಸ್ ಸಮೀಕ್ಷೆಯ ಪ್ರಕಾರ, ಪ್ರಮುಖ ಅಂಶಗಳು ಹೀಗಿವೆ : ಭಾರತದಲ್ಲಿ ಮನೆಯಲ್ಲಿ ಕಂಪ್ಯೂಟರ್ ಬಳಕೆಯು ರಾಷ್ಟ್ರೀಯ ಸರಾಸರಿ ಪ್ರಮಾಣವು 10.7% ರಷ್ಟಿದೆ, ಆದರೆ ಮನೆಗಳಲ್ಲಿ ಇಂಟರ್ನೆಟ್ ಬಳಕೆಯ(ಮೊಬೈಲ್ ಸಂಪರ್ಕಗಳು ಅಥವಾ ಸ್ಥಿರ ಲೈನುಗಳ ಮೂಲಕ) ರಾಷ್ಟ್ರೀಯ ಸರಾಸರಿ 23.8% ರಷ್ಟಿದೆ. ಇದರಲ್ಲಿ ನಗರದಲ್ಲಿನ ಜನಸಂಖ್ಯೆಯು ಸಿಂಹದ ಪಾಲನ್ನು ಹೊಂದಿದೆ, ಅವರ ಕಂಪ್ಯೂಟರ್ ಬಳಕೆಯು 23.4% ರಷ್ಟಿದೆ (ಗ್ರಾಮೀಣ ಭಾರತದಲ್ಲಿ ಕೇವಲ 4.4% ರಷ್ಟಿದೆ) ಮತ್ತು ನಗರಗಳಲ್ಲಿ ಇಂಟರ್ನೆಟ್ ಬಳಕೆಯು 42% ರಷ್ಟಿದೆ (ಇದಕ್ಕೆ ವಿರುದ್ಧವಾಗಿ ಗ್ರಾಮೀಣ ಭಾರತದಲ್ಲಿ ಕೇವಲ 14.9%) ದೆಹಲಿಯಲ್ಲಿ ಅತಿ ಹೆಚ್ಚು ಬಳಕೆ ಇದೆ. (ಅಲ್ಲಿ 'ಗ್ರಾಮೀಣ' ಪ್ರದೇಶಗಳನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುವುದಿಲ್ಲ, ಏಕೆಂದರೆ ಅವು ಒಂದೇ ನಗರ ಭೂದೃಶ್ಯವನ್ನು ಹೊಂದಿವೆ) ಕಂಪ್ಯೂಟರ್ ಬಳಕೆ 34.9% ಮತ್ತು ನೆಟ್ ಬಳಕೆ 55.9% ಇದೆ. ಪೂರ್ಣ ಪ್ರಮಾಣದ ರಾಜ್ಯಗಳಲ್ಲಿ, ಕಂಪ್ಯೂಟರ್ ಬಳಕೆ 23.5% ಮತ್ತು 51.3% ನೆಟ್ ಬಳಕೆ ಗಳೊಂದಿಗೆ ಕೇರಳವು ಮುಂದಿದೆ.

ಇಂಟರ್ನೆಟ್ ಡೇಟಾ ವೇಗವಾಗಿ ಹೆಚ್ಚುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು, ಎನ್.ಎಸ್.ಎಸ್ ನಡೆಸಿದ 76 ನೇ ಸುತ್ತಿನ ಎನ್.ಎಸ್.ಎಸ್ ಸಮೀಕ್ಷೆಯಲ್ಲಿ ಭಾರತದ ವಿವಿಧ ಭಾಗಗಳಲ್ಲಿ ಇಂಟರ್ನೆಟ್ ಸಂಪರ್ಕದ ಮತ್ತು ರಾಷ್ಟ್ರೀಯ ಸರಾಸರಿಗಳ ಗಮನಾರ್ಹ ಏರಿಕೆ ಕಾಣುತ್ತದೆ ಎಂದು ಭಾವಿಸಬಹುದು. ಆದರೆ, ಭಾರತದಲ್ಲಿ ಉನ್ನತ ಶಿಕ್ಷಣಕ್ಕೆ ಅದರಲ್ಲೂ ವಿಶೇಷವಾಗಿ COVID-19 ಬಿಕ್ಕಟ್ಟಿನ ನಂತರ ಆನ್-ಲೈನ್ ಶಿಕ್ಷಣದ ಮೇಲೆ ಒತ್ತು ಹೆಚ್ಚಿದ ಹಿನ್ನೆಲೆಯಲ್ಲಿ ಇದು ಸಾಕೇ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ.

ಕೊವಿದ್-19 ಬಿಕ್ಕಟ್ಟಿನಿಂದಾಗಿ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು ಭೌತಿಕವಾಗಿ ಭಾಗವಹಿಸುವ ತರಗತಿಗಳನ್ನು ಮುಚ್ಚುವಂತೆ ಒತ್ತಾಯಿಸಿದಾಗಿನಿಂದ, ಆನ್ಲೈನ್ ಶಿಕ್ಷಣವನ್ನು ತಾತ್ಕಾಲಿಕ ಪರಿಹಾರವಾಗಿ ಕಾಣಲಾಗಿತ್ತು. ಬೇರೆ ಬೇರೆ ವಿಶ್ವವಿದ್ಯಾನಿಲಯಗಳು ಪರಿಸ್ಥಿತಿಯನ್ನು ವಿಭಿನ್ನವಾಗಿ ನಿಭಾಯಿಸಿರಬಹುದು. ಯುಜಿಸಿ ಮತ್ತು ಶಿಕ್ಷಣ ಇಲಾಖೆ (ಎಮ್.ಎಚ್.ಆರ್.ಡಿ) ಆನ್-ಲೈನ್ ವಿಧಾನಗಳ ಮೂಲಕ ಪಠ್ಯಕ್ರಮವನ್ನು ಮುಂದುವರೆಸಲು ಪ್ರೋತ್ಸಾಹಿಸಿದೆ. ಒಬ್ಬ ಶಿಕ್ಷಣ ಕಾರ್ಯಕರ್ತಳಾಗಿ, ಇಂಟರ್ನೆಟ್ ಮತ್ತು ಮನೆಯಲ್ಲಿ ಕಂಪ್ಯೂಟರ್ ಬಳಕೆಯ ಬಗ್ಗೆ ಪ್ರಶ್ನೆಗಳು ನನಗೆ ವಿಶೇಷ ಕಾಳಜಿಯ ವಿಷಯವಾಗಿರಲಿಲ್ಲ, ಆದರೆ COVID-19 ಸಾಂಕ್ರಾಮಿಕವು ನನ್ನನ್ನು – ಮತ್ತು ನನ್ನ ಸ್ಥಾನದಲ್ಲಿರುವ ಅನೇಕರನ್ನು – ಭಾರತದ ಡಿಜಿಟಲ್ ಕಂದಕದ ವಾಸ್ತವಕ್ಕೆ ಮುಖಾಮುಖಿಯಾಗಿಸಿದೆ. ನಾವು ಜೂಮ್ ಮತ್ತು ಸ್ಕೈಪ್ ಸ್ಟೇಷನ್ಗಳನ್ನು ಬಳಸುತ್ತಾ ಆನ್ಲೈನ್ ಕಲಿಕೆಯ ಸಂತೋಷವನ್ನು ಮೆಲುಕು ಹಾಕುತ್ತಿದ್ದೇವೆ ಎಂದು ಹೇಳುತ್ತಿದ್ದರೂ, ಹಲವು ಆತಂಕಗಳಿಗೆ ಸಾಕ್ಷಿಯಾಗಬೇಕಾಗಿದೆ. ದೇಶಾದ್ಯಂತ ನನ್ನ ಸಹ ಅಧ್ಯಾಪಕರು, ತಮ್ಮ ಪಠ್ಯಪುಸ್ತಕಗಳಿಲ್ಲದೆ ಒದ್ದಾಡುತ್ತಿರುವ ಅಥವಾ ಅವರ ಕೈ ಬರಹದ ಅಸೈನ್ ಮೆಂಟ್ ನ್ನು ಮೊಬೈಲ್ ಸ್ಕ್ಯಾನ್ ಮಾಡಿ ಸಲ್ಲಿಸಬಹುದೇ ಎಂದು ಕೇಳಿದ ವಿದ್ಯಾರ್ಥಿಗಳ ಬಗ್ಗೆ ಮಾತನಾಡಿದ್ದಾರೆ. ಅಥವಾ ತಮ್ಮ ವೆಬ್ಕ್ಯಾಮ್ ಗಳ ಮೂಲಕ ಎಲ್ಲರಿಗೂ ತಮ್ಮ ಜರ್ಝರಿತ ಮನೆಗಳ ನೋಟವನ್ನು ನೀಡಲು ಮುಜುಗರಗೊಂಡ ವಿದ್ಯಾರ್ಥಿಗಳ ಕುರಿತು ಹೇಳಿದ್ದಾರೆ.

ನಾನು ಮಹಾನಗರ ಒಂದರಲ್ಲಿ, ನಗರದ ಒಂದು ಪ್ರಮುಖ ಸ್ಥಳದಲ್ಲಿ ಇರುವ ಸಾರ್ವಜನಿಕ-ಅನುದಾನದ ಸಂಸ್ಥೆಯಲ್ಲಿ ಕೆಲಸ ಮಾಡುತ್ತೇನೆ ಮತ್ತು ವೈವಿಧ್ಯಮಯ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದೇನೆ. ಇತರ ಸಾರ್ವಜನಿಕ-ಅನುದಾನಿತ ಸಂಸ್ಥೆಗಳಂತೆ, ಅವರಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಮೊದಲ ತಲೆಮಾರಿನ ಕಲಿಯುವವರು. ನನ್ನ ತರಗತಿಗಳು ಅವುಗಳ ಜಾತಿ ಮತ್ತು ವರ್ಗ ಸಂಯೋಜನೆಯ ವಿಷಯದಲ್ಲಿ ವೈವಿಧ್ಯಮಯವಾಗಿವೆ. ಪಶ್ಚಿಮ ಬಂಗಾಳದ ಶಾಲೆಗಳು ಮತ್ತು ಕಾಲೇಜುಗಳು ದೇಶದ ಇತರ ಭಾಗಗಳಂತೆ ಲಾಕ್ಡೌನ್ ಅನ್ನು ಅಧಿಕೃತವಾಗಿ ಪ್ರಾರಂಭಿಸುವ ಮೊದಲು ಮುಚ್ಚಲಾಯಿತು. ಪ್ರಪಂಚದಾದ್ಯಂತದ ಸಂಸ್ಥೆಗಳು ಇದೇ ರೀತಿಯ ನಿರ್ಧಾರಗಳನ್ನು ತೆಗೆದುಕೊಂಡ ನಂತರ, ಭಾರತದಲ್ಲಿ ಇಂತಹ ಬೆಳವಣಿಗೆಯನ್ನು ನಾನು ನಿರೀಕ್ಷಿಸಿದ್ದೆ. ಆದರೆ ನನ್ನ ಸಹೋದ್ಯೋಗಿಗಳು ಈ ಆನ್ಲೈನ್ ಪರಿವರ್ತನೆಗೆ ಸಾಕಷ್ಟು ಹೆಣಗಾಡಿದರು. ನನ್ನ ವಿದ್ಯಾರ್ಥಿಗಳು ಅಂತರ್ಜಾಲವನ್ನು ಹೇಗೆ ಬಳಸುತ್ತಾರೆ ಎಂಬ ಕಲ್ಪನೆಯನ್ನು ಪಡೆಯುವ ಆಶಯದೊಂದಿಗೆ, ನಾನು ಅವರಿಗೆ ಗೂಗಲ್ ಫಾರ್ಮ್ಗಳಲ್ಲಿ ಒಂದು ಸಣ್ಣ ಸಮೀಕ್ಷೆಯನ್ನು ತಯಾರಿಸಿ ಅದನ್ನು ಭರ್ತಿ ಮಾಡಲು ಕೇಳಿದೆ. ನಾನು ಸ್ವೀಕರಿಸಿದ 91 ಉತ್ತರಗಳಲ್ಲಿ (ಒಂದು ಸಣ್ಣ ಸ್ಯಾಂಪಲ್ ಆದರೂ) 69 ವಿದ್ಯಾರ್ಥಿಗಳು ಇಂಟರ್ನೆಟ್ ಪ್ರವೇಶಕ್ಕಾಗಿ ತಮ್ಮ ಮೊಬೈಲ್ ಫೋನ್ಗಳನ್ನು ಮಾತ್ರ ಅವಲಂಬಿಸಿದ್ದಾರೆ ಎಂದು ನನಗೆ ಮಾಹಿತಿ ನೀಡಿದರು. ಅವರಲ್ಲಿ ಹೆಚ್ಚಿನವರ ಮನೆಯಲ್ಲಿ ಸ್ಥಿರ ಲೈನ್ ಸಂಪರ್ಕಗಳು ಅಥವಾ ವೈಫೈ ಹೊಂದಿಲ್ಲ ಮತ್ತು ವೈಯಕ್ತಿಕ ಡೇಟಾ ಯೋಜನೆಗಳ ಮೇಲೆ ಅವಲಂಬಿತವಾಗಿದ್ದರು.. ಕೆಲವರು ತಮ್ಮ ಫೋನ್ಗಳನ್ನು ಆಗಾಗ ರೀಚಾರ್ಜ್ ಮಾಡುವ ಕಷ್ಟದ ಬಗ್ಗೆ ಸಾಕಷ್ಟು ಚಿಂತಿತರಾಗಿದ್ದರು.

ಸಮೀಕ್ಷೆಯನ್ನು ನೋಡುವಾಗ, ಜೂಮ್ ಅಥವಾ ಮೈಕ್ರೋಸಾಫ್ಟ್ ಟೀಮ್ಸ್ ಅಥವಾ ಗೂಗಲ್ ಹ್ಯಾಂಗ್ ಔಟ್ ಗಳಂತಹ ಅಪ್ಲಿಕೇಶನ್ ಗಳನ್ನು ಆಧರಿಸಿದ ಸಿಂಕ್ರೊನಸ್ ಕಲಿಕೆ ನನ್ನ ತರಗತಿಯಲ್ಲಿ ಸಾಧ್ಯವಿಲ್ಲ; ಅವು ಬಹುಸಂಖ್ಯಾತ ವಿದ್ಯಾರ್ಥಿಗಳನ್ನು ಹೊರಗಿಡುವ ಆಯ್ಕೆಯಾಗುತ್ತದೆ – ಎಂಬುದು ನನಗೆ ಆ ಸಮಯದಲ್ಲಿ ಸ್ಪಷ್ಟವಾಯಿತು. ಲಾಕ್ಡೌನ್ ಮುಂದುವರೆದಂತೆ, ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಕಳಪೆ ನೆಟ್ವರ್ಕ್ ಮತ್ತು ಡೇಟಾ ಬಳಕೆಯ ಕೊರತೆ ಬಗ್ಗೆ ಹಿಂಜರಿಯುತ್ತಾ ಮಾತನಾಡಿದ್ದರಿಂದ ನಾನು ಈ ನಿರ್ಧಾರದಲ್ಲಿ ದೃಢವಾಗಿದ್ದೆ. ನಾನು ಯೂಟ್ಯೂಬ್ ನಲ್ಲಿ ಉಪನ್ಯಾಸಗಳನ್ನು ಅಪ್ಲೋಡ್ ಮಾಡಿದ್ದೇನೆ ಮತ್ತು ಅವುಗಳನ್ನು ಇತರ ಓದುವ ಸಾಮಗ್ರಿಗಳೊಂದಿಗೆ ಗೂಗಲ್ ತರಗತಿಯಲ್ಲಿ ಹಂಚಿಕೊಂಡಿದ್ದೇನೆ. ಅವರು ತಮ್ಮನ್ನು ತಾವು ಸವಾಲು ಮಾಡಬಹುದಾದ ಕಾರ್ಯಯೋಜನೆಗಳನ್ನು ನಾನು ಹೊಂದಿಸಿದ್ದೇನೆ. ನಿಯಮಿತವಾಗಿ ಅವರಿಗೆ ಮಾನಸಿಕ ಆರೋಗ್ಯದ ಮತ್ತು ಸೋಂಕು ರಹಿತವಾಗಿರಿಸಲು ಡಿವೈಸುಗಳ ಮೇಲೆ ನೀಲಿ ಬೆಳಕಿನ ಫಿಲ್ಟರ್ಗಳನ್ನು ಹಾಕುವ ಕುರಿತು ಸಲಹೆ ನೀಡುತ್ತಿದ್ದೇನೆ.. ದುರದೃಷ್ಟವಶಾತ್, ಕಡಿಮೆ ಬ್ಯಾಂಡ್ವಿಡ್ತ್ ಆಯ್ಕೆಗಳ ಮೂಲಕ ಆನ್ಲೈನ್ ಬೋಧನೆ ಸಹ ತಾರತಮ್ಯದಿಂದ ಕೂಡಿತ್ತು. ಏಕೆಂದರೆ ನನ್ನ ವಿದ್ಯಾರ್ಥಿಗಳ ಒಂದು ವಿಭಾಗಕ್ಕೆ ತಮ್ಮ ಯಾವುದೇ ತಪ್ಪಿಲ್ಲದೆ ಸಹ ಈ ಆನ್ಲೈನ್ ಪ್ರವೇಶ ಸಹ ಸಾಧ್ಯವಾಗಲಿಲ್ಲ. ಹೀಗಾಗಿ, ಎಲ್ಲರ ಬೆರಳ ತುದಿಯಲ್ಲಿ ಕಲಿಯಲು ಅನುವು ಮಾಡಿಕೊಡುವ ಸ್ಮಾರ್ಟ್ಫೋನ್ ಕ್ರಾಂತಿಯ ಫ್ಯಾಂಟಸಿ ಕೇವಲ ಫ್ಯಾಂಟಸಿ ಯಾಗಿಯೇ ಉಳಿದಿದೆ. ಉನ್ನತ ಶಿಕ್ಷಣಕ್ಕೆ ಕಂಪ್ಯೂಟರ್ ಸಾಧನಗಳ ಲಭ್ಯತೆ ಮತ್ತು ಸಮಂಜಸವಾದ ಇಂಟರ್ನೆಟ್ ಸಂಪರ್ಕವು ಅತ್ಯಗತ್ಯವಿರುವಾಗ, ಸ್ಮಾರ್ಟ್ಫೋನ್ ಕ್ರಾಂತಿಯು ಉನ್ನತ ಶಿಕ್ಷಣದ ಮಟ್ಟಿಗಂತೂ ಯಾವುದೇ ಉದ್ದೇಶವನ್ನು ಪೂರೈಸದ ಒಂದು ವಿಲಕ್ಷಣ ಫ್ಯಾಂಟಸಿಯಷ್ಟೇ ಎಂಬುದು ನನಗೆ ಸ್ಪಷ್ಟವಾಗುತ್ತಾ ಹೋಯಿತು.

ಇಂಟರ್ನೆಟ್ ಸ್ಥಗಿತಗೊಳಿಸುವಿಕೆ ಸಾಮಾನ್ಯವಾಗಿರುವ (ಸಾಂಕ್ರಾಮಿಕದ ಮಧ್ಯದಲ್ಲಿಯೂ ಸಹ ಕಾಶ್ಮೀರದಲ್ಲಿ ಇನ್ನೂ 2 ಜಿ ಸಂಪರ್ಕಗಳಿಗೆ ಮಾತ್ರ ಅವಕಾಶವಿದೆ ಎಂಬುದನ್ನು ನಾವು ಗಮನಿಸಬೇಕು), ಉತ್ತಮ ಗುಣಮಟ್ಟದ ಟೆಲಿಕಾಂ ನೆಟ್ ವರ್ಕ್ ಇನ್ನೂ ವಿರಳ ಮತ್ತು ಅಪರೂಪವಾಗಿರುವ ಮತ್ತು ಮೊಬೈಲ್ ಫೋನ್ ಗಳನ್ನು ಹೊರತುಪಡಿಸಿ ಬೇರೆ ಯಾವ ಕಂಪ್ಯೂಟರ್ ಸಾಧನಗಳ ಬಳಕೆ ಅಸಾಧ್ಯವಾಗಿರುವ ನಮ್ಮ ದೇಶದಲ್ಲಿ ಆನ್-ಲೈನ್ ಕಲಿಕೆಯ ಅರ್ಥವೇ ಬಹುಶಃ ಬಹುಪಾಲು ವಿದ್ಯಾರ್ಥಿಗಳನ್ನು ಅದರಿಂದ ಹೊರಗಿಡುವುದು ಎಂದಾಗುತ್ತದೆ. ಕೊವಿದ್-19 ಬಿಕ್ಕಟ್ಟು ಅಂತಿಮವಾಗಿ ಕೊನೆಗೊಳ್ಳುತ್ತದೆ, ಆದರೆ ಶಿಕ್ಷಣ ಇಲಾಖೆ (MHRD) ಯ #BharathPhadeOnline (ಭಾರತ್ ಪಡೇ ಆನ್-ಲೈನ್) ಅಭಿಯಾನವು ಆನ್ಲೈನ್ ಕಲಿಕೆಯ ಬಗ್ಗೆ ನೀತಿ ನಿರೂಪಕರ ಉತ್ಸಾಹವು ಕೊವಿದ್-19 ನಂತರದ ಅವಧಿಗೆ ವಿಸ್ತರಿಸುತ್ತದೆ ಎಂದು ಸೂಚಿಸುತ್ತದೆ. ಆದ್ದರಿಂದ, ತಂತ್ರಜ್ಞಾನಕ್ಕೆ ಪ್ರವೇಶವು, ಕೆಲವರ ಕೈಯಲ್ಲಿ ಜ್ಞಾನ ಮತ್ತು ಮಾಹಿತಿಯ ಹಕ್ಕನ್ನು ಮತ್ತಷ್ಟು ಕ್ರೋಡಿಕರಿಸುವ ಕ್ರೋಡಿಕರಿಸುವತ್ತ ನಾವು ಸಾಗುತ್ತಿದ್ದೇವೆ ಎಂಬುದು ಸ್ಪಷ್ಟವಾಗಹತ್ತಿದೆ.

(*ಸ್ವಾತಿ ಮೊಯಿತ್ರಾ ಕೋಲ್ಕತ್ತಾದ ಕಾಲೇಜಿನಲ್ಲಿ ಇಂಗ್ಲಿಷ್ ಕಲಿಸುತ್ತಾರೆ. ಅವರನ್ನು swati.still@gmail.com ನಲ್ಲಿ ಸಂಪರ್ಕಿಸಬಹುದು.)

## ಭಾರತದಲ್ಲಿ 1918ರ ಸ್ಪಾನಿಶ್ ಫ್ಲೂ....... ಪುಟ 8 ರಿಂದ

ವಿಶ್ವೇಶ್ವರಯ್ಯನವರು ಎಚ್ಚರಿಕೆ ನೀಡಿದರು.

ಬೆಂಗಳೂರಿನ ಸಾಂಕ್ರಾಮಿಕ ರೋಗ ಆಸ್ಪತ್ರೆಗೆ ವಿಶೇಷ ವಾರ್ಡು ಸೇರಿಸಲಾಯಿತು. ತಾತ್ಕಾಲಿಕ ಆಸ್ಪತ್ರೆಯೊಂದನ್ನು ಮುನ್ಸಿಪಲ್ ಗಾರ್ಡನ್‌ನಲ್ಲಿ ರಚಿಸಲಾಯಿತು. ದೇಶಿಯ ಸಂಸ್ಥಾನಗಳ ಪೈಕಿ ಉತ್ತಮ ಆಡಳಿತವನ್ನು ನಡೆಸುತ್ತಿದ್ದ ಮೈಸೂರು ಸಂಸ್ಥಾನವು ಸಾಕಷ್ಟು ದಕ್ಷವಾಗಿಯೇ ಫ್ಲೂ ಪಿಡುಗನ್ನು ನಿಭಾಯಿಸಿತೆಂದು ಅಧ್ಯಯನಗಳು ತಿಳಿಸುತ್ತವೆ. ಆದಾಗ್ಯೂ ಗ್ರಾಮೀಣ ಪ್ರದೇಶಗಳಲ್ಲಿ ಪರಿಹಾರ ಕ್ರಮಗಳು ಅಷ್ಟೊಂದು ಯಶಸ್ವಿಯಾಗಿರಲಿಲ್ಲವೆಂದು ತಿಳಿದುಬರುತ್ತದೆ.

**ಕಲಿಯಬೇಕಾದ ಪಾಠಗಳು:**

ಒಂದು ಕಡೆ ಜನತೆಯ ಅದರಲ್ಲೂ ಬಡವರ ಕೆಳಸ್ತರದವರ ಜೀವದ ಬಗ್ಗೆ ಬ್ರಿಟಿಷ್ ವಸಾಹತುಶಾಹಿಯ ದಿವ್ಯ ನಿರ್ಲಕ್ಷ ಮತ್ತು ಅದರಿಂದಾದ ವ್ಯಾಪಕ ಸಾವುನೋವುಗಳು. ಇನ್ನೊಂದು ಕಡೆ ಸಾಪೇಕ್ಷವಾಗಿ ಮೈಸೂರು ಪ್ರಾಂತ್ಯದಲ್ಲಿ ಸಾಪೇಕ್ಷವಾಗಿ ಬಲಿಷ್ಟ ಆಡಳಿತಾತ್ಮಕ ಕ್ರಮಗಳು, ಸಾರ್ವಜನಿಕ ಆರೋಗ್ಯ ಮತ್ತು ಸ್ವಚ್ಛತೆಯ ಬಿಗಿಯಾದ ನಿರ್ವಹಣೆ, ಸಮಗ್ರವಾಗಿ ರೂಪಿಸುವ ಪರಿಹಾರ ಕ್ರಮಗಳು ಮತ್ತು ನಾಗರಿಕರು ಹಾಗೂ ಸೇವಾಸಂಸ್ಥೆಗಳ ಸಹಭಾಗಿತ್ವ ಮಾತ್ರವೇ ಎಂಥ ಭೀಕರ ಮಹಾಮಾರಿಯನ್ನು ತಡೆದು ನಿಲ್ಲಿಸಬಹುದು ಎಂಬ ಮಾದರಿಯೂ ಇತ್ತು.

ಇಂದು ಕೊರೊನಾ ಮಹಾಮಾರಿಯಲ್ಲಿ ಸಹ ಕೇಂದ್ರ ಮತ್ತು ಹೆಚ್ಚಿನ ರಾಜ್ಯ ಸರಕಾರಗಳು ಬಡವರ ಕೆಳಸ್ತರದವರ ಜೀವದ ಬಗ್ಗೆ ವಸಾಹತುಶಾಹಿಯ ತರಹದ್ದೇ ದಿವ್ಯ ನಿರ್ಲಕ್ಷ ತೋರಿಸುತ್ತಿದೆ. ಅದೇ ಸಮಯದಲ್ಲಿ ಕೇರಳ (1918ರಲ್ಲಿ ಮೈಸೂರಿನಂತೆ) ಇದಕ್ಕೆ ವಿರುದ್ಧವಾದ ಉತ್ತಮ ಮಾದರಿ ಹಾಕಿಕೊಟ್ಟಿರುವುದು ಕಂಡು ಬರುತ್ತದೆ.

1918ರ ಫ್ಲೂ ಪಿಡುಗಿನ ಬಗ್ಗೆ ಬ್ರಿಟಿಷ್ ವಸಾಹತುಶಾಹಿ ತೋರಿಸಿದ ದಿವ್ಯ ನಿರ್ಲಕ್ಷ ಮತ್ತು ಭಾರೀ ಸಾವುನೋವುಗಳು ಯುದ್ಧಾನಂತರ ಅದು ತೋರಿಸಿದ ದರ್ಪ ಇತ್ಯಾದಿ ಇತರ ಅಂಶಗಳೊಂದಿಗೆ ಸ್ವಾತಂತ್ರ್ಯ ಚಳುವಳಿಯ ಮೇಲೆ ಗಾಢ ಪರಿಣಾಮ ಬೀರಿತ್ತು. ಅದು ತೀವ್ರ ಮತ್ತು ವ್ಯಾಪಕಗೊಳ್ಳುವುದಕ್ಕೆ ಕಾರಣವಾಗಿತ್ತು. ಅದೇ ರೀತಿ ಇಂದು ಸಹ ಆಳುವ ವರ್ಗಗಳ ದಿವ್ಯ ನಿರ್ಲಕ್ಷ ಧೋರಣೆಯಿಂದಾಗಿ, ಅವುಗಳ ವಿರುದ್ಧ ಚಳುವಳಿ ತೀವ್ರಗೊಳ್ಳಲು ಕಾರಣವಾಗಬಹುದು.

ಇದು ಇಂದು ಅಂದರೆ 2020ರಲ್ಲಿ, 1918ರ ಸ್ಪಾನಿಶ್ ಇನ್‌ಫ್ಲೂಯೆಂಜಾ ಮಹಾಮಾರಿಯ ಚಾರಿತ್ರಿಕ ಹಿನ್ನೋಟದಿಂದ ಕಲಿಯಬಹುದಾದ ಪಾಠವಾಗಿದೆ.

JANASHAKTHI KANNADA VARA PATRIKE May 18-24, 2020 Price: Rs. 10/- Date of Publication: 15 May 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

# ಹಮಾಲಿ ಕಾರ್ಮಿಕರಿಗೂ ಆರ್ಥಿಕ ನೆರವು ನೀಡಲು ರಾಜ್ಯಾದ್ಯಂತ ಮಾರುಕಟ್ಟೆಗಳಲ್ಲಿ ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆ



















## ಜನಶಕ್ತಿ ಮೀಡಿಯಾ ಯೂಟ್ಯೂಬ್ ನಲ್ಲಿ




'ಜನಶಕ್ತಿ ಮೀಡಿಯಾ' ಯೂಟ್ಯೂಬ್ ಈಗ ಸಕ್ರಿಯವಾಗಿದ್ದು ಈ ವಾರ 24 ವಿಡಿಯೊಗಳನ್ನು ಅಪ್ ಲೋಡ್ ಮಾಡಲಾಗಿದೆ. ಈ ವಾರ ಅಪ್ ಲೋಡ್ ಮಾಡಲಾದ ಕೆಲವು ಪ್ರಮುಖ ವಿಡಿಯೊಗಳು ಹೀಗಿವೆ :

* ಎ.ಪಿ.ಎಂ.ಸಿ ಕಾಯಿದೆ ತಿದ್ದುಪಡಿಯಿಂದ ರೈತರಿಗಾಗುವ ಸಮಸ್ಯೆಗಳೇನು? (ಮೇ.15)
* 20 ಲಕ್ಷ ಕೋಟಿ ರೂ. ಪ್ಯಾಕೇಜ್ : ಅಂಕೆಸಂಖ್ಯೆಗಳ ಮಾಯಾಜಾಲ (ಮೇ.14)
* ಹೂ ಮಳೆ ಸಾಕು! ಪಿ.ಎಂ ಕೇರ್ ನಿಧಿ ಬೇಕು!! (ಮೇ.13)
* ಮಣಿವಣ್ಣನ್ ವರ್ಗಾವಣೆ, ಸರ್ಕಾರದ ನಡೆಗೆ ಆಕ್ರೋಶ (ಮೇ.12)
* ಕೆಲಸದ ಅವಧಿ ಹೆಚ್ಚಳ ವಿರೋಧಿಸಿ ಜೆ.ಸಿ.ಟಿ.ಯು ಪ್ರತಿಭಟನೆ (ಮೇ.11)
* ಕೊರೊನಾ ವಿರುದ್ಧದ ಸಮರದ ಮರೆಯಲ್ಲಿ ಕಾರ್ಮಿಕರ ಮೇಲೆ ದಾಳಿ (ಮೇ.10)
* ಆನ್-ಲೈನ್ ಶಿಕ್ಷಣದ ಸಾಧಕ-ಬಾಧಕಗಳು (ಮೇ. 9)

ಯೂಟ್ಯೂಬ್ ನಲ್ಲಿ **'Janashakthi Media'** ಎಂದು ಸರ್ಚ್ ಕೊಡಿ.
ನಂತರ ಅಲ್ಲಿ ಕಾಣುವ **'Subscribe'**ನ್ನು ಕ್ಲಿಕ್ ಮಾಡಿ.
ನಂತರದಲ್ಲಿ ಕಾಣುವ **'ಬೆಲ್ ಐ ಕಾನ್ ಬಟನ್'** ಒತ್ತಿ. ನಿರಂತರ ನೊಟೀಫಿಕೇಶನ್ ಬರುತ್ತದೆ.
ಈ ಮೂಲಕ ಜನಶಕ್ತಿ ಮೀಡಿಯಾ ಯೂಟ್ಯೂಬ್ ನ್ನು ಪ್ರೋತ್ಸಾಹಿಸಿ.

## ಬಾಬುವಿನ ಕನಸು

ಕವನ

ನಗರದ ಹೊರವಲಯದ ಜೂದಲ್ಲಿ
ಬಾಬುವಿನ ಕೆಲಸ
ಆನೆಯ ಲದ್ದಿ ಎತ್ತುವುದು
ಆನೆ ಲದ್ದಿ ಹಾಕಿದ ಹಾಗೆ
ಇವನು ಎತ್ತುತ್ತಲಿರಬೇಕು
ತಡ ಮಾಡುವಂತಿಲ್ಲ
ಜೂದ ಪ್ರತಿಷ್ಠೆಯ ಪ್ರಶ್ನೆ

ಬಂದವರು ಆನೆ ನೋಡುವರು
ಮಕ್ಕಳನ್ನೆತ್ತಿ
"ಅದೋ ನೋಡು ಆನೆ_
ಎರಡು ಕಡೆ ಬಾಲ !
ಹೇಗೆ ನಿಂತಿದೆ ಗಂಭೀರವಾಗಿ !
ರಾಜ ಮಹಾರಾಜರು
ಆನೆ ಮೇಲೆ ಕೂರುವರು
ನೀನೂ ಮಾಡುತ್ತೀಯಾ ಸವಾರಿ ?"
ಅನ್ನುವರು

ಮಕ್ಕಳು ನಲಿದಾಡುವರು
ಬಾಬು
ಬಣ್ಣದ ಅಂಗಿ ತೊಟ್ಟ
ಮಕ್ಕಳನ್ನು ನೋಡುವನು
ಕೈಯಲ್ಲಿ ಲದ್ದಿ ಗೆರಸಿ ಹಿಡಿದಿರುವನು
ಅವನು ಅಂದುಕೊಳ್ಳುವನು :

ಮರುಜನ್ಮ ಎಂದೊಂದು ಇದ್ದರೆ
ಅದು ನನಗೆ ಸಿಕ್ಕರೆ
ನಾನಾಗಬೇಕು ಆನೆ
ಗಾಂಭೀರ್ಯದಿಂದ
ನಾನಾಡಿಸುತ್ತಿದ್ದರೆ ಸೊಂಡಿಲು
ಚಪ್ಪಾಳೆ ತಟ್ಟಿ
ಹಿರಿ ಹಿರಿ ಹಿಗ್ಗಬೇಕು
ಬಣ್ಣದಂಗಿಯ ಮಕ್ಕಳು

ಆದರೆ
ಬಾಬು ಆನೆಯಾದರೆ
ಲದ್ದಿ ಎತ್ತುವವರು ಯಾರು ?
'ಬಾಬು' ಯಾರಾಗಬೇಕು ?

ಜಗತ್ತಿಗೆ ಇದು ಅರ್ಥವಾಗಲು
ಇನ್ನೂ ಎಷ್ಟು ಸಮಯ ಬೇಕು ?

–ಡಾ. ಚಿಂತಾಮಣಿ ಕೂಡ್ಲಕೆರೆ

**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**